ಸಂಪುಟ 15
ಸಂಚಿಕೆ 13

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

4 ಏಪ್ರಿಲ್ 1993
ರೂ 2.00

ಒಳಪುಟಗಳಲ್ಲಿ

ಕಾಂಗ್ರೆಸ್ ಒಳಗಿನ ಸರ್ವಾಧಿಕಾರದ ವಿರುದ್ಧ

ಬೆಳೆಯುತ್ತಿರುವ ಪ್ರತಿರೋಧ

ತಿರುಪತಿಯಿಂದ ಸೂರಜ್‌ಕುಂಡ್‌ಗೆ ಕಾಂಗ್ರೆಸ್ ಯಾತ್ರೆ

ಡಿ.6ರ ಕರಾಳದಿನ ದೇಶವನ್ನೆಲ್ಲಾ ಕವಡಿ ರಕ್ತಮಯು ಮಾಡಿವ ಮೂರು ತಿಂಗಳು 20 ದಿನಗಳ ನಂತರ ಇಂದು ಕಾಂಗ್ರೆಸ್‌ನ ಉನ್ನತ ಅಧಿವೇಶನ(ಎ.ಐ.ಸಿ.ಸಿ) ಹರಿಯಾಣದ ಸೂರಜ್‌ಕುಂಡ್‌ನಲ್ಲಿ ಸೇರಲಿದೆ. ಅದು ಕೂಡಾ ಕೇಂದ್ರ ಕಾಂಗ್ರೆ ಸರ್ಕಾರ ಆ ಘಟನೆಯನ್ನು ನಂತರದ ಕೋಮುದಳ್ಳುರಿಯನ್ನು ಮತ್ತೇ ಅಧಿಕಾರಕ್ಕೆ ಬಿ.ಜೆ.ಪಿ. ಹಾಕುತ್ತಿರುವ ಲಗ್ಗೆಯನ್ನು ಕಂಡು ಸಂತಪ್ತರಾದ ಕೆಲ ಕಾಂಗ್ರೆಸ್ಸಿಗರು ಎ.ಐ.ಸಿ. ಸಿ ಅಧಿವೇಶನ ಸೇರದೇಕೆಂದು ಒತ್ತಾಯಿಸಿದ ನಂತರ ಅನಿವಾರ್ಯವೆಂಬಂತೆ ಮಣಿದು ಈ ಸಭೆಯನ್ನು ಸೇರಿಸಲಾಗುತ್ತಿದೆ.

ಈ ಅಧಿವೇಶನ ಸೇರುವ ಸಮಯದಲ್ಲಿ ಕಾಂಗ್ರೆ ಪಕ್ಷದೊಳಗಿನ ಸರ್ವಾಧಿಕಾರದ ವಿರುದ್ಧ ಹೋರಾಟ ತೀವ್ರವಾಗುತ್ತಿದೆ. "ಒಬ್ಬ ವ್ಯಕ್ತಿಗೆ ಒಂದೇ ಪದವಿ" 'ನರಸಿಂಹರಾವ್ ಪ್ರಧಾನಿಯಾಗಿರುವಾಗಲೇ ಕಾಂಗ್ರೆ ಅಧ್ಯಕ್ಷರು ಆಗಿರಕೂಡದು' ಎಂಬ ಘೋಷಣೆಯ ಮೇಲೆ ನಡೆಯುತ್ತಿರುವ ಈ ಹೋರಾಟಕ್ಕೆ ಕಾಂಗ್ರೆಯೊಳಗಿನ ಗುಂಪು ಕಚ್ಚಾಟದ ನೆರಳಿದ್ದರೂ ಕೂಡ ಇದು ಇಂದಿರಾಗಾಂಧಿ ಆರಂಭಿಸಿದ ಸರ್ವಾಧಿಕಾರಿ ಮುಷ್ಠಿಯಿಂದ ಬಿಡಿಸಿಕೊಳ್ಳಲು ನಡೆಯುತ್ತಿರುವ ಹೋರಾಟ ಎಂಬುವಂತೂ ಸತ್ಯ

ಹಿಂದಿನ ತಿರುಪತಿ ಎ.ಐ.ಸಿ.ಸಿ. ಅಧಿವೇಶನದಲ್ಲಿಯೇ ಕಾಂಗ್ರೆ ಕಾರ್ಯಕಾರಿ ಸಮಿತಿಗೆ ನಡೆದ ಚುನಾವಣೆಯು ಹಾಗೂ ಅವುಗಳಲ್ಲಿ ಅರ್ಜುನ್ ಸಿಂಗ್ ಹಾಗೂ ಶರದ್ ಪವಾರ್ ಅತ್ಯಧಿಕ ಮತಗಳನ್ನು ಪಡೆಯುವುದರ ಮೂಲಕ ಈ ಕ್ರಿಯೆ ಆರಂಭವಾಯಿತು. ಈ ಚುನಾವಣೆ ನಡೆಯದಂತೆ ತಡೆದು ಮತ್ತೆ ಸರ್ವಾನುಮತದ ಹೆಸರಿನಲ್ಲಿ ಸರ್ವಾಧಿಕಾರಿ ಶಕ್ತಿಗಳು ಕಾಂಗ್ರೆಸ್ ಮೇಲೆ ತಮ್ಮ ಬಿಗಿ ಹಿಡಿತವನ್ನು ಉಳಿಸಿಕೊಳ್ಳದೇಕೆಂಬ ಸಂಚು ಫಲಕಾರಿಯಾಗಲಿಲ್ಲ. ಚುನಾವಣೆ ನಡೆದೇ ನಡೆಯಿತು.

ಆದರೆ ಎ.ಐ.ಸಿ.ಸಿ. ಅಧಿವೇಶನ ಮುಗಿದ ತಕ್ಷಣದಲ್ಲಿ ಚುನಾವಣೆಯಲ್ಲಿ ಅರ್ಜುನ್‌ಸಿಂಗ್ ಮತ್ತು ಪವಾರ್‌ರಂತಹ ಶಕ್ತಿಗಳು ಅತ್ಯಧಿಕ ಬಹುಮತಗಳಿಸಿ ಪ್ರಧಾನ ಮಂತ್ರಿಗಳ ಚೇಲಾಗಳು ಕಡಿಮೆ ಮತಗಳಿಸಿದ್ದು, ಕೆಲವರು ಸೋತಿದ್ದು ಈ ಎಲ್ಲವೂ ಈ ಸರ್ವಾಧಿಕಾರಿ ಶಕ್ತಿಗಳಿಗೆ ಗಾಬರಿಯನ್ನೇ ಉಂಟುಮಾಡಿತು ಮತ್ತೆ ಸರ್ವಾಧಿಕಾರಿಶಕ್ತಿಗಳು ಪ್ರಬಲವಾಗುವ ಒಳ ಸಂಚುಗಳು ನಡೆದವು. ಹರಿಜನರಿಗೂ ಹಿಂದುಳಿದವರಿಗೆ ಮಹಿಳೆಯರಿಗೆ ಪ್ರಾತಿನಿಧ್ಯ ಸಿಕ್ಕಿಲ್ಲ ಎನ್ನುವ ಹೆಸರಿನಲ್ಲಿ ಚುನಾಯಿತರೆಲ್ಲರೂ ರಾಜಿನಾಮೆ ನೀಡಿ ಎಲ್ಲರೂ ಕಾಂಗ್ರೆಸ್ ಅಧ್ಯಕ್ಷರಿಂದ ನಾಮಕರಣ ಹೊಂದುವ ನಾಟಕ ನಡೆಯಿತು. ಮತ್ತು ಈ ಚುನಾವಣೆಯ ಮುಂದಿನ ಹಂತವಾದ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡ್‌ನ ರಚನೆ, ಚುನಾವಣಾ ಉಪಸಮಿತಿಯ ರಚನೆ ಆಗಲೇ ಇಲ್ಲ. ಈ ಎಲ್ಲ ಅಧಿಕಾರವೂ ಪ್ರಧಾನ ಮಂತ್ರಿಯೂ ಆದ ಕಾಂಗ್ರೆಸ್ ಅಧ್ಯಕ್ಷರ ಮುಷ್ಠಿಯಲ್ಲಿಯೇ ಉಳಿಯಿತು. ಕರ್ನಾಟಕ, ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಬದಲಾವಣೆ ನರಸಿಂಹರಾಯರ ಇಚ್ಛೆಯಂತೆಯೇ ಆಗಬೇಕಾಯಿತು.

ಡಿ. 6 ರ ಘಟನೆ ನಡೆಯುತ್ತಿರುವಾಗ, ನಡೆದ ನಂತರ ಕಾಂಗ್ರೆಸ್ ಸರ್ಕಾರ ಹಾಗೂ ಕಾಂಗ್ರೆಸ್ ಪಕ್ಷ ತೋರಿದ ನಿರ್ವೀರ್ಯತೆ ಹಾಗೂ ಬಿಜೆಪಿಯ ಆಕ್ರಮಣಶೀಲತೆ ದೇಶಾದ್ಯಂತ ಅನೇಕ ಕಾಂಗ್ರೆಸ್ ಕಾರ್ಯಕರ್ತರಿಗೆ ದೇಶದ ಭವಿಷ್ಯದ ಬಗ್ಗೆ ಚಿಂತಿತರಾಗುವಂತೆ ಅದಕ್ಕಿಂತ ಹೆಚ್ಚಾಗಿ ಕಾಂಗ್ರೆಸ್ ಪಕ್ಷದ ಭವಿಷ್ಯದ ಬಗ್ಗೆ ಗಾಬರಿಯಾಗುವಂತೆ ಮಾಡಿದೆ. ಕೇಂದ್ರ ಸರ್ಕಾರಕ್ಕೆ ದೇಶದ ಜಾತ್ಯಾತೀತ ಸ್ವರೂಪವನ್ನು ರಕ್ಷಿಸುವ ಯಾವ ಹೊಣೆಯೂ ಇಲ್ಲವೆಂಬಂತೆ, ಇತರರ ಒತ್ತಾಯದಿಂದ ಬಲವಂತದಿಂದಲೆಂಬವತೆ ಕಾಟಾಚಾರಕ್ಕೆ ಕೈಗೊಳ್ಳುತ್ತಿರುವ ಆರ್.ಎಸ್.ಎಸ್. ನಿಷೇಧ, ಬಿಜೆಪಿ ನಾಯಕರ ಬಂಧನ, ಅಯೋಧ್ಯಾ ಘಟನೆಯ ತನಿಖೆಗಳು ಕೇಂದ್ರ ನಾಯಕತ್ವವನ್ನು ಪ್ರಶ್ನಿಸುವಂತೆ ಮಾಡಿವೆ. ಅದರಲ್ಲಿಯೂ ಉತ್ತರ ಹಿಂದೂಸ್ಥಾನದ ಬಿಜೆಪಿ ಆಡಳಿತದಲ್ಲಿದ್ದ ರಾಜ್ಯಗಳ ನಾಯಕರಿಗಂತೂ ತಮ್ಮ ಭವಿಷ್ಯವೇನು ಎಂದು ಚಿಂತಿಸುವಂತೆಮಾಡಿದೆ.

ಈ ಹಿನ್ನೆಲೆಯಲ್ಲಿ ಮತ್ತೆ ಮತ್ತೆ ಕಾಂಗ್ರೆಸ್ ಪಕ್ಷದೊಳಗೆ ಕೋಮುವಾದವನ್ನೆದುರಿಸುವ ಕ್ರಿಯಾಶೀಲ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂಬ ಒತ್ತಾಯಗಳು ಅವನ್ನು ಎದುರಿಸಲು ಸಿದ್ಧವಿಲ್ಲದ ಹಾಗೂ ನಾಯಕತ್ವದ ನಡುವೆ ಘರ್ಷಣೆ ಹೆಚ್ಚುತ್ತಿದೆ. ಈ ಮಧ್ಯೆ ಕೋಮುವಾದದಿಂದ ತೀವ್ರವಾಗಿ ಪೀಡಿತವಾದ ಮಧ್ಯಪ್ರದೇಶ ರಾಜ್ಯದಿಂದ ಬಂದಿರುವ ಅರ್ಜುನ್‌ಸಿಂಗ್‌ರವರು ಬಿಜೆಪಿಯ ವಿರುದ್ಧ ಹೋರಾಟವನ್ನು ಲೋಕಸಭೆಯಲ್ಲಿ ತಿರುಪತಿ ಅಧಿವೇಶನಕ್ಕೂ ಮೊದಲೇ ಆರಂಭಿಸಿದ್ದರ ಫಲ ತಿರುಪತಿ ಎ.ಐ.ಸಿ.ಸಿ ಅಧಿವೇಶನ ಕೋಮುವಾದೀ ಶಕ್ತಿಗಳನ್ನು ಕಾಂಗ್ರೆಸ್ ಎದುರಿಸಬೇಕು ಎಂಬ ನಿರ್ಣಯ ಕೈಗೊಳ್ಳುವಂತೆ ಮಾಡಿತ್ತು. ಈಗ ಆ ನಿರ್ಣಯವನ್ನು ವಾಸ್ತವದಲ್ಲಿ ಪಾಲಿಸಲಾಗಿದೆಯೆ? ಕಾಂಗ್ರೆಸ್ ಅದರಂತೆ ನಡೆದಿದೆಯೆ? ಹಾಗಾದರೆ ಕೋಮುವಾದೀ ಶಕ್ತಿಗಳ ಬೆಳವಣಿಗೆ ಹೇಗಾಯಿತು? ಎಂಬ ಪ್ರಶ್ನೆಗಳನ್ನು ಬಹುತೇಕ ಉತ್ತ

ಪುಟ 8ಕ್ಕೆ

ರಕ್ಷಕರೇ ಭಕ್ಷಕರಾದರೇ?

ಶ್ರೀಮಂತರಿಗೆ 'ಆಶ್ರಯ'

ಮಂತ್ರಿ ಕೃಷ್ಣಪ್ಪ ಹಾಗೂ ಭ್ರಷ್ಟ ಜಿಲ್ಲಾಧಿಕಾರಿಗಳ ಮಸಲತ್ತು

ಬೆಂಗಳೂರಿನಿಂದ 18 ಕಿ.ಮಿ. ದೂರದ ಹೂಡಿ ಗ್ರಾಮ ವರ್ತೂರು ವಿಧಾನಸಭಾ ಕ್ಷೇತ್ರದ ಒಂದು ಗ್ರಾಮ. ಇಲ್ಲಿ "ಆಶ್ರಯ"ಯೊಜನೆಯ ಹೆಸರಲ್ಲಿ, ಕಾರು, ಬಂಗಲೆ ಮಾಲಿಕರಿಗೆ, ಜಮೀಂದಾರರಿಗೆ, ಆಗಲೇ ಮನೆ, ಸೈಟುಗಳಿರುವ ನೌಕರರಿಗೆ ನಿವೇಶನ ನೀಡಿರುವ, ಅಂಗವಿಕಲರು, ಹರಿಜನ-ಗಿರಿಜನರ ಹೆಸರಿನಲ್ಲಿ ನಿವೇಶನ ನೀಡಿರುವ ಕೋಟ್ಯಾಂತರ ರೂಪಾಯಿಗಳ ಭ್ರಷ್ಟಚಾರ, ಅಕ್ರಮಗಳನ್ನು ಪ್ರತಿಭಟಿಸಿ ಮಾರ್ಚ್ 18 ರಿಂದ ಧರಣಿ ನಡೆಸುತ್ತಿದ್ದ ಹೂಡಿ ಗ್ರಾಮಸ್ಥರ ಮೇಲೆ ಭಾನುವಾರ ಮಾರ್ಚ್ 21 ರಂದು ಡಿ.ಸಿ.ಪಿ. ಕೆಂಪಯ್ಯ ಹಾಗೂ ಜಿಲ್ಲೆಧಿಕಾರಿ ಹಾಲಪ್ಪನವರ ನೇತೃತ್ವದಲ್ಲಿ ಪೋಲೀಸರು ಲಾಠಿ ಪ್ರಹಾರ ನಡೆಸಿ, ಅಶ್ರುವಾಯು ಶೆಲ್‌ಗಳನ್ನು ಸಿಡಿಸಿ ಈಗ ಮಂತ್ರಿಯಾಗಿರುವ ಈ ಕ್ಷೇತ್ರದ ಶಾಸಕ ಎ. ಕೃಷ್ಣಪ್ಪ ಹಾಗೂ ಈ ಇಬ್ಬರು ಅಧಿಕಾರಿಗಳು ಭ್ರಷ್ಟ ಪಿತೂರಿಗಳನ್ನು ಮತ್ತೊಮ್ಮೆ ಸಾಬೀತುಪಡಿಸಿಕೊಂಡಿದ್ದಾರೆ. ಈ ದೌರ್ಜನ್ಯದಲ್ಲಿ 12 ವರ್ಷದ ಹುಡುಗಿಯು ಸೇರಿದಂತೆ ಹಲವರಿಗೆ ಗಾಯಗಳಾಗಿವೆ ಸುಮಾರು ಎರಡು ಸಾವಿರ ಗುಡಿಸಲುಗಳಿಗೆ ಬೆಂಕಿಗೆ ಆಹುತಿಯಾದವು. ಪೋಲೀಸರು 52 ಮಂದಿಯನ್ನು ಬಂಧಿಸಿದರು. ಪೋಲೀಸರೇ ಗುಡಿಸಲುಗಳು ಬೆಂಕಿ ಹಚ್ಚಿದರು, ಪಾತ್ರೆ, ಬಟ್ಟೆ-ಬರೆ ಇತ್ಯಾದಿ ಈ ಬೆಂಕಿಗೆ ಆಹುತಿಯಾದವು ಎಂದು ಗ್ರಾಮಸ್ಥರು ಪತ್ರಕರ್ತರಲ್ಲಿ ತಮ್ಮ ಸಂಕಟಗಳನ್ನು ತೋಡಿಕೊಂಡರು ಕತ್ತಲಲ್ಲಿ ಕುಳಿತು ಸುಟ್ಟ ಬೂದಿಯಲ್ಲಿ ಅಳಿದುಳಿದ ವಸ್ತುಗಳನ್ನು ಹೆಕ್ಕುತ್ತಿದ್ದ ಬಡಕಲು ದೇಹದ ಮಹಿಳೆ ಪೋಲೀಸರು ನನ್ನ ಎದೆಗೆ ಬೂಟುಗಾಲಿನಿಂದ ಒದ್ದರು, ನಮ್ಮ ಜನರನ್ನು ಚೆನ್ನಾಗಿ ಥಳಿಸಿದರು, ಮನೆಯೊಳಗಿದ್ದವರನ್ನು ಎಳೆದು ತಂದು ಹೊಡೆದರು ಎಂದಾಗ ಆಕೆಯ ಹೆಪ್ಪುಗಟ್ಟಿದ್ದ ಆಕೆಯ ದುಃಖ ನೀರಾಗಿ ಹರಿಯಿತು ಎಂದಿದ್ದಾರೆ 'ಪ್ರಜಾವಾಣಿ' ವರದಿಗಾರರು. ಪೋಲೀಸರು ಪ್ರತಿಭಟನಾಕಾರರ ವೇದಿಕೆಯನ್ನು ಮುರಿದು ಹಲವಾರು ಗುಡಿಸಲುಗಳಿಗೆ ಬೆಂಕಿಯಿಟ್ಟು ಹೆಂಗಸರು-ಮಕ್ಕಳು ಎಂಬ ತಾರತಮ್ಯವೂ ಇಲ್ಲದೆ ಸುಮಾರು ಒಂದು ಕಿಲೋಮಿಟರ್ ದೂರದವರೆಗೂ ಅಟ್ಟಿಸಿಕೊಂಡು ಹೋದರು ಎಂದು ವರದಿಯಾಗಿದೆ.

ಮರುದಿನ ವಿಧಾನಸಭೆಯಲ್ಲಿ ಈ ದೌರ್ಜನ್ಯ ಪ್ರತಿಧ್ವನಿಸಿದಾಗ ಈ ಘಟನೆಯ ಬಗ್ಗೆ ಬೆಂಗಳೂರು ವಿಭಾಗಾಧಿಕಾರಿಗಳಿಂದ ತನಿಖೆ ನಡೆಸುವುದಾಗಿ ಭರವಸೆ ನೀಡಬೇಕಾಯಿತು ಹಿಂದಿನ ಸರಕಾರ ಆದೇಶಿಸಿದ ಇಂತಹ ತನಿಖೆಯನ್ನು ಆಜ್ಞೆಯನ್ನು ಹಿಂತೆಗೆದುಕೊಂಡಿದ್ದ ಮುಖ್ಯಮಂತ್ರಿಗಳೇ!

ಕಳೆದ ವರ್ಷ - ಅಕ್ಟೋಬರ್‌ನಲ್ಲಿ ಹೂಡಿ ಗ್ರಾಮದಲ್ಲಿ ಅನೇಕ ವರ್ಷಗಳಿಂದ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದವರನ್ನು ಒಕ್ಕಲೆಬ್ಬಿಸಿ, ಸುಮಾರು 240 ಎಕ್ರೆ ಜಮೀನಿನಲ್ಲಿ ದಲಿತರನ್ನು, ಬಡರೈತರನ್ನು ಒಕ್ಕಲೆಬ್ಬಿಸಿ ಪರ್ಯಾಯ ವ್ಯವಸ್ಥೆ ಮಾಡದೇ ಸ್ಥಳೀಯ ನಿರ್ವಸಿತರಿಗೂ ನಿವೇಶನ ಕೊಡದೆ "ಆಶ್ರಯ" ಯೋಜನೆಯಲ್ಲಿ ಸರ್ಕಾರದ ನೀತಿ-ನಿಯಮಗಳನ್ನು ಉಲ್ಲಂಘಿಸಿ ಭ್ರಷ್ಟಾಚಾರದಲ್ಲಿ ತೊಡಗಿರುವುದನ್ನು ಪ್ರತಿಭಟಿಸಿದಾಗ ಇದೇ ಜಿಲ್ಲಾಧಿಕಾರಿ ಹಾಲಪ್ಪನವರ ನೇತೃತ್ವದಲ್ಲಿ ಲಾಠಿ ಪ್ರಹಾರ ನಡೆಸಲಾಯಿತು. ಆದರೂ ಹಿಮ್ಮೆಟ್ಟದ ಗ್ರಾಮಸ್ಥರು 'ಹೂಡಿ ಮತ್ತು ದಾಖಲೆ ಗ್ರಾಮಗಳ ಬಗರ್‌ಹುಕುಂ ಸಾಗುವಳಿದಾರರ ಹಾಗೂ ನಿವೇಶನ ರಹಿತರ ಹೋರಾಟ ಸಮಿತಿ' ರಚಿಸಿಕೊಂಡು ಹೋರಾಟ ಮುಂದುವರೆಸಿದರು. ಸಿಪಿಐ(ಎಂ), ದಲಿತ ಸಂಘರ್ಷ ಸಮಿತಿ,


ಪುಟ 8ಕ್ಕೆ

ವಾರದ ನುಡಿ

ನಾಗಪುರದಲ್ಲಿ 1925 ರಲ್ಲಿ ಆರ್.ಎಸ್.ಎಸ್. ಹಿಂದೂಗಳ ಹೆಸರಲ್ಲಿ ಸ್ಥಾಪನೆಯಾಗುತ್ತಿದ್ದಾಗ 1926 ರಲ್ಲಿ ಲಾಹೋರಿನಲ್ಲಿ ಭಗತ್‌ಸಿಂಗ್ ಸಂಗಾತಿಗಳು ಜಾತ್ಯತೀತ, ವರ್ಗರಹಿತ ಸಮಾಜದ ಸ್ಥಾಪನೆಗೆ ಯುವಜನ, ವಿದ್ಯಾರ್ಥಿಗಳು, ರೈತ ಕಾರ್ಮಿಕರನ್ನು ಅಣಿನೆರೆಸಲು ನೌಜವಾನ್ ಭಾರತ್ ಸಭಾ ಸ್ಥಾಪನೆಯಲ್ಲಿ ನಿರತರಾಗಿದ್ದರು. ಈಗ ಸಂಘಪರಿವಾರ ಅದೇ ಭಗತ್‌ಸಿಂಗರ ಹೆಸರಿನಲ್ಲಿ ತಮ್ಮ ಪಂಗಡಕ್ಕೆ ಎಳೆಯುವ ಪ್ರಯತ್ನ ನಡೆಸಿದ್ದಾರೆ. ಭಗತ್‌ಸಿಂಗ್ ಮತ್ತು ಅವರ ಸಂಗಾತಿಗಳು ಜಾತಿ-ಮತಗಳ ಭೇದ ಅಳಿಸಲು ಮಾಂಸದ ಅಡಿಗೆಯೂ ಇದ್ದ ಸಹಭೋಜನ ನಡೆಸುತ್ತಿದ್ದರು ಎಂಬುದನ್ನು ಮರೆಮಾಚುತ್ತಿದ್ದಾರೆ.

ಪ್ರೋ. ಇರ್ಫಾನ್ ಹಬೀಬ್
ಖ್ಯಾತ ಇತಿಹಾಸಕಾರ

"ದೂರದರ್ಶನ ನೀತಿ-ಉಚ್ಚ ತಂತ್ರಜ್ಞಾನ-ಪಾಳೇಗಾರಿ ತಂತ್ರಜ್ಞಾನ" "ದೂರದರ್ಶನ: ಮಹಿಳೆಯರ ಮನೆಕೆಲಸದ ಪಾತ್ರದ ಭವ್ಯೀಕರಣ ನಿಲ್ಲಿಸಿ", "ಮಹಿಳೆಯರು ಸರಕುಗಳಲ್ಲ", "ಸರಕುಗಳ ಮಾರಟಕ್ಕೆ ಮಹಿಳೆಯರ ದೇಹದ ಬಳಕೆ ನಿಲ್ಲಿಸಿ" ಇತ್ಯಾದಿ ಫಲಕಗಳನ್ನು ಹೊತ್ತು ಜನವಾದಿ ಮಹಿಳಾ ಸಮಿತಿ ಕಾರ್ಯಕರ್ತೆಯರು ನವದೆಹಲಿಯಲ್ಲಿ ದೂರದರ್ಶನ ಕಚೇರಿಯೆದುರು ಟಿ.ವಿ. ಸೀರಿಯಲ್‌ಗಳಲ್ಲಿ ಜಾಹೀರಾತುಗಳಲ್ಲಿ ಮಹಿಳೆಯರ ತುಚ್ಚೀಕರಣವನ್ನು ಪ್ರತಿಭಟಿಸುತ್ತಿರುವ ಚಿತ್ರ.



ದನಿ ಮಾಡದ ಗರ್ಜನೆ

ಕೋಮುವಾದಿಗಳಿಗೆ ಸವಾಲು ಹಾಕಿದ 'ಸಹಮತ್' ಕಲಾ ಉತ್ಸವ

"ನಾವು ಕಬೀರ, ರೈದಾಸ, ನಾನಕ್, ನಾಮದೇವ್ ತುಕಾರಾಂ ಪರಂಪರೆಯವರು"- ಸಂತ ಪಲ್ಟೂ ದಾಸನ ಅನುಯಾಯಿಗಳ ಮಾತು ಮುಗಿಯುತ್ತಿದ್ದಂತೆ ಒಬ್ಬ ಸಿಟ್ಟಿಗೆದ್ದ 'ಹಿಂದೂ' ದೊಬ್ಬಿಡುತ್ತಾನೆ- "ಶುದ್ಧ ಅಸಂಬದ್ಧ- ಅವರೆಲ್ಲಾ ಮುಸಲ್ಮಾನರ ಧಳ್ಳಾಳಿಗಳು" ಪ್ರೇಕ್ಷಕರು ಅವಾಕ್ಕಾಗುತ್ತಾರೆ ಆದರೆ ಕ್ರಮೇಣ ಅವರಿಗೆ ತಿಳಿಯಲಾರಂಭಿಸುತ್ತದೆ- ಡಿಸೆಂಬರ್ 6 ರಂದು ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿ ಒಡೆದವರಿಗೆ ಬೇರೆ ಧರ್ಮಗಳ ಪೂಜಾಸ್ಥಳಗಳನ್ನು ಧ್ವಂಸ ಮಾಡುವ ತರಬೇತಿಯಷ್ಟೇ ಅಲ್ಲ, ಭಾರತದ ಜನ ನೂರಾರು ಒಟ್ಟಾಗಿ ಕಟ್ಟಿದ ಸುಂದರ ವಾದ, ಅರ್ಥಪೂರ್ಣವಾದ ಸೃಜನಾತ್ಮಕವಾದ ಎಲ್ಲವನ್ನೂ ಧ್ವಂಸಮಾಡುವ ತರಬೇತಿ ಕೂಡಾ ನೀಡಲಾಗಿದೆಯೇನೋ ಎಂದು.

ಇದು ಇದೇ ಜನವರಿ 1 ರಂದು ಸಫ್ದರ್ ಹಾಶ್ಮಿಯವರು ಹುತಾತ್ಮರಾದ ನಾಲ್ಕನೇ ವಾರ್ಷಿಕದಂದು ಅವರ ಹುತಾತ್ಮವಾದ ಸ್ಥಳ ಸಾಹಿಬಾಬಾದ್‌ನಲ್ಲಿ ಆಡಿದ ಹೊಸ ನಾಟಕ "ಸದೆ ಮೇಂ ಸಾಹೇಬೆ ಭರ್ ಪೂರ್ ಹೈ ಜೇ" ಬೀದಿ ನಾಟಕದ ಒಂದು ದೃಶ್ಯ. ಅಯೋಧ್ಯೆ ಘಟನೆಗಳ ಹಿನ್ನೆಯಲ್ಲಿ 16 ನೇ ಶತಮಾನದ ಸಂತಕವಿ ಪಲ್ಟೂದಾಸನ ಜೀವನದ ಮೇಲೆ ಆಧಾರಿತವಾದ ನಾಟಕ ಇದು.

ಸಫ್ದರ್ ಹಾಶ್ಮಿಯವರ ನೆನಪಿನ ಟ್ರಸ್ಟ್ 'ಸಹಮತ್' ನವದೆಹಲಿಯಲ್ಲಿ ಜನವರಿ 1 ರವರೆಗೆ ಒಂದು ವಾರ ದಿಲ್ಲಿಯಲ್ಲಿ ಹಾಗೂ ಕೋಮುದಳ್ಳುರಿಯ ಶಾಖವನ್ನು ತೀವ್ರವಾಗಿ ಅನುಭವಿಸಿದ ಮುಂಬೈ, ಸೂರತ್, ಬರೋಡಾ ಮತ್ತು ಅಹಮದಾಬಾದ್‌ಗಳಲ್ಲಿ ಫೆಬ್ರವರಿ 17 ರಿಂದ 27 ರ ನಡುವೆ ನಡೆಸಿದ ಕಾರ್ಯಕ್ರಮಗಳು ಭಾರತೀಯ ಸಂಸ್ಕೃತಿಯ ಹೆಸರಿನಲ್ಲಿ ಮತಾಂಧತೆಯನ್ನು ಪ್ರದರ್ಶಿಸುವವರಿಗೆ ದೊಡ್ಡ ಸವಾಲು ಹಾಕಿದವು. ಬಾಬ್ರಿ ಮಸೀದಿ ಧ್ವಂಸಮಾಡಿದವರನ್ನು ವೈವಿಧ್ಯಮಯ ಭಾರತೀಯ ಸಂಸ್ಕೃತಿಯನ್ನು ಧ್ವಂಸ ಮಾಡಲು ಬಿಡುವುದಿಲ್ಲ ಎಂದು "ಕೋಮುವಾದದ ವಿರುದ್ಧ ಕಲಾವಿದರು" ಎಂಬ ಈ ಕಾರ್ಯಕ್ರಮ ತೋರಿಸಿಕೊಟ್ಟಿತು. ಏಕೆಂದರೆ ಭಾರತೀಯ ಸಂಸ್ಕೃತಿಯ ಸುಂದರ, ಸೃಜನಾತ್ಮಕ ಅಂಶಗಳೆಲ್ಲಾ ವಿವಿಧ ಧರ್ಮಗಳ, ಜನಾಂಗಗಳ, ಭಾಷೆಗಳ ಜನರ ಕಾಣಿಕೆಗಳ ಸಂಯೋಜನೆಯಿಂದ ರೂಪ ತಾಳಿದ ಅಂಶಗಳು ಇವುಗಳಲ್ಲಿ ಯಾವೊಂದನ್ನು ಬಿಟ್ಟರೂ ಭಾರತೀಯ ಸಂಸ್ಕೃತಿಯೆಂಬುದೇ ಇರುವುದಿಲ್ಲ ಎಂದು ಈ ಕಲಾವಿದರು ತೋರಿಸಿಕೊಟ್ಟರು.

> ದ್ವೇಷದ ವಿಷವುಗುಳುವವರು ಯಾವ ದಣ್ಣಾದರೂ ಮುರಿಯಬಲ್ಲರಷ್ಟೆ- ಐಕ್ಯತೆ ಸಾಧಿಸಲಾರರು.
>
> -ನಾಟಕಕಾರ ಹಬೀಬ್ ತನ್ವೀರ್

ಉದಾಹರಣೆಗೆ, ಈ ಎಲ್ಲಾ ಸ್ಥಳಗಳಲ್ಲಿ ಬಹಳ ಪ್ರಶಂಸೆಗಳಿಸಿದ ಮುಖ್ಯವಾಗಿ ಕರಾಳ ಕೋಮುಶಕ್ತಿಗಳಿಗೆ ಪೂರ್ಣವಶವಾಗಿಯೇ ಬಿಟ್ಟಿದೆಯೇನೋ ಎಂದು ಕಾಣುವ ಅಹಮದಾಬಾದಿನಲ್ಲಿ ಮೂರು ಪ್ರದರ್ಶನಗಳಲ್ಲೂ ಜನ ಕಿಕ್ಕಿರಿದು ನೆರೆದಿದ್ದ ಕುಮಾರ್ ಸಾಹನಿಯವರ ಚಲನಚಿತ್ರ "ಖಯಾಲ್ ಗಾಥಾ" ಹಿಂದೂಸ್ತಾನಿ ಸಂಗೀತದ ಖಯಾಲ್ ಗಾಯನಶೈಲಿಯಲ್ಲಿ ವಿಕಾಸದ ಕಥೆಯ ಮೂಲಕ ಇಡೀ ಭಾರತೀಯ ಸಂಗೀತದ ಜೀವಂತಿಕೆ, ಸೌಂದರ್ಯ ಮೂಲ ಹೇಗೆ ವಿವಿಧ ಧಾರೆಗಳಿಂದ ಹರಿದು ಬಂದಿದೆ ಹೇಗೆ ಅದು ಸಂಯೋಜನೆಗೊಂಡು 'ಭಾರತೀಯ ಸಂಗೀತ' ಎಂಬುದು ಅರಳಿದೆಯೆಂಬುದನ್ನು ಚಿತ್ರಿಸಿತು.

ಹೊಸತೊಂದರ ಸೃಷ್ಟಿ

ಉತ್ತರ ಭಾರತದಲ್ಲಿ ನೂರಾರು ವರ್ಷಗಳ ಸಹಜೀವನದಿಂದ ಹಿಂದೂ- ಮುಸಲ್ಮಾನ ಸಾಂಸ್ಕೃತಿಕ ಧಾರೆಗಳು ಸಂಯೋಜನೆಗೊಂಡು ಹೊಸದೊಂದನ್ನು ಸೃಷ್ಟಿಸಿದುದರ ಒಂದು ಸುಂದರ ಪ್ರತೀಕವಾದ ಸೂಫೀ-ಭಕ್ತಿ ಪಂಥದ ಸಂಗೀತ ಸಮಾರಂಭ ಈ ಎಲ್ಲಾ ಸ್ಥಳಗಳಲ್ಲಿ ಭಾರತದ ಐಕ್ಯತೆಯ ಸ್ವರೂಪವನ್ನು ಜನಗಳ ಮುಂದಿಟ್ಟಿತು. ಕೋಮುವಾದಿಗಳು ಕಟ್ಟುತ್ತಿರುವ ಅಡ್ಡಗೋಡೆಗಳಿಂದ ಸಂಗೀತದಂತಹ ಸುಂದರ ಸೃಷ್ಟಿ ಹೇಗೆ ಅಸಾಧ್ಯ ಎಂಬುದನ್ನು ಮನದಟ್ಟು ಮಾಡಿತು. ಮತ-ಧರ್ಮಗಳ ಮೇರೆಗಳನ್ನು ಮೀರಿನಿಂತ ಪಶ್ಚಿಮಬಂಗಾಳದ ಅಲ್ಲನ್ ಫಕೀರನ ಅನುಯಾಯಿಗಳಾದ ಹಿಂದೂ ಹಾಗೂ ಮುಸ್ಲಿಂ ಬಾವುಲ್ ಹಾಡುಗಾರರು, ರಾಜಸ್ಥಾನದ ಮೀರಾ, ಸುರದಾಸ್, ಬುಲ್ಲೇಶಾಹನ ಹಾಡಗಳನ್ನು ಹಾಡುವ ರಾಜಾಸ್ತಾನದ ಬುಂಗೇರ್ ಖಾನ್, ಭಾರತದಲ್ಲಿ ಆಶ್ರಯ ಪಡೆದ ಅಫ್ಘಾನ ಹಾಡುಗಾರ ಅಲ್ತಾಫ್ ಹುಸೇನರ, ಅಮೀರ್ ಖುಸ್ರೋ, ಕವನಗಳ ಗಾಯನ, ಪಂಜಾಬಿನ ನಸೀಬ್‌ಪ್ಯಾರಾ ಹಾಗೂ ದಿಲ್‌ಬಾಗ್‌ಸಿಂಗ್, ಉತ್ತರಪ್ರದೇಶದ ಬದಾಯೂಂನ ಝುಫರ್ ಹುಸೇನ್, ದಿಲ್ಲಿಯ ಗುಲಾಂ ಹುಸೇನ್ ಖಾನ್ ಫಕೀರ್ ಮುಂತಾದ ಜನಪದ ಹಾಡುಗಾರರು ಗಡಿಯಾಚೆಯಿಂದ ಬಂದ ಸಿಂಧೀ ಜಾನಪದ ಹಾಡುಗಾರ ಅಲ್ಲನ್ ಫಕೀರ್ ಸೂಫೀ-ಭಕ್ತಿಪಂಥದ ವೈವಿಧ್ಯತೆಯಲ್ಲಿನ ಏಕತೆಯನ್ನು, ಶ್ರೀಮಂತಿಕೆಯನ್ನು ಎತ್ತಿ ತೋರಿದರು. ವಿವಿಧ ಶಾಸ್ತ್ರೀಯ ಹಾಡುಗಾರರೂ ಸೂಫೀ ಸಂಗೀತದ ಆಳವನ್ನು-ವೈಭವವನ್ನು ಹಾಡಿ ತೋರಿಸಿದರು. ಈ ಸಮಾರಂಭ ಸಂತಕವಿ ಕಬೀರನ ಹಾಡಿನಿಂದ ಆರಂಭವಾಯಿತು. ಕಬೀರನ ಒಂದು ಹಾಡಿನ ಪದ 'ಅನಹದ್ ಗರ್ಜೆ' (ದನಿ ಮಾಡದ ಘರ್ಜನೆ)ಯ ಹೆಸರು ಹೊತ್ತಿತ್ತು. ಈ ಸ್ಮರಣೀಯ ಸಮಾರಂಭ ಸಂದರ್ಭದಲ್ಲಿ ನಡೆದ ವಿಚಾರಣ ಸಂಕಿರಣಗಳಲ್ಲಿ ಭಾರತೀಯ ಸಂಸ್ಕೃತಿಯ ಶ್ರೀಮಂತಿಕೆ ಆಧಾರಗಳನ್ನು ನೆನಪಿಸಿಕೊಂಡವು ದಿಲ್ಲಿಯಲ್ಲಿ, ಐದು ದಿನಗಳ ಈ ಉತ್ಸವವನ್ನು ಉದ್ಘಾಟಿಸುತ್ತಾ ಪ್ರಸಿದ್ಧ ಇತಿಹಾಸಕಾರ ಪ್ರೋ ಇರ್ಫಾನ್ ಹಬೀಬ್, ಕಬೀರ್ ನಾಮದೇವ್ ದಾದು ಹಾಗೂ ನಾನಕರ ಪರಂಪರೆ ಜಾತಿ ಪದ್ಧತಿ ಧಾರ್ಮಿಕ ಗಂಡಾತಾರಗಳ ವಿರುದ್ಧ ಸಿಡಿದೆದ್ದು ದೇವರ-ಧರ್ಮದ ಒಂದು ಸಮಾನತಾ ದೃಷ್ಟಿಕೋಣವನ್ನು ಪ್ರಚಾರ ಮಾಡಿತು. 13-14 ನೇ ಶತಮಾನ ಉಚ್ಚರಣಾ ವಿಧಾನಗಳ್ಲಿ ಆಗುತ್ತಿದ್ದ ಬದಲಾವಣೆ ಜಾತಿ ಪದ್ಧತಿಯನ್ನು ಸಡಿಲಗೊಳಿಸಿದ್ದವು. ಈ ಎಲ್ಲಾ ಭಕ್ತಿಪಂಥಗಳು ಸಾಮಾಜಿಕ ರಂಗದಲ್ಲಿ ಆ ಬದಲಾವಣೆಗೆ ದನಿ ನೀಡಿದವು. ಭಾರತದ ಸ್ವಾತಂತ್ರ್ಯ ಹೋರಾಟ ಕೂಡಾ ಈ ಪರಂಪರೆಯಿಂದ ಭಾರೀ ಸ್ಫೂರ್ತಿ ಪಡೆಯಿತು ಎಂದರು.

> ಈ ನೂರಡಿ ಕ್ಯಾನ್‌ವಾಸ್‌ನ ಪ್ರತಿಯೊಂದು ರೇಖೆಯೂ ಕೋಮುವಾದಿಗಳಿಗೆ ನೀಡಿರುವ ಮರಣಾಂತಿಕ ಏಟು
>
> ಖ್ಯಾತ ಚಿತ್ರಕಾರ ಎಂ.ಎಫ್. ಹುಸೇನ್

ಫೆಬ್ರವರಿ 19 ರಂದು ಮುಂಬೈಯ ಸಮುದ್ರ ತೀರ ಮೆರೀನ್ ಡ್ರೈವ್‌ನಲ್ಲಿ ಕೋಮುಸೌಹಾರ್ದತೆಯ ವಿಶಿಷ್ಟ ಘಟನೆ ನಡೆಯಿತು. ಹತ್ತಾರು ಕಲಾವಿದರು ನೂರಾ ಅಡಿ ಉದ್ದದ ಕ್ಯಾನ್‌ವಾಸ್ ಮೇಲೆ ಕೇವಲ ಎರಡು ವಾರಗಳ ಹಿಂದೆ ತಮ್ಮ ಮುಂಬೈನಗರ ಕಂಡ ಭಯಾನಕ ದೃಶ್ಯಗಳಿಂದ ತಮ್ಮಲ್ಲಿ ಉಂಟಾದ ಉದ್ವೇಗವನ್ನು ರೇಖೆಗಳ ರೂಪದಲ್ಲಿ ಪ್ರಕಟಿಸಿದರು. ಸೃಜನಶೀಲ ವ್ಯಕ್ತಿಗಳಲ್ಲಿ ಕೋಮುಸೌಹಾರ್ದದ ಬಗ್ಗೆ ತುಂಬಿರುವ ಭಾವನೆಗಳನ್ನು ಅಭಿವ್ಯಕ್ತಪಡಿಸಲು ಇದು ಬಹಳ ಚಿಕ್ಕ ಕ್ಯಾನ್‌ವಾಸ್ ಎಂದು ಕಂಡು ಬಂತು. ಈ ಕ್ಯಾನ್‌ವಾಸ್‌ನ ಪ್ರತಿಯೊಂದು ರೇಖೆಯೂ ಕೋಮುವಾದಿಗಳಿಗೆ ನೀಡಿರುವ ಮರಣಾಂತಿಕ ಏಟು ಎಂದರು ಪ್ರಖ್ಯಾತ ಚಿತ್ರಕಾರ ಎಂ.ಎಫ್. ಹುಸೇನ್.

ಮುಂಬೈಯಲ್ಲಿ ಫೆಬ್ರವರಿ 20 ರಂದು ನಡೆದ ಸೂಫೀ ಸಂಗೀತ ಸಮಾರಂಭ ಭಾರತೀಯ ಕಲೆಯನ್ನು ಧರ್ಮದ ಆಧಾರದ ಮೇಲೆ ಒಡೆಯಲು ಸಾಧ್ಯವಿಲ್ಲ ಎಂದು ಮತ್ತೊಮ್ಮೆ ತೋರಿಸಿಕೊಟ್ಟಿತು. ಭಾರತೀ ಶಾಸ್ತ್ರಿಯ ಸಂಗೀತದ ಹಿರಿಯ ವ್ಯಕ್ತಿ ಪಂಡಿತ್ ಜಸರಾಜ್ ತಮ್ಮದೇ ಕೃತಿ "ಮೇರಾ ಅಲ್ಲಾ ಮೆಹರ್‌ಬಾನ್' ಹಾಗೂ ಕಬೀರ, ನಾನಕರ ಹಾಡುಗಳನ್ನು ಹಾಡಿದ್ದಲ್ಲದೆ ಕೋಮುವಾದವನ್ನು ಎದುರಿಸಲು ನಾನು ಏನೂ ಮಾಡಲು ಸಿದ್ಧ ಎಂದು ಸಾರಿದರು.

ಫೆಬ್ರವರಿ 22 ರಂದು ಸೂರತ್‌ನಲ್ಲಿ ನಡೆದ ಸಮಾರಂಭದ ವಿಶಿಷ್ಟತೆಯೆಂದರೆ ಇತ್ತೀಚಿನ ಗಲಭೆಗಳ ನಂತರ ಮೊತ್ತ ಮೊದಲ ಬಾರಿಗೆ ಜಾತ್ಯತೀತ ಶಕ್ತಿಗಳ ದನಿ ಕೇಳಬಂದದ್ದು ಈ ಸಮಾರಂಭದಲ್ಲೇ. ಅದುವರೆಗೆ ಜಾತ್ಯತೀತ ಶಕ್ತಿಗಳಿಗೆ ಪೋಸ್ಟರ್ ಹಚ್ಚಲೂ ಕೂಡಾ ಅಲ್ಲಿನ ಕೋಮುವಾದಿಗಳು ಅವಕಾಶ ಕೊಟ್ಟಿರಲಿಲ್ಲ. ಭಯದಿಂದ ಕಂಗಾಲಾಗಿದ್ದ ಅಲ್ಪಸಂಖ್ಯಾತರಲ್ಲಿ ಹೊಸ ವಿಶ್ವಾಸ ಮೂಡಿಸಿತು ಈ ಸಾಂಸ್ಕೃತಿಕ ಕಾರ್ಯಕ್ರಮ.

ಮರುದಿನ ಸೂರತ್ ಬಳಿಯ ವಲೋಡ್ ಎಂಬ ಹಳ್ಳಿಯಲ್ಲಿ ನಡೆದ ಸಮಾರಂಭ ಆ ಗ್ರಾಮ ಸ್ಥಳ ತೋರಿದ ಕೋಮುಸೌಹಾರ್ದದ ಆದರ್ಶಕ್ಕೆ ಜಾತ್ಯಾತೀತ ಶಕ್ತಿಗಳು ಸಲ್ಲಿಸಿದ ಕೃತಜ್ಞತೆಯಾಗಿತ್ತು. ಗಲಭೆಯಲ್ಲಿ ಅಸುನೀಗಿದ ಒಬ್ಬ ಮುಸ್ಲಿಂ ಕಂಡಕ್ಟರಿಗೆ ಈ ಗ್ರಾಮದ ಹಿಂದೂಗಳು ಹಾಗೂ ಮುಸಲ್ಮಾನರು ಜೊತೆಗೂಡಿ ಅಂತಿಮ ಸಂಸ್ಕಾರ ನಡೆಸಿದರು.

ಬರೋಡಾದಲ್ಲಿ ಫೆಬ್ರವರಿ 25 ರಂದು 8 ಗಂಟೆಗೆ ಆರಂಭವಾದ ಕಾರ್ಯಕ್ರಮ ಮಧ್ಯರಾತ್ರಿಯವರೆಗೂ ನಡೆಯಿತು.

ಕೋಮುಗಲಭೆಗಳಿಗೆ ಇತ್ತೀಚಿನ ದಿನಗಳಲ್ಲಿ ಕುಪ್ರಸಿದ್ಧವಾಗಿರುವ ಅಹಮದಾಬಾದ್ ನಗರದಲ್ಲೂ ಜಾತ್ಯಾತೀತ ಭಾವನೆ ಬತ್ತಿಲ್ಲ ಎಂಬುದನ್ನು ಈ ಮೊದಲೇ ಹೇಳಿದಂತೆ "ಕೋಮುವಾದ ವಿರುದ್ಧ ಕಲಾವಿದರು" ಎಂಬ ಈ ಕಾರ್ಯಕ್ರಮ ತೋರಿಸಿಕೊಟ್ಟಿತು. ಹಲವು ಬೀದಿ ನಾಟಕ ತಂಡಗಳ ನಾಟಕ ಪ್ರದರ್ಶನಗಳು ಹಾಗೂ ಈ ನಗರದಲ್ಲಿರುವ ರಾಷ್ಟ್ರೀಯ ವಿನ್ಯಾಸ ವಿದ್ಯಾಸಂಸ್ಥೆ, ವಾಸ್ತುಶಿಲ್ಪ, ದೃಶ್ಯ ಕಲೆಗಳ ಎಲ್ಲಾ ವಿದ್ಯಾಸಂಸ್ಥೆಗಳ ವಿದ್ಯಾರ್ಥಿಗಳು ಈ ಉತ್ಸವದಲ್ಲಿ ಉತ್ಸಾಹದಿಂದ ಪಾಲುಗೊಂಡದ್ದು ಅಹಮದಾಬಾದ್‌ನ ಇನ್ನೊಂದು ವಿಶಿಷ್ಟತೆ. ಅಹಮದಾಬಾದ್‌ನ ಕಲಾವಿದರೂ ದೇಶದ ಇತರೆಡೆಯ ಕಲಾವಿದರಂತೆ ನಮ್ಮ ಸಂಸ್ಕೃತಿಯನ್ನು ಧರ್ಮದ ಆಧಾರದ ಮೇಲೆ ವಿಭಜಿಸುವುದನ್ನು ತಾವು ಒಪ್ಪುವುದಿಲ್ಲ ಎಂದು ಸ್ಪಷ್ಟಪಡಿಸಿದರು.

> ಕೋಮುವಾದವನ್ನು ಎದುರಿಸಲು ನಾನು ಏನು ಮಾಡಲು ಸಿದ್ಧ
>
> — ಖ್ಯಾತ ಸಂಗೀತಕಾರ ಎಂ. ಜಸ್‌ರಾಜ್

ದಿಲ್ಲಿಯಲ್ಲಿ ನಡೆದ ಉತ್ಸವದ ಸಂದರ್ಭದಲ್ಲಿ "ನಮ್ಮ ಜಾತ್ಯಾತೀತ ಪರಂಪರೆಯ ರಕ್ಷಣೆಲ್ಲಿ" ಎಂಬ ಮಾಲಿಕೆಯಲ್ಲಿ ಸೂಫೀ ಭಕ್ತಿಪಂಥದ ಹಾಡುಗಳನ್ನು ಚಿತ್ರಿಸುವದು ಸುಂದರ ಪೋಸ್ಟರುಗಳನ್ನು ಬಿಡುಗಡೆ ಮಾಡಲಾಯಿತು. ಪ್ರಖ್ಯಾತ ಚಿತ್ರಕಾರರಾದ ಶಂಶಾದ್, ಮಂಚಿತ್ ಬಾವಾ, ಮನು ಪಾರೇಖ್, ಅರ್ಪಿತ್ ಸಿಂಗ್ ಹಾಗೂ ವಿನ್ಯಾಸಗಾರರಾದ ಗಜವಾನಿ ಮತ್ತು ಬರ್ಜೀತ್ ಸೇನ್ ಇವನ್ನು ಚಿತ್ರಿಸಿದರು. ನಂತರ ಮುಂಬೈಯ ಚಿತ್ರಕಾರರಾದ ಅಕ್ಬರ್ ಪದಮ್‌ಸಿ ಹಾಗೂ ನಳಿನಿ ಮಾಲಿನ ಇನ್ನೆರೆಡು ಪೋಸ್ಟರುಗಳನ್ನು ಕಾಣಿಕೆ ನೀಡದರು. ಬರೋಡಾದಲ್ಲಿ ಇನ್ನಿಬ್ಬರು ಪ್ರಖ್ಯಾತ ಚಿತ್ರಕಾರರಾದ ಗುಲಾಂ ಶೇಖ್ ಹಾಗೂ ನೀಲಿಮಾ ಶೇಖ್ ಇನ್ನೆರಡು ಪೋಸ್ಟರುಗಳ ರಚನೆಗೆ ಕಾಣಿಕೆ ನೀಡಿದರು.

ದಿಲ್ಲಿಯಲ್ಲಿ ಒಂದು ವಾರ, ಮುಂಬೈ, ಸೂರತ್, ವಲ್ಲೋಡ್, ಬರೋಡಾ, ಅಹಮದಾಬಾದ್‌ಗಳಲ್ಲಿ ಹತ್ತು ದಿನಗಳ ಈ 'ಅನಹದ್ ಗರ್ಜೆ' ಉತ್ಸವ ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿದ ಶಕ್ತಿಗಳು ನೂರಾರು ವರ್ಷಗಳು ಒಟ್ಟಾಗಿ ಬಾಳಿದ ವಿವಿಧ ಜನಸಮೂಹಗಳ ಸಂಯೋಜನೆಯಿಂದ ರೂಪಗೊಂಡ ವೈವಿಧ್ಯಮಯ ಸುಂದರ ಭಾರತೀಯ ನಾಗರಿಕತೆಯನ್ನು ಧ್ವಂಸಮಾಡದಂತೆ ತಡೆಯಲು ಸಾಧ್ಯ ಎಂದು ಮನದಟ್ಟು ಮಾಡಿತು.

ಆರ್.ಎಸ್.ಎಸ್. ಸಂಸ್ಕೃತಿಯ ಅನಾಗರಿಕ ಮುಖ

'ನಿಮ್ಮ ನೆರೆಹೊರೆಯವರನ್ನು ಪ್ರೀತಿಸು' ಕ್ರಿಸ್ತನ 10 ಉಪದೇಶಗಳಲ್ಲಿ ಒಂದು. ಎಲ್ಲಾ ಧರ್ಮಗಳು ಇದನ್ನೇ ಬೋಧಿಸುತ್ತದೆ. ಆದರೆ 'ಹಿಂದುತ್ವ'ದ ಕಾಂಟ್ರಾಕ್ಟ್ ತೆಗೆದುಕೊಂಡಿರುವ ಆರ್.ಎಸ್.ಎಸ್. ಮತ್ತು 'ಸಂಘಪರಿವಾರ' ಇದರ ವಿರುದ್ಧವಾದ ಪ್ರಚಾರ ನಡೆಸುತ್ತಿದೆ. ಬಾಬರಿ ಮಸೀದಿಯನ್ನು ಧ್ವಂಸ ಮಾಡಿದ ನಂತರ ತನ್ನ ಕಿಡಿಗೇಡಿತನವನ್ನು ತಣ್ಣಗೆ, ಗುಪ್ತವಾಗಿ ನಡೆಸುತ್ತಿದೆ. ಪ್ರಮುಖ ಪ್ರಗತಿಪರ ಮುಸ್ಲಿಮರಿಗೆ, ಜಾತ್ಯತೀತ ಹಿಂದೂಗಳಿಗೆ ಅಂಚೆ ಮೂಲಕ ಬೆದರಿಕೆ ಅಲ್ಲದೆ, ಮುಸ್ಲಿಮರ ಮೇಲೆ ದ್ವೇಷ ಕಾರುವ ಕರಪತ್ರ ಈ ಹೊಸ ಹಂತದಲ್ಲಿ 'ಸಂಘ ಪರಿವಾರ'ದ ಆಯುಧಗಳು ಕೆಲವು ಉದಾಹರಣೆಗಳನ್ನು ಕೆಳಗೆ ಕೊಡಲಾಗಿದೆ.

ಲೈಲಾ ತೈಯಬ್‌ಜೀ ದೇಶದ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರ ಬುದ್ರುದ್ದೀನ್ ತೈಯಬ್‌ಜೀ ಯವರ ಮರಿ ಮೊಮ್ಮಗಳು ಮಾತ್ರವಲ್ಲ. 'ದಸ್ತಕರ್' ಎಂಬ ಕರಕುಶಲ ವಸ್ತುಗಳ ಗೃಹಕೈಗಾರಿಕೆಯ ಬೆಳವಣಿಗೆಗೆ ಗುರಿಯಾಗಿರುವ ಸಂಸ್ಥೆಯೊಂದರ ಸ್ಥಾಪಕ ಸದಸ್ಯೆ. ಆಕೆ ಕ್ರಿಸ್‌ಮಸ್ ಹಿಂದಿನ ದಿನ ಒಂದು ವಿಚಿತ್ರ ಪಾರ್ಸೆಲ್ ಬಂತು. ಆಕೆ ಆಸಕ್ತಿಯಿಂದ ಬಿಚ್ಚಿ ನೋಡಿದರೆ ಅದರಲ್ಲಿ ಮಲ ತುಂಬಲಾಗಿತ್ತು. ಇನ್ನೇನೂ ಇರಲಿಲ್ಲ. ವಿಳಾಸ ಕಳಿಸದವರ ಹೆಸರು ಸಂದೇಶ- ಏನೂ ಇರಲಿಲ್ಲ. ಲೈಲಾಗೆ ಬಂದ ವಿಚಿತ್ರ ಅಂಚೆ ಇದು ಮೊದಲನೆಯದಲ್ಲ. ಕಳೆದ ಒಂದು-ಒಂದುವರೆ ವರ್ಷದಿಂದ ಆಕೆಗೆ ಸಂಘಪರಿವಾರದ ಬೆದರಿಕೆ ಪತ್ರಗಳು ಬರುತ್ತಿವೆ. ಮುಸ್ಲಿಮರು ಕೊಳಕು ಹಂದಿಗಳು. ಮುಸ್ಲಿಮರಿಗೆ ಹಿಂದೂಸ್ಥಾನದಲ್ಲಿ ಜಾಗವಿಲ್ಲ. ಪಾಕಿಸ್ತಾನಕ್ಕೆ ಹೋಗಿ' ಇದು ಎಲ್ಲಾ ಪತ್ರಗಳ ಸಾರಾಂಶ. ಭಾರತದಲ್ಲಿ ವಿಭಜನೆಯಾದ ನಂತರ ಭಾರತದ ಉಳಿದ ಪ್ರಮುಖ ಮುಸ್ಲಿಂ ಕುಟುಂಬಗಳಲ್ಲಿ ತೈಯಬ್‌ಜೀಯವರದು ಒಂದು. ಅವರಿಗೆ ಈ ಪುರಸ್ಕಾರ.

ಲೈಲಾ ಮಾತ್ರವಲ್ಲ ಇನ್ನೂ ಹಲವಾರು ಪ್ರಮುಖ ಮುಸ್ಲಿಮರನ್ನು ಈ ರೀತಿಯ ಮಾನಸಿಕ ಹಿಂಸಾಚಾರಕ್ಕೆ ಅಂಚೆ ಮೂಲಕ ಗುರಿಪಡಿಸಲಾಗುತ್ತಿದೆ.

ಹಿಂದಿ ದೈನಿಕ 'ಜನಸತ್ತಾ'ದ ಸಂಪಾದಕ ಪ್ರಭಾಸ್ ಜೋಶಿ ಬಾಬ್ರಿ ಮಸೀದಿ ನಾಶದ ವಿರುದ್ಧ ಒಂದು ಸಂಪಾದಕೀಯ ಹಾಗೂ ಹಲವಾರು ಲೇಖನ ಬರೆದಿದ್ದಾರೆ. ಅವರಿಗೆ ಈ ವರೆಗೆ 600 ಬೆದರಿಕೆ ಪತ್ರಗಳೂ, ಹಲವಾರು ಟೆಲಿಫೋನ್ ಕರೆಗಳೂ ಬಂದಿವೆ. ಅವರಿಗೆ ಬರುವ ಹಲವು ಪತ್ರಗಳ ಒಂದೇ ಧಾಟಿ. ಇದು ಸಂಘಟಿತ ಪ್ರಯತ್ನ ಎಂಬ ಪ್ರಬಲ ಗುಮಾನಿಗೆ ಆಸ್ಪದ ಕೊಡುತ್ತಿದೆ. ಬಾಬ್ರಿ ಮಸೀದಿ ಧ್ವಂಸ ಮಾಡಿದ್ದು ಸರಿ. ಅದನ್ನು ವಿರೋಧಿಸುವವರು ಮುಲ್ಲಾ ಮತ್ತು ಮೂಲಭೂತವಾದಿಗಳಲ್ಲಿ. ಅನುಕಂಪ ಇರುವವರು" ಅಥವಾ "ಕಾಶ್ಮೀರದಲ್ಲಿ ದೇವಸ್ಥಾನಗಳನ್ನು ಧ್ವಂಸ ಮಾಡಲಿಲ್ಲವೇ?" ಆದ್ದರಿಂದ ಬಾಬ್ರಿ ಮಸೀದಿ ಧ್ವಂಸ ಮಾಡಿದ್ದು ಸರಿ. ಇವೆಲ್ಲಾ ಸಂಘ ಪರಿವಾರದ ಅಣಿಮುತ್ತುಗಳಲ್ಲವೇ. ಬ್ಲಿಟ್ಸ್ ಉಪಸಂಪಾದಕ ಸಾಯಿನಾಥ್, ಖ್ಯಾತ ಚರಿತ್ರಕಾರ ಕೆ.ಎನ್. ಫಣಿಕ್ಕರ್, ಖ್ಯಾತ ಲೇಖಕ ಕಾರ್ಟೂನಿಸ್ಟ್ ಬಿ.ವಿ. ವಿಜಯನ್ ಇತ್ಯಾದಿ ಹಲವು ಜಾತ್ಯತೀತ ಬುದ್ಧಿಜೀವಿಗಳನ್ನು ಈ 'ಅಂಚೆ ಆಕ್ರಮಣ'ಕ್ಕೆ ಗುರಿಪಡಿಸಲಾಗಿದೆ.

ಬೆದರಿಕೆ ಪತ್ರ ಫೋನುಗಳು ಮಾತ್ರವಲ್ಲ 'ಸಂಘ ಪರಿವಾರ' ದ ಬಳಿ ಇರುವ ಅಸ್ತ್ರಗಳು. ಸಾಮಾನ್ಯ ಮುಸ್ಲಿಮರನ್ನು ಬೆದರಿಸಲು, ಜಾತ್ಯಾತೀತ ಹಿಂದೂಗಳ ತಲೆಕೆಡಿಸಲು ಅತ್ಯಂತ ಪ್ರಚೋದನಕಾರಿ ಕರಪತ್ರಗಳನ್ನು ಬಳಸಲಾಗುತ್ತಿದೆ.

ಮುಂಬೈ ಮತ್ತು ಉತ್ತರಪ್ರದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ವಿತರಿಸಲಾಗುತ್ತಿರುವ ಕರಪತ್ರವೊಂದರ ಕೆಲವು ಅಂಶಗಳು ಕೆಳಗಿವೆ.

- ನೀವು ಮುಸ್ಲಿಂ ಮನೆಯಲ್ಲಿ ಕೆಲಸ ಮಾಡುತ್ತಿದ್ದರೆ ಅಲ್ಲಿನ ಹೆಂಗಸರ ಜತೆ ಅನೈತಿಕ ಸಂಬಂಧ ಹೊಂದಿ. ಹುಟ್ಟುವ ಮಗು ಹಿಂದೂವಾಗಿರಲಿ.
- ಮುಸ್ಲಿಂ ಮಕ್ಕಳನ್ನು ಹೆರಿಗೆ ಮಾಡಿಸುವ ಹಿಂದೂ ಡಾಕ್ಟರುಗಳು ಮಗುವಿನ ಕಿವಿಯಲ್ಲಿ "ಓಂ" ಎಂದು ಸುರಬೇಕು.
- ಪ್ರತಿಯೊಬ್ಬ ಆರ್.ಎಸ್.ಎಸ್. ಸದಸ್ಯ 10 ಜನ ಮುಸ್ಲಿಮರನ್ನು ಎದುರಿಸಲು ಧೈರ್ಯಹೊಂದಿರಬೇಕು.
- ಮುಸ್ಲಿಮರಿಗೆ ಯಾವ ರೀತಿಯಲ್ಲಿ ಸಾಧ್ಯವೋ ಆ ರೀತಿ ತೊಂದರೆ ಕೊಡಬೇಕು.

ಈ ಬೆದರಿಕೆ ಅಂಚೆ, ಫೋನುಗಳು, ಪ್ರಚೋದನಕಾರಿ ಕರಪತ್ರಗಳು ಬೇನಾಮಿ ಇರುತ್ತವೆ ಎಂದು ಬೇರೆ ಹೇಳಬೇಕಾಗಿಲ್ಲ. ಆದರೆ ಪ್ರತಿಯೊಂದರಿಂದ 'ಸಂಘಪರಿವಾರ' ದ ಅಣಿ ಮುತ್ತುಗಳು ಉದುರುತ್ತವೆ. ಇದರ ಹಿಂದೆ "ಸಂಘ ಪರಿವಾರ" ಇದೆ ಎಂಬುದನ್ನು ಆರ್.ಎಸ್.ಎಸ್. ಉಪಕಾರ್ಯದರ್ಶಿ ಪ್ರೊ. ರಾಜೇಂದರ್‌ಸಿಂಗ್ ನಿರಾಕರಿಸಿದ್ದಾರೆ. ಆದರೆ ಇಂತಹ ಆಕ್ರಮಣಕ್ಕೆ ಒಳಗಾಗಿರುವವರಿಗೆ ಇದು 'ಸಂಘ ಪರಿವಾರ'ದ ಕೆಲಸ ಎಂಬ ಬಗ್ಗೆ ಯಾವುದೇ ಅನುಮಾನವಿಲ್ಲ.

ಈ ಮುಸ್ಲಿಂ-ದ್ವೇಷಿ ಪ್ರಚಾರದ ಉದ್ದೇಶ ಎರಡು. ಒಂದನೆಯದಾಗಿ ಮುಸ್ಲಿಮರನ್ನು ಬೆದರಿಸಿ ಪ್ರಚೋದಿಸಿ ಸಾಧ್ಯವಾದರೆ ಅವರಿಂದ ಆಕ್ರಮಣ ಮಾಡಲಾಗುವಂತೆ ಮಾಡುವುದು. ಎರಡನೆಯದಾಗಿ ಜಾತ್ಯತೀತ ಹಿಂದೂಗಳನ್ನು ತಲೆಕೆಡಿಸಿ ಮುಸ್ಲಿಮರ ಮೇಲಿನ ಹಿಂಸಾಚಾರ, ಆಕ್ರಮಣದ ಬಗ್ಗೆ ಮೌನವಾಗಿರುವಂತೆ ಮಾಡುವುದು.

ಅಯೋಧ್ಯಾ ಕಾಂಡ



ಕುರಿಮರಿಯ ಮೇಲೆ ಟಿ.ವಿ. ಚಿತ್ರ ತೋಳಕ್ಕೆ ಸರ್ಕಾರದ ಹಣ!

ಐ.ಎನ್.ಎಸ್. ಸುದ್ದಿ

ಸರಕಾರೀ ಹತೋಟಿಯ ದೂರದರ್ಶನ ಒಂದು ಅತ್ಯಂತ ಆತಂಕಕಾರಿ ಕ್ರಮ ಕೈಗೊಂಡಿದೆ. ಅಬ್ಬರದ ದನಿ ಮಾಡುವುದರಲ್ಲಿ ಪ್ರವೀಣರಾದ ಬಿ.ಜೆ.ಪಿ. ಸಂಸತ್ ಸದಸ್ಯ ಡಾ. ಜೆ.ಕೆ. ಜೈನ್‌ಗೆ ಭಾರತದಲ್ಲಿ ಬಾಂಗ್ಲಾದೇಶೀ ನಿರಾಶ್ರಿತರ ಬಗ್ಗೆ ಒಂದು ಟೆಲಿಫಿಲ್ಮ್ ತಯಾರಿಸುವ ಕಾಂಟ್ರಾಕ್ಟ್ ನೀಡಲಾಗಿದೆ.

ಡಾ.ಜೆ.ಕೆ. ಜೈನ್ ರಾಜ್ಯ ಸಭೆಯಲ್ಲಿ ಬಿ.ಜೆ.ಪಿ. ಸದಸ್ಯರಾಗಿದ್ದು ದೆಹಲಿಯಲ್ಲಿರುವ ಜೈನ ಸ್ಟುಡಿಯೋದ ಮಾಲಿಕ. 1990 ರಲ್ಲಿ ಎಲ್.ಕೆ. ಅಡ್ವಾಣಿಯವರ ರಥಯಾತ್ರೆ ಹಾಗೂ ಬಾಬ್ರಿಮಸೀದಿ ಗುಮ್ಮಟದ ಮೇಲಿನ ದಾಳಿಯ ಬಗ್ಗೆ ಅತ್ಯಂತ ಉದ್ರೇಕಕಾರಿ ಟೆಲಿಫಿಲ್ಮ್‌ಗಳನ್ನು ತಯಾರಿಸಿ ಕುಖ್ಯಾತರಾದರು. ಬಿ.ಜೆ.ಪಿ. - ಆರ್.ಎಸ್.ಎಸ್. ವಿ.ಹೆಚ್.ಪಿ. ಕೂಟ ಅಯೋಧ್ಯೆಯ ಪ್ರಶ್ನೆಯ ಮೇಲೆ ಭಾವೋದ್ರೇಕ ಎಬ್ಬಿಸಿ ಹಾಗೂ ನಂತರ 1991 ರ ಬಿಜೆಪಿ. ಚುನಾವಣಾ ಪ್ರಚಾರದಲ್ಲಿ ಜೈನ್ ಟೆಲಿಫಿಲ್ಮ್‌ಗಳನ್ನು ವ್ಯಾಪಕವಾಗಿ ಬಳಸಿಕೊಂಡಿತ್ತು.

ಬಾಂಗ್ಲಾದೇಶೀ ನಿರಾಶ್ರಿತರ ಪ್ರಶ್ನೆಗೆ ಕೋಮುವಾದೀ ತಿರುವು ನೀಡಿ ಭಾರತದಲ್ಲಿ ಅಲ್ಪಸಂಖ್ಯಾತರ ವಿರುದ್ಧ ಅಪಪ್ರಚಾರವನ್ನು ಇನ್ನಷ್ಟು ತೀವ್ರಗೊಳಿಸಲು ಬಿಜೆಪಿ ಪ್ರಯತ್ನಿಸುತ್ತಿರುವ ಹಿನ್ನೆಲೆಯಲ್ಲಿ ಡಾ. ಜೈನ್‌ಗೆ ಈ ಟೆಲಿಫಿಲ್ಮ್ ಮಾಡುವ ಕಾಂಟ್ರಾಕ್ಟ್ ನೀಡಿದ್ದು ಅತ್ಯಂತ ಅಪಾಯಕಾರಿ. ನಮಗೆ ದೊರೆತಿರುವ ಮಾಹಿತಿಗಳ ಪ್ರಕಾರ ಅಜಿತ್ ಪಾಂಜಾ ಸಮಾಚಾರ ಮತ್ತು ಪ್ರಸಾರ ಮಂತ್ರಿಯಾಗಿದ್ದಾಗಲೇ ಈ ಕಾಂಟ್ರಾಕ್ಟ್‌ಗೆ ಸಹಿ ಮಾಡಲಾಯಿತು. ದೂರದರ್ಶನದ ಉಪ ಕಾರ್ಯಕ್ರಮಗಳ ಉಪ ಕಂಟ್ರೋಲರ್ (ಫೋಕಸ್) ರಮೇಶ್‌ಚಂದರ್ ಹಾಗೂ ದೂರದರ್ಶನದ ಮಾಜೀ ಪ್ರಧಾನ ನಿರ್ದೇಶಕರ ಕೈವಾಡ ಈ ವ್ಯವಹಾರದಲ್ಲಿ ಇದೆಯೆಂದೂ ತಿಳಿದುಬಂದಿದೆ. ಡಾ. ಜೈನ್‌ಗೆ 60 ಸಾವಿರ ರೂ. ಅಡ್ವಾನ್ಸ್ ಆಗಲೇ ನೀಡಲಾಗಿದೆ.

ಇನ್ನೂ ಗಮನಾರ್ಹ ಸಂಗತಿಯೆಂದರೆ ಈ ವಿಷಯದಲ್ಲಿ ಯಾವುದೇ ವಿಧಿ- ವಿಧಾನಗಳನ್ನು ಅನುಸರಿಸಲಾಗಿಲ್ಲ. ಈ ಕಾಂಟ್ರಾಕ್ಟ್‌ಗೆ ಆದೇಶ ನೇರವಾಗಿ ಪ್ರಧಾನ ಮಂತ್ರಿ ಕಛೇರಿಯಿಂದಲೇ ಬಂದಿದೆ ಎಂದು ನಂಬಲಾಗಿದೆ.

ಪುಟ 8ಕ್ಕೆ

ಮುಂಬೈವಾಸಿಗಳ ಪ್ರಶಂಸಾರ್ಹವರ್ತನೆ ಕೋಮುವಾದಿಗಳ ಹೇಯವರ್ತನೆ

ಮಾರ್ಚ್ 12 ರ ಸರಣಿ ಬಾಂಬ್ ಸ್ಫೋಟಗಳು ನೀಡಿದ ಆಘಾತದಿಂದ ಮುಂಬೈ ಸ್ಫೋಟದ ಸಾಮಾನ್ಯ ಸ್ಥಿತಿಗೆ ಹಿಂದಿರುಗುತ್ತಿರುವಂತೆ ಕೋಮುವಾದಿ, ಫ್ಯಾಸಿಸ್ಟ್ ಶಕ್ತಿಗಳು ಮತ್ತೊಂದು ಕೋಮು ದಳ್ಳುರಿ ಹಚ್ಚಬಹುದೆಂಬ ಜನಗಳ ದೊಡ್ಡ ಭಯ ಇದುವರೆಗೆ ನಿಜವಾಗಿಲ್ಲ. ಮಾಹಿಮ್ ಪ್ರದೇಶದಲ್ಲಿ ಕೆಲವು ಸಣ್ಣ- ಪುಟ್ಟ ಕಲ್ಲೆಸೆತದ ಘಟನೆಗಳನ್ನು ಬಿಟ್ಟರೆ ಇಡೀ ಮುಂಬೈ ನಗರ ಶಾಂತಿ, ಕೋಮುಸೌಹಾರ್ದತೆಯನ್ನು ಕಾದುಕೊಂಡಿದೆ ಎಂಬುದು ಮುಂಬೈವಾಸಿಗಳ ಇದು ಒಂದು ಸಾಧನೆ.

ಸ್ಫೋಟದಿಂದ ಹಾನಿಗೀಡಾದ ಪ್ರತಿಯೊಂದು ಸ್ಥಳದಲ್ಲೂ ಎಲ್ಲಾ ಸ್ತರಗಳ ಸಾವಿರಾರು ಜನ ಪರಿಹಾರ ಕಾರ್ಯಗಳಲ್ಲಿ ಸ್ವಯಂಸ್ಫೂರ್ತಿಯಿಂದ ನೆರವಾದರು. ಇನ್ನೂ ಸಾವಿರಾರು ಮಂದಿ ಜಾತಿ, ಧರ್ಮದ ಭೇದ ಭಾವವಿಲ್ಲದೆ ರಕ್ತದಾನ ಮಾಡಲು ನಗರದ ಎಲ್ಲಾ ಪ್ರಮುಖ ಆಸ್ಪತ್ರೆಗಳಿಗೆ ಧಾವಿಸಿದರು. ಏನೇ ಆಗಲಿ ಮುಂಬೈಯನ್ನು ಮತ್ತೊಮ್ಮೆ ಕೋಮುದ್ವೇಷದ ಕೂಪಕ್ಕೆ ಬೀಳದಂತೆ ತಪ್ಪಿಸಬೇಕು ಎಂಬುದೇ ಈ ಎಲ್ಲಾ ಜನರಲ್ಲಿ ಉಮ್ಮಳಿಸಿದ ಭಾವನೆ. ಅಷ್ಟೇ ಅಲ್ಲ, ಈ ಬಾರಿ ಜನವರಿ ಗಲಭೆಗಳ ಸಮಯದಲ್ಲಾದಂತೆ ಸೇನೆ, ಪೋಲೀಸ್, ಭದ್ರತಾ ಪಡೆಗಳು ನಿಷ್ಕ್ರಿಯರಾಗಿರದೆ ಅತ್ಯಂತ ಎಚ್ಚರದಿಂದ ಇದ್ದರು.

ಬಾಳ ಠಾಕ್ರೆ ಪಾತ್ರ

ಆದರೆ ಮುಂಬೈವಾಸಿಗಳ ಪ್ರಶಂಸಾರ್ಹ ವರ್ತನೆಯಲ್ಲಿ ಕೋಮುವಾದೀ ಮುಖಂಡರ ಪಾತ್ರ ಏನೂ ಇಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕು. ವಾಸ್ತವವಾಗಿ ಶಿವಸೇನೆಯ ಮುಖ್ಯಸ್ಥ ಬಾಳಠಾಕ್ರೆ ಈ ಭಯಾನಕ ದುರಂತದ ಸಮಯದಲ್ಲೂ ಅದರ ರಾಜಕೀಯ ದುರ್ಲಾಭ ಪಡೆಯಲು ನಾಚಿಕೆಯಿಲ್ಲದೆ ಪ್ರಯತ್ನಿಸಿದರು. ಬಾಂಬ್ ಸ್ಫೋಟಗಳ ಮರುದಿನ ಮಾರ್ಚ್ 13ರ ಶಿವಸೇನಾ ದೈನಿಕ "ಸಾಮ್‌ನಾ" ದಲ್ಲಿ ಮುಖಪುಟದಲ್ಲಿ ಬರೆದ ಲೇಖನದಲ್ಲಿ "ಹಿಂದೂಗಳು ಸಹನಶೀಲರಾಗಿರಬೇಕು, ನಡೆಯುತ್ತಿರುವುದನ್ನೆಲ್ಲಾ ಮೌನವಾಗಿ ನೋಡುತ್ತಿರಬೇಕು ಎಂದು ನಿರೀಕ್ಷಿಸಲಾಗುತ್ತಿದೆ" ಎಂದು ವ್ಯಂಗ್ಯವಾಡಿದರು. ಅಷ್ಟೇ ಅಲ್ಲ "ಈಗ ನೋಡೋಣ ಈ ಕೋಮುವಾದಿ ದೇಶದ್ರೋಹಿಗಳನ್ನು ಅವರು ಹೇಗೆ ತಡೆಯುತ್ತಾರೆಂದು. ಶಾಂತಿಯ ಹೆಸರಲ್ಲಿ ಅವರು ಹಿಂದೂಗಳ ಮೇಲೆ ಬಂದೂಕಿನ ಗುರಿಯಿಡುಳ್ಳಲು ಬಿಡುತ್ತಾರೆ. ..... " ಎಂದು ಒದರಾಡಿದರು.

ಈ ಸಂಚಿಕೆಯ ಸಂಪಾದಕೀಯ ತುಂಬೆಲ್ಲಾ ಕೂಡ ಮುಸ್ಲಿಂ ಅಲ್ಪಸಂಖ್ಯಾತರ ವಿರುದ್ಧ ವಿಷ ತೊಟ್ಟಿಕ್ಕುತ್ತಿತ್ತು. ಅವರು ದೇಶದ್ರೋಹಿಗಳು, ಮುಂಬೈಯಲ್ಲಿ ಮುಸ್ಲಿಮರು ವಾಸಿಸುವ ಪ್ರದೇಶಗಳು 'ಮಿನಿ ಪಾಕಿಸ್ತಾನ್' ಗಳು ಎಂದು ಮತ್ತೆ- ಮತ್ತೆ ಹೇಳಿರುವ ಈ ಸಂಪಾದಕೀಯ ಈ ಪ್ರದೇಶಗಳ ವಾಸಿಗಳನ್ನು ಸಂಪೂರ್ಣವಾಗಿ ಚಚ್ಚಿ ಹಾಕಿದ್ದರೆ ಬಾಂಬ್ ಸ್ಫೋಟಗಳೇ ನಡೆಯುತ್ತಿರಲಿಲ್ಲ ಎಂದು ಘೋಷಿಸುತ್ತಾ ಮತ್ತೆ ಎಂದಿನಂತೆ ಬಿಜೆಪಿ-ವಿ.ಹೆಚ್.ಪಿ. ಆರ್.ಆರ್.ಎಸ್. ಶೈಲಿಯಲ್ಲಿ ಹಿಂದುತ್ವ ಎಂದರೆ ದೇಶಪ್ರೇಮ ಎಂದು ಸಾರಾಸಗಟಾಗಿ ಜಾತ್ಯಾತೀತತೆಯನ್ನು, ಜಾತ್ಯತೀತ ಶಕ್ತಿಗಳನ್ನು ಹೀಗಳೆಯಿತು.

ಮಾರ್ಚ್ 14 ರಂದು ಮುಂಬೈಗೆ ಭೇಟಿ ನೀಡಿದ ಎಲ್.ಕೆ. ಅಡ್ವಾಣಿಯವರ ವರ್ತನೆಯೇನೂ ಇದಕ್ಕಿಂತ ಉತ್ತಮವಿರಲಿಲ್ಲ. ಅವರೊಂದು ಪತ್ರಿಕಾಸಮ್ಮೇಳನ ನಡೆಸಿದರು. ಅವರ ಏಕೈಕ ಉದ್ದೇಶ ಇಡೀ ಘಟನೆಗೆ ಕೋಮುವಾದೀ ಬಣ್ಣ ಕೊಡುವುದು. ಈ ಬಾಂಬ್ ಸ್ಫೋಟಗಳು ಗಲಭೆಗಳ ಪರಿಣಾಮ ಅಲ್ಲ ಎಂದರು; ಡಿಸೆಂಬರ್, ಜನವರಿ ತಿಂಗಳ ಗಲಭೆಗಳಿಗೂ ಅಯೋಧ್ಯೆಗೂ ಏನೂ ಸಂಬಂಧವಿಲ್ಲ ಎಂದು ಮತ್ತೆ ಹೇಳಿದರು. ನಂತರ ಅವರು ಬಾಳಾಠಾಕ್ರೆ ಬಳಿಗೂ ಹೋದರಂತೆ. ಮಾಚ್ 15ರ 'ಸಾಮ್‌ನಾ' ದಲ್ಲಿ ಅಡ್ವಾಣಿ ಠಾಕ್ರೆ ಒಟ್ಟಿಗೇ ನಗೆ ಬೀರುವ ಫೋಟೋ ಕೂಡಾ ಪ್ರಕಟವಾಯಿತು.

ಸಿಪಿಐ(ಎಂ) ಪಾತ್ರ

ಸ್ಫೋಟದ ಸುದ್ದಿ ತಿಳಿದ ಕೂಡಲೇ ಸಿಪಿಐ(ಎಂ) ತಕ್ಷಣ ರಕ್ತದಾನಕ್ಕೆ ಸ್ವಯಂಸೇವಕರನ್ನು ಕಳಿಸಬೇಕೆಂದು ಮುಂಬೈಯಲ್ಲಿದ್ದ ತನ್ನೆಲ್ಲಾ ಘಟಕಗಳಿ ನಿರ್ದೇಶನ ನೀಡಿತು. ಹಲವು ಸಿಪಿಐ(ಎಂ) , ಸಿ.ಐ.ಟಿ.ಯು, ಡಿ.ವೈ.ಎಫ್.ಐ. ಸದಸ್ಯರು ಸಮೀಪದ ಆಸ್ಪತ್ರೆಗಳಿಗೆ ಧಾವಿಸಿ ರಕ್ತದಾನ ಮಾಡಿದರು. ರಕ್ತದಾನ ಶಿಬಿರಗಳನ್ನು ಏರ್ಪಡಿಸುವ ಯೋಚನೆಯೂ ಇತ್ತು. ಆದರೆ ಸಂಜೆಯ ವೇಳೆಗೆ ಎಲ್ಲಾ ರಕ್ತಬ್ಯಾಂಕುಗಳು ತುಂಬಿದ್ದುದರಿಂದ ಅದರ ಅಗತ್ಯ ಬೀಳಲಿಲ್ಲ. ಬಾಂಬ್ ಸ್ಫೋಟಗಳನ್ನು ಖಂಡಿಸಿ, ಏನೇ ಬರಲಿ ಜನ ಕೋಮುಸೌಹಾರ್ದತೆ, ಶಾಂತಿಯನ್ನು ಕಾಪಾಡಿಕೊಳ್ಳಬೇಕೆಂಬ ಕರೆ ನೀಡುವ ಬೋರ್ಡ್‌ಗಳನ್ನು ತಕ್ಷಣ ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳು ಹಾಕಿದವು. ಈಗ ಸರಕಾರ ಘೋಷಿಸಿರುವ ಪರಿಹಾರ ಸ್ಫೋಟ ಪೀಡಿತರಿಗೆ ಬೇಗನೇ ದೊರೆಯುವಂತೆ ಮಾಡಲು ಪಕ್ಷ ಪ್ರಯತ್ನಿಸುತ್ತಿದೆ.

(ಐ.ಎನ್.ಎಸ್ ಸುದ್ದಿ)

"ಪವಾರ್, ಹಿಂದೆ ಹೋಗು"

ಇದು ಮುಂಬೈಯ ಒಂದು ಪ್ರಮುಖ ದೊಡ್ಡ ಆಸ್ಪತ್ರೆ ಕೆ.ಸಿ.ಎಂ. ಆಸ್ಪತ್ರೆಯಲ್ಲಿ ಬಾಂಬ್ ಸ್ಫೋಟದಿಂದ ಪೀಡಿತ ಜನಗಳಿಗೆ ನೇರವಾಗಲು ಧಾವಿಸಿ ಬಂದ ಮುಂಬೈ ಜನ ಆಸ್ಪತ್ರೆಗೆ ಭೇಟಿ ನೀಡಲು ಬಂದಿದ್ದ ಮುಖ್ಯಮಂತ್ರಿ ಶರದ್‌ಪವಾರ್‌ಗೆ ನೀಡಿದ ಸ್ವಾಗತ. ಮುಂಬೈಯ ಜನಗಳು ಹಿಂದಿನ ಮುಖ್ಯಮಂತ್ರಿ ಸುಧಾಕರರಾವ್ ನಾಯಕ್‌ರಿಂದ ಬೇಸತ್ತು ಹೋಗಿದ್ದರು. ಆದರೆ ಹೊಸ ಮುಖ್ಯಮಂತ್ರಿ ಶರದ್‌ಪವಾರ್ ಬಗ್ಗೆ ಅವರಿಗೆ ಭ್ರಮೆಗಳಿಲ್ಲ. ಅವರ ಹಿಂದಿನ ಆಡಳಿತ ಕಾಲದಲ್ಲಿ ನಡೆದ ಭ್ರಷ್ಟ ಭೂ ಹಗರಣಗಳನ್ನು ಜನ ಇನ್ನೂ ಮರೆತಿಲ್ಲ. ಮುಂಬೈಯ ಕಳ್ಳಸಾಗಾಣಿಕೆದಾರರು- ಬಿಲ್ಡರ್‌ಗಳ ಭ್ರಷ್ಟಕೂಟ, ಕ್ರಿಮಿನಲ್‌ಗಳ ಕಳ್ಳಜಗತ್ತಿನೊಡನೆ ಪವಾರರನ್ನು ಮುಂಬೈ ಜನ ಗುರುತಿಸುತ್ತಾರೆ. ಈ ಕೂಟಕ್ಕೆ ಸಮೀಪವರ್ತಿಗಳಾಗಿರುವ ಇಬ್ಬರು ಕಾಂಗ್ರೆಸ್ (ಐ) ಎಂ.ಎಲ್.ಎ.ಗಳು ಪಪ್ಪು ಕಲಾಣಿ ಹಾಗೂ ಹಿತೇಂದ್ರ ಠಾಕುರ್ ಈಗ ಕ್ರಿಮಿನಲ್ ಆಪಾದನೆಗಳ ಮೇಲೆ ಜೈಲಿನಲ್ಲಿದ್ದಾರೆ. ಪವಾರ್ ಮುಖ್ಯಮಂತ್ರಿಯಾದ ಮೇಲೆ ಈಗ ಅವರ ಬಿಡುಗಡೆಯಾಗಬಹುದು ಎಂದು ನಿರೀಕ್ಷಿಸಲಾಗುತ್ತಿದೆ!

ಬಾಂಬ್ ಸ್ಫೋಟದ ನಂತರ ಜನ ನೆರವಿಗೆ ಧಾವಿಸುತ್ತಿದ್ದಾಗ ಕಾಂಗ್ರೆಸ್(ಐ) ಮಾತ್ರ ಗೊಂದಲಪುರವಾಗಿತ್ತು. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ವಿರುದ್ಧವಾದ ಹೇಳಿಕೆ ನೀಡುತ್ತಿದ್ದರು. ಕೇಂದ್ರ ಗೃಹ ಮಂತ್ರಿ ಚವಾಣರ ಮತ್ತು ಮುಖ್ಯಮಂತ್ರಿ ಪವಾರ್‌ರ ದೀರ್ಘ ವೈರತ್ವ ಇಲ್ಲೂ ಎದ್ದು ಕಾಣುತ್ತಿತ್ತು. ಮುಂಬೈಗೆ ಬಂದ ಪ್ರಧಾನ ಮಂತ್ರಿಗಳಂತೂ ತಮ್ಮ 'ಆರ್ಥಿಕ ಸುಧಾರಣೆ'ಗಳನ್ನೂ ಹಾಡಿ ಹೊಗಳುತ್ತಾ ಇವನ್ನು ದಾರಿತಪ್ಪಿಸಲಿಕ್ಕಾಗಿಯೇ ಈ ಸ್ಫೋಟ ಎಂದರು- ಮುಂಬೈಯಲ್ಲಿ ಅಯೋಧ್ಯಾ ನಂತರ ಗಲಭೆಗಳು ಉಂಟುಮಾಡಿದ ಕೋಮು ಧ್ರುವೀಕರಣ ಇಂತಹ ಸ್ಫೋಟಗಳಿಗೆ ಫಲವತ್ತಾದ ಮಣ್ಣು ಒದಗಿಸಿದೆ ಎಂದು ಹೇಳಲೇ ಇಲ್ಲ.

ಕೋಮು ಸೌಹಾರ್ದ ವಿಜಯನಗರ ಸಾಮ್ರಾಟ ಬುಕ್ಕರಾಯನ ಮಾದರಿ

ಡಿ. 6 ರಂದು ಮಸೀದಿ ಉರುಳುತ್ತಿರುವ ಸುದ್ದಿ ತಿಳಿದೂ ಏನೂ ಮಾಡದೆ ನಿರ್ವೀರ್ಯರಂತೆ ಕೈ ಕಟ್ಟಿ ಕುಳಿತ, ನಂತರ ಸಾವಿರಾರು ಜೀವಗಳು ಬಲಿಯಾಗುತ್ತಿದ್ದರೂ ಕಣ್ಮುಚ್ಚಿ ಕಿವಿ ಮುಚ್ಚಿ ಕುಳಿತ ನರಸಿಂಹರಾಯರ ಉದಾಹರಣೆಯನ್ನು ನೋಡಿದ್ದೇವೆ. ಹಿಂದೂ ಧರ್ಮದ ರಕ್ಷಣೆಗಾಗಿಯೇ ಅವತರಿಸಿ ಮುಸ್ಲಿಮರ ಆಕ್ರಮಣವನ್ನು ಎದುರಿಸಿ ಮಲೆತು ನಿಂತು ವಿಜಯನಗರ ಸಾಮ್ರಾಜ್ಯವನ್ನು ಕಟ್ಟಿದ ಸುಪ್ರಸಿದ್ಧ ಪುರುಷರಾದ ಹಕ್ಕ-ಬುಕ್ಕರ ಬಗ್ಗೆ ಬಹಳ ಜನಕ್ಕೆ ತಿಳಿದಿದೆ. ಇಂತಹ ಹಿಂದು ಧರ್ಮ ಸಂಸ್ಥಾಪನಾರಲ್ಲೊಬ್ಬನಾದ ಬುಕ್ಕರಾಯನು ಇಂತಹುದೇ ಪ್ರಸಂಗದಲ್ಲಿ ವೈಷ್ಣವರು ಬೇರೆ ಧರ್ಮದವರಾದ ಜೈನರ ಬಸದಿಗಳಿಗೆ ಹಾನಿ ಮಾಡಿದಾಗ ಏನು ಮಾಡಿದನೆಂಬುದು ಲೋಕಕ್ಕೆ ಮಾದರಿಯಾಗುವ ಉದಾಹರಣೆ. ಹಿಂದೆ ಅನೇಕ ಬಾರಿ ಕರ್ನಾಟಕದ ಚಾಲುಕ್ಯರಿಗೂ ತಮಿಳುನಾಡಿನ ಪಲ್ಲವರಿಗೂ, ಹಾಗೆಯೇ ರಾಷ್ಟ್ರಕೂಟರಿಗೂ ಚೋಳರಿಗೂ ತುಂಗಭದ್ರಾ ನದಿ ಕೃಷ್ಣಾನದಿಗಳ ನಡುವಣ ದೋ-ಆಬ್ ಪ್ರದೇಶಕ್ಕಾಗಿ ಹಲವಾರು ಬಾರಿ ಭೀಕರ ಯುದ್ಧವಾದ ನಂತರ ಈ ಪ್ರದೇಶಗಳಲ್ಲಿ ಆಳಿದ ಬಹಮನಿ ಸುಲ್ತಾನರುಗಳಿಗೂ-ವಿಜಯನಗರದ ಸಾಮ್ರಾಟರಿಗೂ ಅದೇ ಕಾರಣಕ್ಕಾಗಿ ಯುದ್ಧವಾದುದನ್ನು ಹೇಳಿ ಬೊಬ್ಬೆಯಿಡುವ ಆರೆಸ್ಸೆಸ್ ಪರಿವಾರ ಬುಕ್ಕರಾಯನ ಕಾಲದ ಈ ಉದಾಹರಣೆಯಿಂದ ಪಾಠ ಕಲಿಯಬೇಕಾಗಿದೆ.

ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿರುವ ಭಂಡಾರ ಬಸದಿಯ ಪೂರ್ವಭಾಗದಲ್ಲಿ ಒಂದು ಶಾಸನವನ್ನು ಕಡೆದು ನಿಲ್ಲಿಸಲಾಗಿದೆ. ಈ ಶಾಸನದ ಕಾಲ 1368ನೇ ಇಸವಿ. ಇದೇ ಶಾಸನದ ವಸ್ತು ಕೆಲವು ಬದಲಾವಣೆಗಳೊಂದಿಗೆ ಮಾಗಡಿ ತಾಲ್ಲೂಕಿನ ಕಲ್ಯಾ ಅಥವಾ ಕಲ್ಲೆಹದಲ್ಲಿರುವ ಶಾಸನದಲ್ಲಿಯೂ ಕಂಡುಬಂದಿದೆ. ಈ ಶಾಸನದ ಮುಖ್ಯ ಭಾಗವನ್ನು ಅದೇ ಶೈಲಿಯನ್ನುಳಿಸಿಕೊಂಡು ಆದರೆ ಅಲ್ಲಿಯ ನಡುಗನ್ನಡ ಶಬ್ದಗಳಿಗೆ ಬದಲಾಗಿ ಈಗಿನ ಕನ್ನಡ ಶಬ್ದಗಳನ್ನು ಬಳಸಿ ಕೆಳಗೆ ನೀಡಲಾಗಿದೆ.

ಶ್ರೀ ವೀರ ಬುಕ್ಕರಾಯನು ಪೃಥ್ವೀ ರಾಜ್ಯವ ಮಾಡುವ ಕಾಲದಲ್ಲಿ ಜೈನರಿಗೂ ಭಕ್ತರಿಗೂ (ವೈಷ್ಣವರಿಗೂ) ಸಂವಾಜ (ವ್ಯಾಜ್ಯವಾದಲ್ಲಿ ಆನೆಯಗೊಂದಿ, ಹೊಸಪಟ್ಟಣ, ಪೆನುಗೊಂಡೆ ಕಲ್ಲೆಹದ ಪಟ್ಟಣದೊಳಗಾದ ಸಮಸ್ತ ನಾಡ ಭವ್ಯ(ಜೈನ) ಜನಗಳು ಆ ಬುಕ್ಕರಾಯಂಗೆ ಭಕ್ತರು (ವೈಷ್ಣವರು) ಮಾಡುವ ಅನ್ಯಾಯಂಗಳನು ಬಿನ್ನಹ ಮಾಡಲಾಗಿ ಕೋವಿಲ್ ತಿರುಮಲೆ ಪೆರುಮಾಳ್ (ತಿರುಪತಿಯ)ಕೋವಿಲ್ (ಕೋವಿಲ್ ಎಂದರೆ ತಮಿಳಿನಲ್ಲಿ ದೇವಸ್ಥಾನ) ತಿರುನಾರಾಯಣಪುರ ಮುಖ್ಯವಾದ ಸಕಳಾಚಾರ್ಯರೂ, ಸಕಳ ಸಮೀಗಳು (ಧರ್ಮದವರೂ)ಸಕಳ ಸಾತ್ವಿಕರೂ, ನಾಲ್ವತ್ತೆಂಟು ಜನಂಗಳು, ಸಾವಂತ ಬೋವಕ್ಕಳೂ, ತಿರಿಕುಲ, ಜಾಂಬುವ ಕುಲವೊಳಗಾದ

ಹದಿನೆಂಟು ನಾಡ ಶ್ರೀ ವೈಷ್ಣವರ ಕೈಯಲ್ಲೂ ಜೈನರ ಕೈವಿಡಿದು ಕೊಟ್ಟ ಮಹಾರಾಯನು

1.ವೈಷ್ಣವ ದರ್ಶನಕ್ಕೂ ಜೈನದರ್ಶನಕ್ಕೂ ಭೇದವಿಲ್ಲೆಂದು,
2.ಯೀ ಜೈನ ದರ್ಶನಕ್ಕೆ ಪೂರ್ವ ಮರಿಯಾದೆಯಲು ಪಂಚ ಮಹಾವಾದ್ಯಂಗಳೂ, ಕಳಶವೂ ಸಲುವುದು.
3.ಜೈನ ದರ್ಶನಕ್ಕೆ ವೈಷ್ಣವರ ದೆಸೆಯಿಂದ ಹಾನಿ ವೃದ್ಧಿ ಯಾದರೂ ವೈಷ್ಣವ ಹಾನಿ ವೃದ್ಧಿಯಾಗಿ ಪಾಲಿಸುವರು.
4.ಈ ಮರ್ಯಾದೆಯಲು ಎಲ್ಲಾ ರಾಜ್ಯ ದೊಳಗುಳ್ಳಂತಹ ಬಸ್ತಿ (ಜೈನರ ದೇವಾಲಯ) ಗಳಿಗೆ ಶ್ರೀ ವೈಷ್ಣವರು ಶಾಸನ ನಟ್ಟು ಪಾಲಿಸುವರು.
5ಚಂದ್ರಾರ್ಕಸ್ಥಾಯಿಯಾಗಿ ವೈಷ್ಣವ ಸಮಯವು ಜೈನ ದರ್ಶನವನ್ನೂ ರಕ್ಷಿಸಿಕೊಂಡು ಬಹೆವು (ಬರುವೆವು)
6.ವೈಷ್ಣವರೂ, ಜೈನರೂ ಆ ವೊಂದು ಭೇದವಾಗಿ ಕಾಣಲಾಗದು.
7.ತಿರುಮಲೆ (ತಿರುಪತಿ) ತಾತಯ್ಯಂಗಳು ಸಮಸ್ತ ರಾಜ್ಯದ ಜೈನ ಜನಂಗಳ ಅನುಮತದಿಂದ (ಒಪ್ಪಿಗೆಯಿಂದ) ಬೆಳುಗುಳದ ತೀರ್ಥದಲ್ಲಿ (ಶ್ರವಣಬೆಳಗೊಳದಲ್ಲಿ) ವೈಷ್ಣವ ಅಂಗರಕ್ಷೆಗೋಸುಗ (20 ಜನ ವೈಷ್ಣವ ಕಾವಲುಭಟರ ಪಡೆಯನ್ನು ಶ್ರವಣಬೆಳಗೊಳದಲ್ಲಿ ರಕ್ಷಣೆಗಾಗಿ ನಿಲ್ಲಿಸುವುದಕ್ಕಾಗಿ)ಜೈನ ಬಾಗಿಲು ಕಟ್ಟಳೆಯಾಗಿ ಮನೆ ಮನೆಗೆ ವರ್ಷಕ್ಕೆ ಒಂದು ಹ ಣ ಕೊಡಬೇಕೆಂದೂ ಇದು ಚಂದ್ರ ಸೂರ್ಯರಿರುವವರೆಗೂ ತಪ್ಪದೆ ನಡೆಯಬೇಕೆಂದೂ ವಿಧಿಸಿದ.

ಜೈನರ ಮೇಲೆ ಧಾಳಿಯೆಸಗಿ ಅವರಿಗೆ ತೊಂದರೆ ಮಾಡುತ್ತಿದ್ದ ವೈಷ್ಣವರನ್ನು ಜೈನರ ಯಾತ್ರಾ ಸ್ಥಳವಾದ ಶ್ರವಣಬೆಳಗೊಳಕ್ಕೆ ಕರೆಸಿ ವೈಷ್ಣವರ ಕೈಯಲ್ಲಿ ವೈಷ್ಣವ ಮತಕ್ಕೂ ಜೈನ ಮತಕ್ಕೂ ಭೇದವಿಲ್ಲೆಂದು, ಜೈನರಿಗೆ ಯಾವುದೇ ಹಾನಿ ವೃದ್ಧಿಗಳಾದರೆ ಅದು ವೈಷ್ಣವರಿಗೂ ಹಾನಿವೃದ್ಧಿಯಾಗುತ್ತದೆಂದು, ಜೈನರ ಬಸದಿಗಳನ್ನು ವೈಷ್ಣವರ ಕಾವಲುಭಟರು ರಕ್ಷಿಸಬೇಕೆಂದು ನಿಯಮಿಸಿದ ವೀರ ಬುಕ್ಕರಾಯನ ಕೋಮು ಸೌಹಾರ್ದದ ಮಾದರಿ ಭಾರತದಲ್ಲಿ ಇಂದು ಎಲ್ಲರಿಗೂ ಮಾದರಿಯಾಗಲಿ.

ಜೆ.ಎನ್. ನಾಗರಾಜ್


ಆ ಭವ್ಯ ಮುಂಬೈ ಪುನರ್ಜನ್ಮ ಪಡೆಯಲಿ

ಪಿ.ಡಿ. ಸಂಪಾದಕೀಯ

ಮುಂಬೈಯ ಸ್ಫೋಟಗಳು ದೇಶದಲ್ಲಿನ ಆತಂಕ ಮೂಡಿಸಿವೆ. ಮುಂಬೈ ಜನತೆ ಅದನ್ನೆದುರಿಸಿದ ರೀತಿ ಪ್ರಶಂಸೆಗೂ ಪಾತ್ರವಾಗಿದೆ. ಕೆಲವರಿಗೆ ದೇಶದ ವಾಣಿಜ್ಯ ರಾಜಧಾನಿ ಆದರೆ, ಕಮ್ಯುನಿಸ್ಟರಿಗೆ ಅದು 1940 ರ ವೇಳೆಗೆ ದೇಶಕ್ಕೆ ದಾರಿ ತೋರಿದ ಸಮರಧೀರ ಕಾರ್ಮಿಕ ನಗರ. ಆ ಮುಂಬೈ ಮತ್ತೆ ಮತ್ತೆ ಬರಲಿ ಎಂದಿದೆ ಸಿಪಿಐ(ಎಂ) ಕೇಂದ್ರ ಸಮಿತಿಯ ಪತ್ರಿಕೆ ಪೀಪಲ್ಸ್ ಡೆಮಾಕ್ರಸಿಯ ಸಂಪಾದಕೀಯ.

“ಇದೊಂದು ಅಘೋಷಿತ ಯುದ್ಧವೇ. ಎರಡೂವರೆ ಗಂಟೆಗಳಲ್ಲಿ 13 ಅಗಾಧ ಶಕ್ತಿಶಾಲಿ ಸ್ಫೋಟಗಳು- ಅದರಿಂದ ಕಣ್ಣಎವೆ ಮಿಟುಕಿಸುವಷ್ಟರಲ್ಲೇ ಇನ್ನೂರಕ್ಕೂ ಹೆಚ್ಚು ಜನ ಮಾಯ. ಇನ್ನೂ ಸಾವಿರದಿನ್ನೂರು ಜನಕ್ಕೆ ತೀವ್ರಗಾಯ ಅಥವಾ ತೀವ್ರ ಅಂಗನ್ಯೂನತೆ. ಮುಂಬೈಯನ್ನು ದೇಶದ ವಾಣಿಜ್ಯ ರಾಜಧಾನಿ ಎನ್ನುತ್ತಾರೆ” ಅದರಲ್ಲಿ ಸಂಶಯವಿಲ್ಲ. ಅದಕ್ಕಿಂತ ಹೆಚ್ಚಾಗಿ ನಮಗೆ, ಕಮ್ಯುನಿಸ್ಟರಿಗಂತೂ ಮುಂಬೈಯೆಂದರೆ ನೆನಪಿಗೆ ಬರುವುದು ಬ್ರಿಟೀಷ್ ಆಳ್ವಿಕೆಯ ಕೊನೆಯ ದಿನಗಳಲ್ಲಿ ಕಾರ್ಮಿಕ ವರ್ಗದ ಹೋರಾಟಗಳ ಕೇಂದ್ರವಾಗಿದ್ದ ನಗರ. ಬಹುಶಃ ಯುವ ಪೀಳಿಗೆಗಳಿಗೆ ಇದರ ಅರಿವೇ ಇರಲಿಕ್ಕಿಲ್ಲ. ಆದರೆ ಬ್ರಿಟಿಶ್‌ನಾವಿಕ ಪಡೆಯ ಭಾರತೀಯ ನಾವಿಕರು ದಂಗೆಯೆದ್ದಾಗ ಅವರ ಬೆಂಬಲಕ್ಕೆ ನಿಂತು ಘೋಷಿಸಿದ್ದು ಮುಂಬೈ ಕಾರ್ಮಿಕ ವರ್ಗ. ಬ್ರಿಟೀಷರೊಡನೆ ಮುಂಬೈಯ ಬೀದಿಗಳಲ್ಲಿ ಘರ್ಷಣೆಗಿಳಿದು ನಾವಿಕರಿಗೆ ಆಹಾರ ಮತ್ತು ಇತರ ಅಗತ್ಯಗಳನ್ನು ಸಾಗಿಸಿ ಒದಗಿಸಿದವರು ಮುಂಬೈ ಕಾರ್ಮಿಕರು. ಇದರಲ್ಲಿ ಕಾರ್ಮಿಕವರ್ಗದ ನೂರಾರು ಮಂದಿ ತಮ್ಮ ಪ್ರಾಣವನ್ನೇ ಅರ್ಪಿಸಿದರು. ಬ್ರಿಟೀಷ್ ಆಳ್ವಿಕೆಯ ಕೊನೆಯ ದಿನಗಳಲ್ಲಿ ಯುವಜನರ ಹೃದಯದಲ್ಲಿ ಜ್ವಾಜಲ್ಯಮಾನವಾಗಿದ್ದ ಚಿತ್ರ ಇದು.

ಆ ಮುಂಬೈಯನ್ನೀಗ ಶಿಲುಬೆಗೇರಿಸಲಾಗುತ್ತಿದೆ. ಮೊದಲು ಡಿಸೆಂಬರ್ ಕೋಮುದಳ್ಳುರಿ ನಂತರ ಜನವರಿಯಲ್ಲಿ. ಈಗ ಬರ್ಬರ ಸಾವು-ವಿನಾಶದ ರಕ್ಕಸ ಕೃತ್ಯ. ಇದನ್ನು ನಡೆಸಿದವರಾರು, ಏಕೆ ನಡೆಸಿದರು? - ನಮಗಿನ್ನು ಗೊತ್ತಿಲ್ಲ. ಊಹಾಪೋಹಗಳು ಸಾಗಿವೆ. ಹಲವು ದಿಕ್ಕುಗಳತ್ತ ಹಲವು ಬೊಟ್ಟುಗಳಿವೆ. ಎಲ್ಲಕ್ಕಿಂತ ಮುಖ್ಯವಾದ ಘೋಷಣೆಯೆಂದರೆ ಈ ಕೃತ್ಯದ ಮೆದುಳು ಹೊರದೇಶವೊಂದರದಲ್ಲಿದೆ ಎಂಬ ಸರಕಾರದ ಘೋಷಣೆ. ಪ್ರತಿಫಲ ಆಕರ್ಷಕವಾಗಿದ್ದರೆ ಹಣಕ್ಕಾಗಿ ಎಂತಹ ಕೃತ್ಯಮಾಡಲು ಸಿದ್ಧವಿರುವ ಕೈಗಳ ಸಂಖ್ಯೆ ದೇಶದಲ್ಲಿದೆ. ನಮ್ಮ ರಾಜಕೀಯ ಜೀವನದಲ್ಲಿ ಇಂತಹ ತುಚ್ಛ ದೃಶ್ಯಗಳನ್ನು ನಾವು ಪ್ರತಿದಿನ ಕಾಣುತ್ತಿದ್ದೇವೆ. ಹಣ, ಇನ್ನಷ್ಟು ಹಣ- ಇಷ್ಟಿದ್ದರೆ ಸಾಕು ದೇಶಕ್ಕೆ ಸಂವಿಧಾನಕ್ಕೆ ವಿಧೇಯರಾಗಿರುತ್ತೇವೆ. ಎಂಬ ಪ್ರತಿಜ್ಞೆಯನ್ನೇ ನೀರು ಕುಡಿದಂತೆ ಮುರಿಯುವ, ಬದಲಿಸುವ ದೃಶ್ಯ ನಮಗೆ ಈಗ ಹೊಸದಲ್ಲ. ಹಾಗಿರುವಾಗ ಹಣ ಚೆಲ್ಲಿದರೆ ಈ ಕೃತ್ಯ ನಡೆಸಲು “ಕೈಗಳು” ಸಿಕ್ಕಿರೆ ಆಶ್ಚರ್ಯವೇನು? ಅದು ಸರಿ, ಆದರೆ ಹೊರಗಿರುವ “ಮೆದುಳಿ”ನ ಕಥೆಯೇನು? ಇದುವರೆಗೆ ದೃಢ ಸಂಕೇತವಂತೂ ಹೊರಬಿದ್ದಿಲ್ಲ. ಕನಿಷ್ಠ, ಸಾರ್ವಜನಿಕರಿಗಂತೂ ತಿಳಿಸಿಲ್ಲ. “ಸಂಶಯದ ಸೂಜಿ”ಯ ಬಗ್ಗೆ ಪತ್ರಿಕೆಗಳಲ್ಲಿ ಊಹಾಪೋಹ ನಡೆದಿದೆ. ಆದರೆ ಸಂಶಯವಷ್ಟೇ ಸಾಲದು-ಗಟ್ಟಿ ಪುರಾವೆಯೂ ಬೇಕು.



ಆದರೆ “ಕೈಗಳು” ಬಗ್ಗೆ ಸ್ವಲ್ಪ ಪ್ರಗತಿಯಾಗಿದೆ. ಮುಂಬಯಿಯ ಕಳ್ಳಸಾಗಣೆಕೆ ಜಗತ್ತಿನ, ಮಾಫಿಯಾ ಸಾಮ್ರಾಜ್ಯದ ಅತಿರಥ-ಮಹಾರಥರತ್ತ ಆಪಾದನೆಯ ಬೊಟ್ಟು ತೋರಿಸಲಾಗುತ್ತಿದೆ. ಇವರೊಂದಿಗೆ ಹಿಂದೆ ಸಹವಾಸ ಮಾಡಿದ್ದು, ಉದ್ದೇಶ ಪೂರ್ವಕವಾಗಿ ಅವರ ಆಟಾಟೋಪಗಳ ಬಗ್ಗೆ ಕಣ್ಣುಮುಚ್ಚಿ ಕೂತದ್ದು ನೆನಪಿದೆಯೇ? ಚುನಾವಣೆಗಳನ್ನು ಗೆಲ್ಲಲು ಅವರು ಬೇಕಾಗಿತ್ತು. ಮುಂಬೈ ಕಾರ್ಪೋರೇಷನ್‌ನಲ್ಲಿ ಮಹಾರಾಷ್ಟ್ರ ವಿಧಾನಸಭೆಯಲ್ಲಿ ಅಧಿಕಾರ ಗಿಟ್ಟಿಸಲು ಅವರ ಹಣಬಲ-ಗೂಂಡಾಬಲಗಳನ್ನು ಅಂಗುಲ-ಅಂಗುಲ ಬಳಸಲಾಯಿತು. ಆದ್ದರಿಂದ ಈ “ಕೈಗಳು” ಸಿಕ್ಕರೂ ಅವುಗಳ ನಾಲಗೆಗಳು ಹೊರಳದಿರಲಿ ಎಂದು ಸಿಕ್ಕ ಕೂಡಲೇ ಅವುಗಳ ಬಾಯಿ ಮುಚ್ಚಿಸಲಾಗುವುದು. ಹೀಗೆ “ದೇಶದ ಹೊರಗಿರುವ ಮೆದುಳು” ಆಡಳಿತ ವಲಯಗಳಲ್ಲಿ ಕೇವಲ, ಊಹಾಪೋಹದ, ಚರ್ಚೆಯ, ಕೊನೆಯಿಲ್ಲದ ಕಿತ್ತಾಟದ ವಿಷಯವಾಗಿಯಷ್ಟೇ ಉಳಿಯುವುದು.

ನಿಜ. ಇವೆಲ್ಲಾ ಇನ್ನೂ ಸದ್ಯದ ಗರ್ಭದಲ್ಲಡಗಿವೆ. ಆದರೆ ಆಗಲೇ ಡಿಸೆಂಬರ್, ಜನವರಿ ಗಲಭೆಗಳನ್ನು ನಡೆಸಿದ ಕರಾಳಶಕ್ತಿಗಳು ಅಲ್ಲಿ-ಇಲ್ಲಿ ಕರಾಳ ಸೂಚನೆಗಳನ್ನು ತೋರಿಸುತ್ತಿದ್ದಾರೆ. ಅವರ ಬಗ್ಗೆ ಎಚ್ಚರದಿಂದಿರಿ!

ಮುಂಬೈಯ ಜನ ಭಾರಿ ವಿಪತ್ತಿನ ಗಳಿಗೆಯ ನಂತರ ಮತ್ತೆ ಪುಟಿದೇಳುವ ತಮ್ಮ ಸಾಮರ್ಥ್ಯ ತೋರಿದ್ದಾರೆ. ಸತತವಾಗಿ ಮೂರು ತಿಂಗಳು ಇಂತಹ ಧ್ವಂಸಕಾರೀ ಹೊಡೆತ ತಿಂದರೂ ತಕ್ಷಣ ನಗರದಲ್ಲಿ ಸಾಮಾನ್ಯ ಸ್ಥಿತಿ ಮರಳುವಂತೆ ಮಾಡಲು ಅವರು ಹಿಂಜರಿಯಲಿಲ್ಲ. ತಮ್ಮ ಪ್ರೀತಿಯ ನಗ್ಗರದಲ್ಲಿ ಅರಾಜಕತೆ ಇರಬಾರದು ಎಂಬ ಅವರ ದೃಢ ಮನಸ್ಸು ದೇಶದ ಎಲ್ಲೆಡೆ, ವಿದೇಶಗಳಲ್ಲೂ ಪ್ರಶಂಸೆ ಪಡೆದಿದೆ. ಈ ದುಷ್ಕೃತ್ಯವನ್ನು ನುಂಗಿಕೊಂಡು ನಗರದ ದೈನಂದಿನ ಜೀವನ ಅಸ್ತವ್ಯಸ್ತಗೊಳ್ಳದಂತೆ ನೋಡಿಕೊಂಡಿದ್ದಾರೆ. ಈ ಅತ್ಯಂತ ಕಠಿಣ ಪರೀಕ್ಷಾ ಸಮಯದಲ್ಲಿ ಅವರು ತಮ್ಮ ಬಲವನ್ನೆಲ್ಲಾ ಉಪಯೋಗಿಸಿ ಧರ್ಮ, ಭಾಷೆಯ ಅಡ್ಡಗೋಡೆಗಳನ್ನೆಲ್ಲಾ ಬದಿಗೆ ತಳ್ಳಿ ನೆರವಿನ ಅವಶ್ಯಕತೆಯಿರುವವರಿಗೆಲ್ಲಾ ನೆರವು ಒದಗಿಸಲು ಧಾವಿಸಿದ್ದಾರೆ.

ಮುಂಬೈ ಜನತೆಗೆ ನಮ್ಮ ಹಾರ್ದಿಕ ನಮನ. ಮುಂಬೈ ಮತ್ತೆ ಮುಂಬೈಯಾಗುತ್ತಿದೆ. ದೇಶದ ಇತರರಿಗೆ ದಾರಿ ತೋರಿದ ನಲ್ವತ್ತರ ದಶಕದ ಮುಂಬೈಯಾಗುತ್ತದೆ. ಎಂದು ಆಶಿಸೋಣ. ಈ ಭವ್ಯ ಮುಂಬೈ ಪುನರ್ಜನ್ಮ ಪಡೆಯಲಿ. ಈ ಮುಂಬೈ ಸಾವಿರ ವರ್ಷ ಬಾಳಲಿ.

ಮಹಿಳಾ ಸಂಘಟನೆಗಳಿಂದ ಕೋಮು ಗಲಭೆಗಳ ಅನ್ವೇಷಣೆ ಗಾಯದ ಮೇಲೆ ಬರೆ

‘ಅವರು ನಮ್ಮನ್ನು ಮನೆಯಿಂದ ಹೊರಗೆಳೆದರು. ತಂದೆ ತಾಯಿ ಹಾಗೂ ತಂಗಿಯರನ್ನು ಹೊಡೆಯಲು ಆರಂಭಿಸಿದರು........’

‘ಅವರು ನಮ್ಮ ಬಟ್ಟೆಗಳನ್ನು ಸೆಳೆದರು ನಂತರ ಅತ್ಯಾಚಾರವೆಸಗಿದರು. ನಾನು ನನ್ನ ಗೆಳತಿಯಿಂದ ದುಪಟ್ಟಾ ಪಡೆದು ಮೈ ಮುಚ್ಚಿಕೊಂಡೆ!’

‘ಅವರು ನನ್ನ ತಂದೆ ಮತ್ತು ತಂಗಿಯನ್ನು ಕೊಂದರು, ತಾಯಿಯನ್ನು ಪದೇ ಪದೇ ಹೊಡೆದರು ನಾನು ಇದನ್ನೆಲ್ಲಾ ಶೌಚಾಲಯದ ಒಳಗಿನಿಂದಲೇ ನೋಡಿದೆ ಆದರೆ ಅವರ ರಕ್ಷಣೆಗಾಗಿ ನಾನು ಹೊರಗೆ ಬರಲಾರದಾದೆ. ಸಣ್ಣ ಮಕ್ಕಳು ನನ್ನ ಜತೆಗಿದ್ದರು. ನಾನು ಶೌಚಾಲಯದಲ್ಲಿ ಏಳು ಗಂಟೆ ಕಾಲ ಇದ್ದೆ’

‘ಗಲಭೆಗಳನ್ನು ನಾನು ನೋಡುತ್ತಿರುವುದು ಇದು ನಾಲ್ಕನೇ ಬಾರಿ. ಕಳೆದ ಸಲ ನನ್ನ ಗಂಡ ಮತ್ತು ನಾನು ಹೊರಬರುತ್ತಲೇ ಅವರು ನನ್ನ ಗಂಡನನ್ನು ಕೊಂದರು ನನ್ನ ಮುಖದ ಮೇಲೆ ಆಸಿಡ್ ಎರಚಿ ಜೀವಂತ ಶವವನ್ನಾಗಿ ಮಾಡಿದರು ನನ್ನ ಬಳಿ ಈಗ ಏನೂ ಉಳಿದಿಲ್ಲ.’

‘ಅವರು ಚಡ್ಡಿ ಮತ್ತು ಬನಿಯನ್ ಧರಿಸಿ ಬಂದಿದ್ದರು. ಕೆಲವರು ಖಾಕಿ ಹಾಗೂ ಕೆಲವರು ಕಾವಿ ಬಣ್ಣದ ಬಟ್ಟೆಗಳನ್ನು ಧರಿಸಿದ್ದರು. ಬಜರಂಗ ಬಲಿ ಕೀ ಜೈ ಎಂದು ಕೂಗಿದರು. ಮುಸಲ್ಮಾನರಿಗೆ ಹೊಡೆಯಿರಿ ಎಂದು ಕೂಗಿದರು.’

ಕೋಮುಗಲಭೆಗಳಿಂದ ಅತ್ಯಂತ ಹೆಚ್ಚು ಪ್ರಮಾಣದಲ್ಲಿ ತತ್ತರಿಸಿದ ಭೂಪಾಲ್, ಅಹಮದಾಬಾದ್ ಮತ್ತು ಸೂರತ್‌ನ ಕೆಲವು ಭಾಗಗಳಿಗೆ ನಾಲ್ಕು ಮಹಿಳಾ ಸಂಘಟನೆಗಳ ನಿಯೋಗವೊಂದು ಇತ್ತೀಚೆಗೆ ಭೇಟಿ ನೀಡಿದಾಗ ವ್ಯಕ್ತವಾದ ನೋವು, ದುಃಖ ದುಮ್ಮಾನ, ದುಗುಡ-ಆಕ್ರೋಶಗಳ ಕೆಲವು ಧ್ವನಿಗಳಿವು. ನಿಯೋಗ ಎರಡೂ ಧರ್ಮಗಳ ಸುಮಾರು 500 ಮಹಿಳೆಯರನ್ನು ಭೇಟಿಯಾಗಿತ್ತು. ಆ ಪೈಕಿ ಅಲ್ಪಸಂಖ್ಯಾತರು ಹಾಗೂ ಬಹುಸಂಖ್ಯಾತರ ಅನುಪಾತ 4 : 1 ಆಗಿತ್ತು.

ನಿಯೋಗ ತನ್ನ ವರದಿಯನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿದೆ. ಅನೇಕ ಮಹಿಳೆಯರ ಜತೆ ನಡೆದ ಸಂದರ್ಶನಗಳ [illegible] ಚಿತ್ರಣ ಗಲಭೆಗಳ ಭಯಾನಕ ಮುಖವನ್ನು ತೆರೆದಿಡುತ್ತದೆ.

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ), ಮಹಿಳಾ ಅಭಿವೃದ್ಧಿ ಅಧ್ಯಯನಗಳ ಕೇಂದ್ರ (ಸಿಡಬ್ಲ್ಯುಡಿಎಸ್) ಮಹಿಳಾ ದಕ್ಷತಾ ಸಮಿತಿ (ಎಂ.ಡಿ.ಎಸ್.) ಮತ್ತು ಭಾರತೀಯ ಮಹಿಳಾ ರಾಷ್ಟ್ರೀಯ ಒಕ್ಕೂಟ (ಎಸ್.ಎಫ್.ಐ. ಡಬ್ಲ್ಯು) ನಿಯೋಗವನ್ನು ಪ್ರತಿನಿಧಿಸಿದ ಸಂಘಟನೆಗಳಾಗಿದ್ದವು

ಸುಶೀಲಗೋಪಾಲನ್ ಮತ್ತು ಬೃಂದಾಕಾರಟ್ (ಎ.ಐ.ಡಿ.ಡಬ್ಲ್ಯು.ಎ.) ವೀಣಾ ಮಜುಂದಾರ್ (ಸಿ.ಡಬ್ಲ್ಯು.ಡಿ.ಎಸ್.) ಪ್ರಮೀಳಾ ಲೂಂಬಾ (ಎಸ್.ಎಫ್.ಐ.ಡಬ್ಲ್ಯು) ಮತ್ತು ಹಸ್ನಾ ಶುಭಾನಿ (ಎಂ.ಡಿ.ಎಸ್) ನಿಯೋಗದ ಸದಸ್ಯರಾಗಿದ್ದಾರು.

ಯೋಜಿತ ಹಿಂಸಾಚಾರ

ಈ ಮೇಲೆ ಉಲ್ಲೇಖಿಸಿದ ಮೂರು ನಗರಗಳಲ್ಲಿನ ಗಲಭೆಗಳಲ್ಲಿ ಏಕರೂಪತೆ ಇರುವುದನ್ನು ನಿಯೋಗ ಗಮನಿಸಿತು. ಗಲಭೆಗಳು ಹಠಾತ್ತನ್ನೆಸಂಭವಿಸಿದ್ದಲ್ಲ. ಅಲ್ಪಸಂಖ್ಯಾತ ಸಮುದಾಯದ ಮಹಿಳೆಯರೇ ಹೆಚ್ಚಿನ ಕಷ್ಟನಷ್ಟ ಅನುಭವಿಸಿದ್ದಾರೆ. ಹಾಗೂ ಹಿಂದೂ ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದೆ ಎಂಬ ವ್ಯವಸ್ಥಿತ ಗುಲ್ಲನ್ನು ಎಬ್ಬಿಸಿದ ನಂತರ ಮುಖ್ಯವಾಗಿ ಮಹಿಳೆಯರ ಮೇಲೆ ಅತ್ಯಾಚಾರ ಹಾಗೂ ಲೈಂಗಿಕ ಹಿಂಸಾಚಾರ ನಡೆಸಲಾಗಿದೆ ಇವೇ ಸಾಮಾನ್ಯ ಲಕ್ಷಣಗಳಾಗಿವೆ.

ಉಭಯ ಕೋಮುಗಳ ಮಹಿಳೆಯರು ಪರಸ್ಪರ ಸೌಹಾರ್ದತೆ ತೋರಿದ್ದು ಅಮಾನವೀಯ ಹಿಂಸಾಚಾರಗಳ ಮಧ್ಯೆಯೂ ಎದ್ದು ಕಾಣುವ ಅಪೂರ್ವ ಸಂಗಾತಿಯಾಗಿದೆ.

ಆದರೆ ಈ ಐಕ್ಯತೆಯ ಸರಪಳಿಯನ್ನು ವಿಷಮಯ ಕೋಮು ಪ್ರಚಾರ ಹಾಗೂ ಧೃವಿಕರಣ ಕಳಚಿಹಾಕಿತು. ಅನೇಕ ಸಂದರ್ಭಗಳಲ್ಲಿ, ಭಯಭೀತ ಮಹಿಳೆಯರಿಗೆ ರಕ್ಷಣೆ ಕೊಟ್ಟ ಇವರ ಮಹಿಳೆಯರಿಗೆ ಗಲಭೆಕೋರರು ಬೆದರಿಕೆ ಹಾಕಿದರು.

ಗಾಯದ ಮೇಲೆ ಬರೆ

ಗಲಭೆಗಳಲ್ಲಿ ಮಹಿಳೆಯರ ಮಾನ-ಪ್ರಾಣ ಸೇರಿದಂತೆ ಎಲ್ಲಾ ವಿಧದಲ್ಲೂ ಅಪಾರ ನೋವನ್ನು ಉಂಡಿದ್ದು ಒಂದೆಡೆಯಾದರೆ ಗಲಭೆನಂತರ ಪರಿಸ್ಥಿತಿ ಗಾಯದ ಮೇಲೆ ಬರೆ ಎಳೆಯುವಂಥದ್ದಾಗಿದೆ.

ಪರಿಹಾರ ಹಾಗೂ ಪುನರ್‌ವಸತಿ ಸೌಲಭ್ಯಗಳನ್ನು ಒದಗಿಸುವಲ್ಲಿ ಮಹಿಳೆಯರನ್ನು ನಿರ್ಲಕ್ಷಿಸಲಾಗಿದೆ. ಕೆಲವು ಕುಟುಂಬಗಳಲ್ಲಿ ಬದುಕುಳಿದ ಏಕೈಕ ಮಹಿಳೆಯನ್ನು ಕೂಡಾ ಅವರ ಅಗತ್ಯಗಳ ಬಗ್ಗೆ ಸರಕಾರ ವಿಚಾರಿಸಿಲ್ಲ. ಪರಿಹಾರ ಹೇಗೆ ಪಡೆಯಬೇಕೆಂಬ ಮಾಹಿತಿಯೂ ಈ ಮಹಿಳೆಯರಿಗೆ ಇಲ್ಲ.

ಯಾವ ಮಹಿಳೆಯರ ಗಂಡಂದಿರ ಶವಗಳನ್ನು ಗುರುತಿಸಲಾಗಿದೆಯೋ ಅಂಥ ಮಹಿಳೆಯರಿಗೆ ಮಾತ್ರ ಪರಿಹಾರ ಹಣ ನೀಡಲಾಗಿದೆ ಗುರುತು ಹಿಡಿಯಲಾಗದ ರೀತಿಯಲ್ಲಿ ಸುಟ್ಟು ಹೋದ ಪುರುಷರ ಪತ್ನಿಯರು ಅಥವಾ ತಾಯಂದಿರನ್ನು ಅಧಿಕಾರಿಗಳು ಲೆಕ್ಕಕ್ಕೆ ತೆಗೆದುಕೊಂಡಿಲ್ಲ.

ಸಂತ್ರಸ್ತ ಕುಟುಂಬಗಳಲ್ಲಿ ಕುಟುಂಬ ಮುಖ್ಯಸ್ಥರು ಮಹಿಳೆ ಆಗಿದ್ದರೆ ಅಂಥವರಿಗೆ ಉದ್ಯೋಗ ಒದಗಿಸಲಾಗುತ್ತದೆಂದು ಪ್ರಧಾನಿ ಭರವಸೆ ನೀಡಿದ್ದರು. ಆದರೆ ಅದು ಹುಸಿ ಭರವಸೆಯಾಗಿ ಉಳಿದಿದೆ ಎಂದು ವರದಿ ತಿಳಿಸಿದೆ.

ಪೋಲಿಸರ ಪಾತ್ರ

ಕೋಮುಗಲಭೆಗಳಲ್ಲಿ ಪೋಲೀಸರು ಹಾಗೂ ಕೋಮು ಸಂಘಟನೆಗಳ ಪಾತ್ರವನ್ನು, ಹಾಗೂ ಇನ್ನು ಕೆಲ ಸಂದರ್ಭಗಳಲ್ಲಿ ಕೆಟ್ಟರೀತಿಯ ಗಲಭೆಗಳಿಗೆ ಪತ್ರಿಕೆಗಳು ಪಕ್ಷವಾದ ವಾತಾವರಣ ನಿರ್ಮಿಸುವಲ್ಲಿ ವಹಿಸಿದ ಪಾತ್ರವನ್ನು ಮಹಿಳಾ ಸಂಘಟನೆಗಳ ನಿಯೋಗ ತನ್ನ ವರದಿಯಲ್ಲಿ ಎತ್ತಿ ತೋರಿಸಿದೆ.

ಕೋಮು ಗಲಭೆಗಳು ಪದೇ ಪದೇ ಸಂಭವಿಸುವುದನ್ನು ತಡೆಯಲು ಈ ವರದಿ ಹಲವು ಶಿಫಾರಸುಗಳನ್ನು ಮಾಡಿದೆ ಹೊಸ ಮಾದರಿಯ ಶಾಂತಿ ಸಮಿತಿಗಳು, ಪುನರ್ ವಸತಿ ಕಲ್ಪಿಸುವಲ್ಲಿ ಸಂತ್ರಸ್ತ ಮಹಿಳೆಯರ ಪರಿಣಾಮಕಾರಿ ಪಾಲ್ಗೊಳ್ಳುವಿಕೆ, ಗಲಭೆ ಪೀಡಿತರಾಗಿ ಅನಾಥರಾದ ಮಕ್ಕಳನ್ನು ನೋಡಿಕೊಳ್ಳಲು ವಿಶೇಷ ವ್ಯವಸ್ಥೆ, ಮಹಿಳೆಯರಿಗೆ ರಾಜಕೀಯ ಶಿಕ್ಷಣ ಮತ್ತು ಎಲ್ಲಾ ಕೋಮು ಹಿಂಸಾಚಾರ ಪ್ರಕರಣಗಳ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ- ಈ ಸಲಹೆಗಳಲ್ಲಿ ಸೇರಿವೆ.

ಬಜೆಟ್ ...

ಜಿ.ಎಸ್. ನಾಗರಾಜ್

“ಅರೆ ಏನಯ್ಯಾ ನೀನು ಯಾವ ಲೋಕದಲ್ಲಿದ್ದೀಯ” ಒಂದು ಮೂಟೆ ಡಿ.ಎ.ಪಿ. ಗೆ ನೂರೆಂಬತ್ತು ರೂಪಾಯಷ್ಟೇ ತಂದೀರೋದು ಅಂತಿಯಲ್ಲ, ಎಷ್ಟಾಗೈತೆ ಗೊತ್ತಿಲ್ವಾ ನಿಂಗೆ, ನಾಲ್ಕು ತಿಂಗಳ ಹಿಂದೆ ಅದು ನಾನೂರೈವತ್ತಾಯ್ತು. ಲೋಕ ಎಲ್ಲಾ ಹೋ ಅಂತ ಕೂಗ್ತು, ನೀನಿನ್ನೂ ಈಗ ಕಣ್ಣು ಕಣ್ಣು ಬಿಡ್ತಿದೀಯಲ್ಲ”

“ನಿನಿನ್ನೂ ಈಗ ಕಣ್ಣು ಕಣ್ಣು ಬಿಡ್ತಿದೀಯಲ್ಲ”

ಹೌದು, ರೈತನೇನೊ ಕಣ್ಣು ಕಣ್ಣು ಬಿಡಬೇಕಾಗದ್ದೇ ಸರಿ, ನೂರೆಂಬತ್ತು ರೂಪಾಯಿನ ಮೂಟೆ ಗೊಬ್ಬರ ನಾನೂರು ರೂಪಾಯಿಯಾದ್ರೆ ರೈತ ಕಣ್ಣು ಕಣ್ಣು ಬಿಡ್ದೆ ಇನ್ನೇನು? ಇದು ಯಾವ ಸೀಮೆ ವ್ಯಾಪಾರ ನಪ್ಪ ಎಂದೆನ್ನಿಸಿ ಕೇಳಲೂ ಬಹುದು.

“ಮನಮೋಹನ್‌ಸಿಂಗ್ ಅಂತ ಒಬ್ಬ ಮಹಾಪುರುಷ ಈ ಲೋಕದ ಮೇಲೆ ಹುಟ್ಟಿದ್ದಾನೆ”, ಅವನ ತಲೇಲಿ ಎಂತೆಂತದೊ “ಬ್ರಿಲಿಯಂಟ್” ಮಹಾ ಮಹಾ ವಿಚಾರಗಳೆಲ್ಲಾ ತುಂಬಿವೆ. ಅವನು ರೈತರು ಕೊಳ್ಳುವ ರಸಗೊಬ್ಬರಕ್ಕೆ ಅಂತ ಕೊಡುತ್ತಿದ್ದ ಸಾವಿರಾರು ಕೋಟಿ ಸಬ್ಸಿಡಿ ಉಳಿಸಿ ದೇಶದ ಬಜೆಟ್‌ನಲ್ಲಿ ಕೊರತೆಯನ್ನು ತಪ್ಪಿಸಿದಂತಹ ಮಹಾನುಭಾವ. ಇಂತ ಒಂದು ದೊಡ್ಡ ಕೆಲಸ ಮಾಡುವಾಗ ರೈತರು ಕೊಳ್ಳುವ ಡಿ.ಎ.ಪಿ., ಕಾಂಪ್ಲೆಕ್ಸ್, ಪೊಟಾಷಸೂಪರು ಇವುಗಳ ಬೆಲೆ ಸ್ವಲ್ಪ ಜಾಸ್ತಿಯಾಗಿದೆ ಎಂದರೆ ರೈತನಿಗೆ ಇವನ್ಯಾರಪ್ಪ ಮನಮೋಹನ್‌ಸಿಂಗ್ ಎಲ್ಲಿಂದ ಬಂದ್ನಪ್ಪ, ಇದೇನಪ್ಪ ಬಜೆಟ್ಟು, ಸಬ್ಸಿಡಿ, ಕೊರತೆ, ಅದನ್ನ ಅವನೇನಾರ ಮಾಡ್ಕೊಂಡು ಹಾಳಾಗಿ ಹೋಗ್ಲಿ ನಾವಾಕೋ ಒಂದು ಚೀಲ ಗೊಬ್ಬರ ತಂಟೆಗ್ಯಾಕಪ್ಪಾ ಬಂದ ಅವ್ನ ಎಂದು ಕಕಮಕ ಹಿಡಿಯಲೂ ಬಹುದು.

ಇದು ರೈತರಿಗೆ ನೇರವಾಗಿ ತಟ್ಟುವ ರಸಗೊಬ್ಬರ ಸಬ್ಸಿಡಿಯನ್ನು ಸರ್ಕಾರ ಹಿಂತೆಗೆದುಕೊಂಡದ್ದರ ಕಥೆಯಾದರೆ ಇನ್ನು ಈ ಬಜೆಟ್‌ನಲ್ಲಿ ಮನಮೋಹನ್ನರು ಮಾಡಿರುವ ಮಂಗಮಾಯ ನಮ್ಮ ರೈತರಿಗೆ ಗೊತ್ತಾಗಲು ಇನ್ನು ಎಷ್ಟು ಕಾಲ ಹೋಗಬೇಕು?

ಟಿ.ವಿ., ರೇಡಿಯೋ, ಪತ್ರಿಕೆಗಳೆಲ್ಲಾ ಇದು ಗ್ರಾಮೀಣ ಬಜೆಟ್, ಹಳ್ಳಿಗಳಿಗೆ ವರದಾನ ಎಂದೆಲ್ಲಾ ಬಣ್ಣಿಸುತ್ತಿವೆ. ಎಲ್ಲಿ ಹೋದರಲ್ಲಿ ಈ ಮಾತು ಕೇಳುತ್ತಿದೆ. ಆದರೆ ನಿಜಸಂಗತಿ ತಿಳಿಯಲು ಇನ್ನು ಎಷ್ಟು ಕಾಲ ಹೋಗಬೇಕು?

ಬಜೆಟ್‌ನಲ್ಲಿ ಕೃಷಿಯ ಪ್ರಸ್ತಾಪ

ಈ ಬಾರಿಯ ಬಜೆಟ್‌ಗೆ ಮೊದಲೇ ರಸಗೊಬ್ಬರದ ಬೆಲೆಗಳನ್ನು ಆಕಾಶಕ್ಕೇರಿಸಿ 4,00 0 ಕೋಟಿ ರೂಗಳಷ್ಟನ್ನು ರೈತರಿಂದ ಸೆಳೆದ ಬಗ್ಗೆ ಬಜೆಟ್‌ನಲ್ಲಿ ಯಾವುದೇ ಪ್ರಸ್ತಾವ ಇಲ್ಲ. ಆದರೆ ಅದರ ಫಲವಾಗಿ ಕೃಷಿ ಉತ್ಪನ್ನಗಳ ಬೆಂಬಲ, ಬೆಲೆಗಳ ಏರಿಕೆಯನ್ನು ಮಾತ್ರ ದೊಡ್ಡದಾಗಿ ಪ್ರಸ್ತಾಪ ಮಾಡಲಾಗಿದೆ. “ಕೃಷಿ ಉತ್ಪಾದನೆಯನ್ನು ಹೆಚ್ಚಿಸಿ ಅದನ್ನು ಲಾಭದಾಯಕವಾಗಿ ಮಾಡಲು ರೈತರಿಗೆ ಲಾಭಾದಾಯಕ ಬೆಲೆಗಳ ಭರವಸೆ ನೀಡಲಾಗಿದೆ” ಎಂದು ಬಜೆಟ್ ಘೋಷಿಸಿದೆ. ಅದರ ಜೊತೆಗೆ ಬಜೆಟ್‌ನಲ್ಲಿ ಈ ಕೆಳಗಿನ ನೀತಿಗಳನ್ನೂ ಘೋಷಿಸಿದೆ.

ಒಂದು : ದೇಶದಲ್ಲಿ ಕೃಷಿ ಉತ್ಪನ್ನಗಳ ಚಲನೆಗೆ ಆಡಳಿತಾತ್ಮಕ ನಿರ್ಬಂಧಗಳನ್ನು ಹಾಕದಿರುವುದೇ ಸರ್ಕಾರದ ನೀತಿ. ಇದರ ಫಲವಾಗಿ ರೈತರು ನಮ್ಮ ದೇಶದೊಳಗಿನ ಮಾರುಕಟ್ಟೆಯ ಪೂರ್ಣ ಲಾಭ ಪಡೆಯುವಂತಾಗಬೇಕು.

ಎರಡು : ಗ್ರಾಮೀಣ ಸಾಲ 1992-93 ರಲ್ಲಿದ್ದ 13,800 ಕೋಟಿಗಳಿಂದ 93-94 ರಲ್ಲಿ 16,500 ಕೋಟಿಗಳಿಗೇರಿಸಲಾಗುವುದು. ಇದು ಹಿಂದಿನ ವರ್ಷದ ಮೇಲೆ ಶೇ. 20 ರಷ್ಟು ಹೆಚ್ಚಳ.

ಮೂರು: ನಬಾರ್ಡ್ ಎಂಬ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗಾಗಿ ಸಾಲ ನೀಡಿಕೆಯನ್ನು ನೋಡಿಕೊಳ್ಳುವ ಸರ್ಕಾರಿ ಸಂಸ್ಥೆ ಕೃಷಿಯಲ್ಲಿ ಹಣ ಹೂಡುವುದಕ್ಕೆ ನೀಡುವ ಹಣವನ್ನು 2,300 ಕೋಟಿ ರೂಗಳಿಂದ 2,800 ಕೋಟಿಗಳಿಗೆ ಏರಿಸಲಾಗಿದೆ. 3.75 ಲಕ್ಷ ಭಾವಿಗಳು 6 ಲಕ್ಷ ಪಂಪ್‌ಸೆಟ್‌ಗಳನ್ನು ಈ ವರ್ಷ ಹೆಚ್ಚಿಸಲಿದ್ದಾರೆ.

...ಗೂ ಭಾರತದ ರೈತ

...ಯ್ಕ : ಕೃಷಿ ಮತ್ತಿತ್ತರ ರಂಗಗಳಲ್ಲಿ ಹೊರ ...ರಫ್ತು ಮಾಡುವುದಕ್ಕಾಗಿಯೇ ಮೀಸಲಾದ ...ಘಟಕಗಳಿಗೆ ಶೇ. 90 ರಷ್ಟು ಸಾಲವನ್ನು ...ಭರಿಸುತ್ತದೆ.

... : ನಬಾರ್ಡ್ ಐದು ಕೋಟಿರೂಗಳ ...ಕ್ಯಾಪಿಟಲ್ ಫಂಡ್" ಎಂಬ ಕೃಷಿ ಉದ್ದಿ...ಹಸ ಮಾಡುವವರಿಗೆ ನೆರವು ನೀಡುವ ನಿಧಿ ...ಪಿಸಲಿದೆ.

... : ಕೃಷಿ ಸಾಲ ಪದ್ಧತಿಯನ್ನು ಕೃಷಿಯಲ್ಲಿ ...ಡವಾಳ ಉತ್ಪನ್ನವಾಗುವ ಸಾಧನವಾಗಿ ...ವಿಶೇಷ ಗಮನ.

... : ಭಾರತದ ಕೈಗಾರಿಕೆಗಳಿಗೆ ನೀಡುತ್ತಿ...ಹೆಚ್ಚಿನ ಮಟ್ಟದ ರಕ್ಷಣೆಯನ್ನು ನಿಧಾನವಾಗಿ ...ುತ್ತು ವಿಶ್ವದ ಆರ್ಥಿಕದೊಡನೆ ಮಿಳನವಾ...ಾಡುವ ನಮ್ಮ ಕಾರ್ಯನೀತಿ ಭಾರತದ ಕೃಷಿಗೆ ...ಸಹಾಯ ಮಾಡುತ್ತದೆ. ರೈತ ತೆರದೇಕಾದ ...ಉತ್ಪನ್ನಗಳ ಬೆಲೆಯನ್ನು ತಗ್ಗಿಸುತ್ತದೆ.

...ು : ಹೆಚ್ಚು ಸ್ಪರ್ಧಾತ್ಮಕ ವಿನಿಮಯ ದರ ...ಕ ನಮ್ಮ ಕೃಷಿ ಹಾಗೂ ಕೃಷಿ ಆಧಾರಿತ ...ೆಚ್ಚು ಲಾಭದಾಯಕವಾಗುತ್ತದೆ.

... ವ ಹಣಕಾಸಿನ ಸಚಿವರು ಮತ್ತೂ ... : "ಮಾನ್ಯ ಲೋಕಸಭಾ ಸದಸ್ಯರೇ, ...ಬದಲಾವಣೆಗಳು ಅಲ್ಪಕಾಲದಲ್ಲದಿದ್ದರೂ ...ಧಿಯಲ್ಲಿ ಯಾವುದೇ ವಿಶೇಷ ಸಬ್ಸಿಡಿ ಕ್ರಮ ...ೂ ಹೆಚ್ಚು ಕೃಷಿ ಉತ್ಪಾದಕರುಗಳಿಗೆ ...ನೀಯವಾಗಿ ಸಹಾಯಮಾಡುತ್ತವೆ."

...ಭಾಷೆ, ವಿಶ್ವ ಆರ್ಥಿಕದ ಭಾಷೆ, ಈ ...ಕ ವ್ಯವಸ್ಥೆಯ ಮೇಲುಸ್ತುವಾರಿಗಾರನಾಗಿ ...ನೇ ನೇಮಿಸಿಕೊಂಡಿರುವ ಅಮೇರಿಕನ್ ...ಾಷೆ ನಮ್ಮ ರೈತನಿಗೆ ಹೇಗೆ ಅರ್ಥವಾಗು...ಎಲ್ಲಾ ಹೇಳಿಕೆಗಳ ಒಳ ಹೂರಣ ಏನು? ...ಾಯಿಯ ಪರಿವರ್ತನೀಯತೆ, ಆಮದು ...ಮ್ಸ್ ಸುಂಕ ಕಡಿತ ಇವು ನಮ್ಮ ರೈತರಿಗೆ ...ವಾಗಬೇಕಾಗಿದೆ.

...ಲ್ ಸೂತ್ರಗಳಿಗೆ ಮಣಿಯಲು ...ವಾದ ಬಜೆಟ್

...ಗೆ ಅರ್ಥವಾಗದ ಇನ್ನೂ ಒಂದು ಭಾಷೆ ...ಕೆಲ್" : ಡಂಕೆಲ್ ಪ್ರಸ್ತಾಪಗಳು ಅಥವಾ ... ಎಂದೂ ಕಂಡು ಕೇಳರಿಯದ ಈ ... ಹೆಸರನ್ನು ನಮ್ಮ ರೈತರು ಜಪಮಾಡುವ ...ವಗಿದೆ. ಅವನೂ ಅದನ್ನೇ ಹೇಳುತ್ತಾನೆ : ...ಕದೊಂದಿಗೆ ವಿಲೀನವಾಗಿ, ವಿದೇಶಗಳಲ್ಲಿ ...ನೆಲ್ಲಾ ಭಾರತಕ್ಕೆ ಹರಿದು ಬರಲಿ. ಇಲ್ಲಿ ಅಗ್ಗ ...ಲ್ಲ ಹೊರಕ್ಕೆ ಹರಿದು ಹೋಗಲಿ. ಅದು ...ರಾದ ಯಂತ್ರಗಳಾದರೂ ಆಗಬಹುದು, ..., ಮುಸುಕಿನ ಜೋಳಗಳಾದರೂ ರಸಗೊ...ಗಳಾದರೂ ಆಗಬಹುದು. ಈ ಡಂಕೆಲ್ ...ರು ಎಷ್ಟೇ ಪ್ರತಿರೋಧ ವ್ಯಕ್ತಪಡಿಸಿದರೂ ...ಾಕಲು ನರಸಿಂಹರಾಯರು ಸಿದ್ಧವಾಗಿಬ...ದಕ್ಕೆ ತಕ್ಕಂತೆ ಮತ್ತು ಐ.ಎಂ.ಎಫ್. ಒತ್ತಡಗ... ಮನಮೋಹನ್‌ಸಿಂಗ್ ಬಜೆಟ್ ಮಂಡಿಸಿ

...ಗಳೆಲ್ಲದರ ಒಟ್ಟು ಸಾರಾಂಶ

...ಲ್ ಸೂತ್ರಗಳಿಗೆ ಭಾರತ ಇನ್ನೇನು ಸಹಿ ...ಈ ಸೂತ್ರಗಳ ಫಲವಾಗಿ ಯೂರೋಪಿನ ...ವೃದ್ಧ ದೇಶಗಳ ಕೃಷಿ ಉತ್ಪನ್ನಗಳ ಬೆಲೆ ಏರ...

...ಭಾರತದ ಕೃಷಿ ಉತ್ಪನ್ನಗಳನ್ನು ಸಂಸ್ಕರಿಸಿ ... ಮಾರಬಹುದು. ಹೆಚ್ಚು ಡಾಲರ್ ... ಮಾಡಬಹುದು. ಈ ಡಾಲರುಗಳ ...ಿಂದ ಭಾರತಕ್ಕೆ ಕಡಿಮೆ ಕಾರ್ಮಿಕರನ್ನು ...ೊಸ ತಂತ್ರಜ್ಞಾನದ ಯಂತ್ರಗಳನ್ನು ಐಷಾ...ಸ್ತುಗಳನ್ನು ಕೊಳ್ಳಬಹುದು. ಭಾರತದ ...ಳಾಗಲಿ, ರೈತರ ಮಕ್ಕಳಿಗೆ ಎಲ್ಲೂ ಕೆಲ...ಸವಿಲ್ಲದಂತೆ ಆಗಲಿ ಅದಕ್ಕೇನಂತೆ!

ಭಾರತದಲ್ಲಿ ಜನಕ್ಕೆ ತಿನ್ನುವುದಕ್ಕೂ ಇಲ್ಲದಿರಬಹುದು ಆದರೆ ವಿದೇಶದಲ್ಲಿ ಮಾರುಕಟ್ಟೆ ಇದೆ ಎಂದರೆ ಯಾಮುದೇ ಕೃಷಿ ಉತ್ಪನ್ನವನ್ನು ಅಲ್ಲಿ ಮಾರಿಬಿಡೋಣ. ವಿದೇಶಗಳಿಗೆ ದೇಕಾದ ವಸ್ತುಗಳನ್ನು ಬೆಳೆಯುವುದಕ್ಕಾಗಿ ನಾವು ಭತ್ತ,ರಾಗಿ, ಗೋಧಿಗಳನ್ನು ಬೆಳೆಯುವುದು ಕಡಿಮೆ ಮಾಡೋಣ. ಇಲ್ಲಿ ಬೆಲೆಯೇರಿಕೆಯಾಗಿ ಧಾನ್ಯಗಳನ್ನು ಕೊಳ್ಳಲಾರದೆ ಜನ ಉಪವಾಸ ಸಾಯಬಹುದು. ಆದರೇನಂತೆ!.

ಆದರೆ ಈ ಎಲ್ಲಾ ವಿದೇಶಿ ವ್ಯಾಪಾರದ ಲಾಭ ಪಡೆಯುವ, ಹೆಚ್ಚು ಬೆಲೆಯ ರಸಗೊಬ್ಬರ ಹಾಕಿ, ಖಾಸಗಿಯವರಿಗೆ, ವಿದೇಶೀಯವರಿಗೆ ವಿದ್ಯುತ್ ತಯಾರಿಸಲು ಅವಕಾಶ ಕೊಡುವುದರಿಂದ ಹೆಚ್ಚಾದ ವಿದ್ಯುತ್ತಿನ ಬೆಲೆಯನ್ನು ತೆತ್ತು ಹೆಚ್ಚಾದ ಪೆಟ್ರೋಲ್, ಡೀಸೆಲ್ ಬೆಲೆ, ಸಾಗಾಣಿಕೆ ದರ ತೆತ್ತು ಹೆಚ್ಚು ಉತ್ಪನ್ನ ಮಾಡುವ ವಿದೇಶಗಳಿಗೆ ಮಾರುವ, ಮನಮೋಹನ್‌ಸಿಂಗರು ಹೇಳಿದ ಆ ಕೃಷಿ ಉತ್ಪಾದಕ ಯಾರು?

ಹರಕು ಅಂಗಿಯ, ಕಾಲಿಗೆ ಚಪ್ಪಲಿಯಿಲ್ಲದ ಭಾರತದ ಬಡರೈತನೇ? ಈ ರೈತ ವಿದೇಶಕ್ಕೆ ತಾನು ಬೆಳೆದ ವಸ್ತುಗಳನ್ನು ಮಾರುವವನೇ? ಭಾರತದಲ್ಲಿ ಎಲ್ಲಾ ಕಡೆಯೂ ಬೆಳೆಯುತ್ತಿರುವ ಕೃಷಿ ಬಂಡವಾಳಶಾಹಿಗೆ ವಿದೇಶಕ್ಕೆ ದೇಕಾದ ಬೆಳೆಗಳನ್ನು ಬೆಳೆಯಲು ಎಲ್ಲಾ ಉತ್ತೇಜನ ನೀಡಿ- ಸಾಲನೀಡಿ, ಸಹಾಯ ನೀಡಿ ಅವನ ಬಂಡವಾಳ ಹೆಚ್ಚುವಂತೆ ಮಾಡಿ, ಅವನು ಕೃಷಿ ಉತ್ಪನ್ನಗಳ ಸಂಸ್ಕರಣ ಘಟಕಗಳನ್ನು ಸ್ಥಾಪಿಸುವಂತೆ ಮಾಡಿ ಅವರಿಗೆ ಲಾಭ ಮಾಡಿಕೊಡುವುದು. ಭಾರತದ ಬಡ ರೈತ ಕೃಷಿಯ ವೆಚ್ಚವನ್ನು ಭರಿಸಲಾರದೆ ಶ್ರೀಮಂತರೊಡನೆ ಸ್ಪರ್ಧಿಸಲಾರದೆ ಸಾಲದ ಭಾರಕ್ಕೆ ಸಿಕ್ಕಿ ಭೂಮಿ ಒತ್ತೆಯಿಟ್ಟು ಕೊನೆಗೆ ಭೂಮಿಯನ್ನೇ ಕೈ ಬಿಟ್ಟು ಕೂಲಿಕಾರನಾಗುವಂತೆ ಮಾಡುವುದು. ಇದು ಸರ್ಕಾರದ ನೀತಿ.

ಕೂಲಿಕಾರನಾಗಿಯಾದರೂ ಬದುಕಲು ಬಿಡುವರೆ?

ಕೋಟಿಗಟ್ಟಲೇ ರೈತರು ಭೂಮಿಯಿಂದ ಹೊರ ತಳ್ಳಲ್ಪಟ್ಟು ಕೂಲಿಕಾರನಾಗಿ ದುಡಿಯುತ್ತೇನೆಂದು ಹೊರಡುತ್ತಾರೆ. ಆದರೆ ಅವರು ಕೂಲಿಕಾರರಾಗಿಯಾದರೂ ಜೀವನ ಮಾಡಲು ಈ ಬಜೆಟ್ ಬಿಡುತ್ತದೆಯೇ?

ಅಂಶ ಏಳರಲ್ಲಿ(?) ಹೇಳಲಾಯಿತಲ್ಲ. ದೇಶೀ ಕೈಗಾರಿಕೆಗಳಿಗೆ ನೀಡುತ್ತಿರುವ ರಕ್ಷಣೆಯನ್ನು ತೆಗೆದು ಹಾಕಿ ವಿದೇಶಗಳಿಂದ ಅಗ್ಗದ ವಸ್ತುಗಳು ಬರುವಂತೆ ಮಾಡಿ ಕೃಷಿ ಉತ್ಪಾದಕರಿಗೆ ನೆರವು ನೀಡುತ್ತೇವೆಂದು, ಅದರಂತೆ ಆಮದು ತೆರಿಗೆ, ಕಸ್ಟಮ್ಸ್ ತೆರಿಗೆಗಳನ್ನು ತೆಗೆದು 2,500 ಕೋಟಿಯಷ್ಟು ಭಾರತದ ಬೊಕ್ಕಸಕ್ಕೆ ನಷ್ಟ ಮಾಡಿಕೊಳ್ಳಲಾಗಿದೆ. ಹೀಗೆ ಅಗ್ಗವಾಗಿ ದೊರೆಯುವ ವಸ್ತುಗಳು ಯಾವುವು?

ಟ್ರಾಕ್ಟರ್‌ಗಳು ಹತ್ತರಿಂದ ಹದಿನೈದು ಸಾವಿರ ರೂ ಅಗ್ಗ, ತೋಟಗಾರಿಕೆಯ ಯಂತ್ರೋಪಕರಣಗಳು, ವಿದೇಶಕ್ಕೆ ಮಾರುವ ಕೃಷಿ ಉತ್ಪನ್ನಗಳನ್ನು ಕಾದಿಡಲು ದೇಕಾದ ಶೀತಲೀಕರಣ ಯಂತ್ರಗಳು, ಎಲ್ಲಕ್ಕಿಂತ ಮಿಗಿಲಾಗಿ ಕಳೆ ನಾಶಕಗಳು ಹಾಗೂ ಭತ್ತ ನಾಟಿ ಮಾಡುವ ಯಂತ್ರಗಳು. ಇವುಗಳ ಮೇಲೆಲ್ಲಾ ತೆರಿಗೆ ತೆಗೆದು ಹಾಕಲಾಗಿದೆ. ಏಕೆಂದರೆ ಭತ್ತ ನಾಟಿ ಮಾಡುವ ಯಂತ್ರ, ಕುಯಿಲು, ಒಕ್ಕಣೆ ಯಂತ್ರಗಳು ಅಗ್ಗವಾಗಿ ನಮ್ಮ ದೇಶಕ್ಕೆ ಬಂದರೆ, ಹೆಚ್ಚು ಜನ ಶ್ರೀಮಂತ ರೈತರು ಕೊಳ್ಳಬಹುದು. ಆಗ ಬಹಳ ಹೆಚ್ಚು ಕೂಲಿ ಕೊಡಬೇಕಾಗುವ ಕೂಲಿಕಾರರಿಗೆ ಬದಲಾಗಿ ಈ ಯಂತ್ರಗಳ ಮೂಲಕ ಹೆಚ್ಚು ಅಗ್ಗವಾಗಿ ಬೆಳೆಯನ್ನು ಬೆಳೆಯಬಹುದು. ವಿದೇಶಿ ಮಾರುಕಟ್ಟೆಯಲ್ಲಿ ಬೇರೆ ದೇಶದವರೊಡನೆ ಸ್ಪರ್ಧಿಸಿ ಅವರು ಹೊಟ್ಟೆ ತುಂಬಾ ಉಣ್ಣಲು ಅಗ್ಗವಾಗಿ ಮಾರಬಹುದು.

ಆದರೆ ಕೂಲಿಕಾರರು? ಅವರು ಸಾಯಲಿ, ಮನಮೋಹನಸಿಂಗರಿಗೇನು ನರಸಿಂಹರಾಯರಿಗೇನು? ಅವರ ಜೊತೆಯ ಭೂಮಾಲಿಕರು ಲೋಕಸಭೆಯಲ್ಲಿರುವ ಭೂಮಾಲಿಕರುಗಳು ಸುಖವಾಗಿದ್ದರೆ ಸಾಕು. ಇದೇ ಬಜೆಟ್‌ನಲ್ಲಿಯ ದೂರದರ್ಶಿ ನೀತಿ. ಇಂದಲ್ಲಾ ನಾಳೆ ಇದನ್ನು ಸಾಧಿಸಿಯೇತೀರುತ್ತೇವೆ ಎನ್ನುತ್ತಾರೆ ಮನಮೋಹನಸಿಂಗರು. ಆದರೆ ರೈತರು ಕೂಲಿಕಾರರು ಇದನ್ನು ನೋಡುತ್ತಾ ಕೂರಬೇಕೆ?

ತೇಲುವ ರೂಪಾಯಿಯೂ ಮುಳುಗಿಸುವ ಕಾಳಸಂತೆಯೂ

ಇತ್ತೀಚಿನ ರೂಪಾಯಿಯ ಪೂರ್ಣ ಪರಿವರ್ತನೆ ಎನ್ನುವುದಕ್ಕೆ ರೂಪಾಯಿಯನ್ನು ತೇಲಿ ಬಿಡುವುದು ಎಂದೂ ಇಂಗ್ಲೀಷಿನಲ್ಲಿ ಹೇಳುತ್ತಾರೆ. ಅಂದರೆ ಅದರ ಅರ್ಥ ಎಲ್ಲ ವಿದೇಶೀ ಹಣಗಳೊಂದಿಗೆ ರೂಪಾಯಿಯನ್ನೂ ತೇಲಿಸಿಬಿಟ್ಟರೆ ರೂಪಾಯಿ ತನ್ನ ಮಟ್ಟವನ್ನು ತಾನೇ ತಲುಪಬೇಕು. (ಇತರೆ ಹಣಗಳೊಂದಿಗೆ ಹೋಲಿಸಿದಾಗ) ಇರಲಿ.

ರೂಪಾಯಿಯ ಪರಿವರ್ತನೆ ತರುವಾಗ ಒಂದು ವಾದ ಎತ್ತು. ನಮ್ಮ ದೇಶದಲ್ಲಿ ಡಾಲರಿನ ಕಾಳಸಂತೆ ದೊಡ್ಡದಾಗಿ ಬೆಳೆದಿದೆ. ರೂಪಾಯಿ ಪೂರ್ಣಪರಿವರ್ತನ ಶೀಲವಾದಾಗ ಈ ಕಾಳಸಂತೆ ನಾಶವಾಗಿ ದೇಶದೊಳಗೆ ಬರುವ ಪ್ರತಿಯೊಂದು ಡಾಲರ್ ಸಹ ಸರ್ಕಾರದ ಕೈಗೆ ಬಂದು ದೇಶದ ವಿದೇಶೀ ವ್ಯಾಪಾರಕ್ಕೆ ಅನುಕೂಲವಾಗುತ್ತದೆ ಎಂದು.

ಈಗ ಇದು ಸ್ಪಷ್ಟವಾಗಿದೆ. ಕಾಳಸಂತೆಯ ಪ್ರಮಾಣ ಕಡಿಮೆಯಾಗಿರುವುದು ನಿಜ. ಆದರೆ ಅದು ನಾಶವಾಗುವುದಿಲ್ಲ. ರೂಪಾಯಿಯ ಬೆಲೆ ಕುಸಿದಂತೆಲ್ಲ ಬಹುಶಃ ಡಾಲರಿನ ಜೂಜು ಹೆಚ್ಚಾಗಿ ಕಾಳಸಂತೆ ಇನ್ನೂ ದೊಡ್ಡದಾಗಿ ಬೆಳೆಯಬಹುದು.

ಕತ್ತು ಹಿಸುಕ ತೊಡಗಿರುವ ಬಜೆಟ್

ದೇಶೀ ಪೆಟ್ರೊ ರಸಾಯನಿಕಗಳ ಉದ್ಯಮ ತೀವ್ರ ಬಿಕ್ಕಟ್ಟು ಎದುರಿಸುತ್ತಿದೆ. ದೇಶದಲ್ಲೇ ಉತ್ಪಾದಿಸಲ್ಪಡುವ ಪೆಟ್ರೋ ರಸಾಯನಿಕಗಳ ಮೇಲೆ ಸರ್ಕಾರ, ಹೆಚ್ಚಿನ ಸುಂಕಗಳನ್ನು ಹೇರಿದೆ. ಈ ಸುಂಕ ತೈಲ ನಿಧಿ ಖಾತೆಗೆ ಹೋಗುತ್ತದೆ. ಸೀಮೆ ಎಣ್ಣೆ, ಅಡಿಗೆ ಅನಿಲ ಇತ್ಯಾದಿಗಳ ಬೆಲೆ ಕಡಿಮೆ ಇಡಲು ಸಹಾಯಧನವನ್ನು ಈ ಖಾತೆಯಿಂದಲೇ ನೀಡುವುದು.

ಈಗ ಆಮದು ಸುಂಕವನ್ನು ಕಡಿತ ಮಾಡಿರುವುದರಿಂದ ಒಮ್ಮೆಲೇ ವಿದೇಶೀ ಮಾಲುಗಳ ಬೆಲೆ ಇಳಿದಿದೆ. ಆದ್ದರಿಂದ ದೇಶೀ ಉತ್ಪನ್ನಗಳನ್ನು ಕೇಳುವವರೇ ಇಲ್ಲದಂತಾಗಿದೆ.

ಒಂದು ಉದಾಹರಣೆ ತೆಗೆದುಕೊಳ್ಳುವುದಾದರೆ ದೇಶದಲ್ಲೇ ಉತ್ಪಾದಿತವಾಗುವ ಬೆನ್‌ಝೀನ್‌ನ ಬೆಲೆ ಟನ್ ಒಂದಕ್ಕೆ 12,300 ರೂಪಾಯಿಗಳಿವೆ. ಇದರಲ್ಲಿ ಸುಂಕಗಳೇ 4000 ರೂಪಾಯಿಗಳಷ್ಟು ದೇಶದೊಳಗಿನ ಈ ಸುಂಕ ಕಡಿಮೆ ಮಾಡಿದೆ 1993-94 ಕ್ಕೆ ಆಮದು ಸುಂಕ ಶೇ. 15 ರಿಂದ 25 ರಷ್ಟು ಕಡಿಮೆ ಮಾಡಿದ್ದರಿಂದ ಬೆನ್‌ಝೀನ್ ಬೆಲೆ 11,000 ರೂಪಾಯಿಗಳಿಗೆ ಇಳಿದಿದೆ.

ಸದ್ಯಕ್ಕೆ ಅಂತರಾಷ್ಟ್ರೀಯವಾಗೂ ಸಹ ಪೆಟ್ರೋ ರಸಾಯನಿಕಗಳು ಪೆಟ್ರೋಲಿಯಂ ಮತ್ತು ಅದರ ಉತ್ಪನ್ನಗಳ ಬೆಲೆ ತೀವ್ರವಾಗಿ ಇಳಿದಿದೆ. ಇದು ಬಿಕ್ಕಟ್ಟನ್ನು ಇನ್ನೂ ಜಟಿಲಗೊಳಿಸಿದೆ.

ಇದರ ಪರಿಣಾಮವೇನು ಗೊತ್ತೇ? ದೇಶೀ ಉದ್ಯಮಗಳು ನಷ್ಟ ಹೊಂದಿ ಮುಚ್ಚುತ್ತವೆ. ಆಗ ನಾವು ನಮ್ಮ ಎಲ್ಲ ಸ್ವಾವಲಂಬನೆ ಕಳೆದುಕೊಂಡು ವಿದೇಶಿಯರ ಮೇಲೆ ಅವಲಂಬಿಸಬೇಕಾಗುತ್ತದೆ. ನಮ್ಮ ಜನ ಕೆಲಸ ಕಳೆದುಕೊಳ್ಳುತ್ತಾರೆ. ನಿರುದ್ಯೋಗ ಬಡತನ ಎರಡೂ ಹೆಚ್ಚುತ್ತದೆ.

ಕೇರಳದ ಕೊಚ್ಚಿ ರಿಫೈನರಿ ಬೆನ್‌ಝೀನ್ ಉತ್ಪಾದನಾ ಘಟಕವನ್ನು ವಿಸ್ತರಿಸುವ ಯೋಜನೆ ಹಮ್ಮಿಕೊಂಡಿತ್ತು. ಈಗ ಅದನ್ನು ವಿಸ್ತರಿಸುವಂತಿಲ್ಲ. ಹೇಗಿದೆ ಮನ



ಮೋಹನಸಿಂಗ್‌ರ ಮನಮೋಹಕ(?) ಬಜೆಟ್‌ನ ಕತ್ತು ಹಿಸುಕುವ ಪರಿಣಾಮ?

ವಿದೇಶೀ ಬಂಡವಾಳವೆಂಬ ಮರೀಚಿಕೆ

ಉದಾರೀಕರಣದ ಯಾವುದೇ ಕ್ರಮದ ಬಗ್ಗೆ ಸರಕಾರವನ್ನು ಕೇಳಿ "ಅದು ವಿದೇಶಿ ಬಂಡವಾಳದ ಹೂಡಿಕೆ ಹೆಚ್ಚಿಸಿ ನಮ್ಮ ದೇಶದ ಸರ್ವತೋಮುಖ ಅಭಿವೃದ್ಧಿಗೆ ಅನುಕೂಲ ಮಾಡಿಕೊಡುತ್ತದೆ" ಎನ್ನುವ ಉತ್ತರ ತಟ್ಟನೆ ಬರುತ್ತದೆ. ಆದರೆ ಈ ವಿದೇಶೀ ಬಂಡವಾಳ ಬರುತ್ತಲೇ ಇಲ್ಲ. ಉದಾರೀಕರಣ ಮಾತ್ರ ತಡೆಯಿಲ್ಲದೆ ನಡೆದಿದೆ.

ಈಗ ಬಜೆಟ್ ನಂತರ ಮತ್ತೆ ಸರ್ಕಾರ ಹೇಳಿಕೆ ನೀಡುತ್ತಿದೆ. ಇತ್ತೀಚಿನ ಕೋಮುಗಲಭೆ, ಬಾಂಬ್ ಸ್ಫೋಟಗಳಂತಹ ಗಂಭೀರ ಘಟನೆಗಳು ಉಂಟಾಗಿದ್ದರೂ 5 ಮಿಲಿಯ ಡಾಲರುಗಳ ವಿದೇಶೀ ಬಂಡವಾಳ ಹೂಡಿಕೆಯನ್ನು ನಿರೀಕ್ಷಿಸುತ್ತಿದ್ದೇವೆ. ಬಹುಶಃ ಸರ್ಕಾರ ಖಾಯಂ ಆಗಿ ನಿರೀಕ್ಷೆ ಮಾಡುತ್ತಲೇ ಇರುತ್ತದೆ.

ದೇಶದ ಜನತೆಯ ಆಸಕ್ತಿಗಳ ಹಿತರಕ್ಷಣೆಗೆ ಇರುವ ಎಲ್ಲ ನಿರ್ಬಂದಗಳನ್ನು ತೆಗೆದುಹಾಕಿ ಎಲ್ಲವೂ ವಿದೇಶೀ ಬಂಡವಾಳಿಗರು ಹೇಳಿದಂತೆ ನಡೆಯುವಂತಾದಾಗ ಬಹುಶಃ ವಿದೇಶಿ ಬಂಡವಾಳ ಹೂಡಿಕೆಯಾಗಬಹುದು. ಆಮೇಲೆ ಭಾರತವೆಂಬುದೊಂದು ದೇಶ ಉಳಿದೀತೆ?

'ರೋಗ ಪೀಡಿತರನ್ನು ಕೊಂದು ಬಿಡಿ'

ನಮ್ಮ ಮನೆಗಳಲ್ಲಿ ಯಾರಿಗಾದರೂ ಯಾವುದೇ ರೋಗಬಂದರೆ ಏನೂ ಮಾಡುತ್ತೇವೆ? ರೋಗಿಗೆ ಒಳ್ಳೆಯ ಆಹಾರ ನೀಡುತ್ತೇವೆ. ಔಷದೋಪಚಾರ ಮಾಡುತ್ತೇವೆ. ಅಲ್ಲವೇ? ಇದನ್ನೇ ನಮ್ಮ ರೋಗಪೀಡಿತ ಉದ್ಯಮಗಳ ಬಗೆಗೂ ಮಾಡಬೇಕಾಗುತ್ತದೆ ಅಲ್ಲವೇ? ಯಾಕೆಂದರೆ ಈ ಉದ್ಯಮಗಳು ನಮ್ಮ ಆರ್ಥಿಕ ಕುಟುಂಬದ ಸದಸ್ಯರು. ಈ ಎಲ್ಲಕ್ಕೂ ಹೆಚ್ಚಾಗಿ ಇವು ನಮ್ಮ ಜನಗಳಿಗೆ ಬದುಕಿನ ದಾರಿ ತೋರುತ್ತವೆ.

ಆದರೆ ನಮ್ಮ ಸರ್ಕಾರದ ನೀತಿಗಳು ಇತ್ತೀಚೆಗೆ ಇದಕ್ಕೆ ವಿರುದ್ಧವಾಗೇ ಇವೆ. 'ಎಕ್ಸಿಟ್ ನೀತಿ' ಯಾವಾಗ ಬೇಕಾದರೂ ಯಾವ ಕೆಲಸಗಾರನನ್ನಾದರೂ ತೆಗೆದು ಹಾಕುವ ನೀತಿ. ಈ ನೀತಿಯನ್ನು ಸರ್ಕಾರ ಆಗಲೇ ತರುತ್ತಿದೆ.

ಫೆಡರೇಷನ್ ಆಫ್ ಇಂಡಿಯನ್ ಚೇಂಬರ್ಸ್ ಆಫ್ ಕಾಮರ್ಸ್ ಎಂಬ ಉದ್ಯಮಿಗಳ ಸಂಸ್ಥೆಯೊಂದಿದೆ. ಈ ಸಂಸ್ಥೆಯ ಯಜಮಾನ (ಅಂದರೆ ದೇಶದ ಬಂಡವಾಳಿಗರ ನೇತಾರ) ಕಂಟೀಕುಮಾರ ಪೊದ್ದಾರ್ ಅಪ್ಪಣೆ ಕೊಡಿಸಿದ್ದಾನೆ. ರೋಗಪೀಡಿತ ಉದ್ಯಮಗಳನ್ನು ಮುಚ್ಚಿಬಿಡಿ. ಆತ ಹೇಳದೇ ಮುಚ್ಚಿಟ್ಟುಕೊಂಡಿರುವುದು "ಕೆಲಸಗಾರರನ್ನೆಲ್ಲ ಮನೆಗಟ್ಟಿಬಿಡಿ" "ರೋಗಿಗಳನ್ನು ಕೊಂದಿಬಿಡಿ "ಎಂದಂತೆ ಅಲ್ಲವೆ ಈ ಮಾತು?

ಸರ್ಕಾರದ ಹಾಡು ಹಾಡುವವರಿಗೆ ದುಡ್ಡು

ಈ ವರ್ಷದ (1993-94) ಬಜೆಟ್‌ನಲ್ಲಿ ವಿದ್ಯಾ ಸಂಸ್ಥೆಗಳು ಸಂಶೋಧನೆ ಇತ್ಯಾದಿಗಳಿಗೆಲ್ಲ ಕಡಿಮೆ ಹಣ ನೀಡಿರುವುದು ಸರಿಯಷ್ಟೇ. ಆದರೆ ದೆಹಲಿಯ ಸ್ಕೂಲ್ ಆಫ್ ಎಕಾನಾಮಿಕ್ಸ್‌ಗೆ ಸರ್ಕಾರ ಹೆಚ್ಚಿಗೆ ಹಣ ನೀಡಿದೆ.

ಇದಕ್ಕೆ ಕಾರಣ ಈ ಸಂಸ್ಥೆ ಸರ್ಕಾರದ ಆರ್ಥಿಕ ನೀತಿಗಳನ್ನು ಸಮರ್ಥಿಸಲು ಬೇಕಾದ ರೀತಿಯಲ್ಲಿ ಅಂಕಿ ಅಂಶಗಳನ್ನು ಸೃಷ್ಟಿಸಿ ಕೊಡುತ್ತಿರುವುದು. ಉದಾರೀಕರಣದ ಕ್ರಮಗಳನ್ನು ವೈಭವೀಕರಿಸಿದಕ್ಕಾಗಿ ಮತ್ತು ಅದನ್ನೇ ಮುಂದುವರಿಸಲು ಈ ಹೆಚ್ಚಿನ ಹಣ ನೀಡಲಾಗಿದೆಯಂತೆ. ಹೇಗಿದೆ ಸರ್ಕಾರಿ ಹಾಡು ಹಾಡವವರ ಅದೃಷ್ಟ.

ಬಜೆಟ್ ಸುಳ್ಳುಗಳು

ಸರ್ಕಾರ ಮತ್ತು ನಮ್ಮ ಬೂರ್ಜ್ವಾ ಪತ್ರಿಕೆಗಳು ಈ ವರ್ಷದ ಬಜೆಟ್ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದೆ. ಈ ಆದ್ಯತೆ ಈ ವಲಯಗಳಲ್ಲಿ ಹೆಚ್ಚಿನ ಅಭಿವೃದ್ಧಿ ಮಾಡುತ್ತದೆ. ಮುಖ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಗಳು ಹೆಚ್ಚಲಿವೆ ಎಂದು ಬಡಾಯಿ ಕೊಚ್ಚಿಕೊಳ್ಳುತ್ತಿವೆ ಇದು ನಿಜವೇ?

ಇದು ಸುಳ್ಳು. ಮೊದಲನೇಯದಾಗಿ ಹಿಂದಿನ ಬಜೆಟ್‌ಗಳಲ್ಲಿ ಒಟ್ಟು ಬಜೆಟ್ ಮೊತ್ತದ ಶೇ 4.2 ರಷ್ಟನ್ನು ಈ ವಲಯಗಳಿಗೆ ಮೀಸಲಿಟ್ಟರೆ ಈ ಬಜೆಟ್ ಒಟ್ಟು ಮೊತ್ತದ ಶೇ. 3.8 ರಷ್ಟನ್ನು ಮಾತ್ರ ಮೀಸಲಿರಿಸಿದೆ.

ಗ್ರಾಮೀಣ ಬಡತನ ನಿರ್ಮೂಲನೆ

ಈ ಕಾರ್ಯಕ್ರಮಕ್ಕಾಗಿ ಸರ್ಕಾರ ಹಣ ಮೀಸಲಿಟ್ಟಿರುವುದು ಜವಾಹರ್ ರೋಜ್‌ಗಾರ್ ಯೋಜನೆಯಡಿ. ಈ ಯೋಜನೆಯ ಪಾಲನ್ನು 2046 ಕೋಟಿ ರೂಪಾಯಿಗಳಿಂದ 3306 ಕೋಟಿ ರೂಪಾಯಿಗಳಿಗೆ ಏರಿಸಲಾಗಿದೆ. ಆದರೆ ಈ ಯೋಜನೆಯ ಅನುಭವಗಳೇ ಬೇರೆ. ಇದರಲ್ಲಿ ನೂರು ರೂ ಖರ್ಚಾಗಬೇಕಾದರೆ ಕೇಂದ್ರ 80 ರೂ ಮಾತ್ರ ಕೊಡುತ್ತದೆ ರಾಜ್ಯ ಸರ್ಕಾರಗಳು ಉಳಿದ 20ರೂ ತುಂಬಬೇಕು. ರಾಜ್ಯ ಸರ್ಕಾರಗಳು 20 ರೂ ತುಂಬಲಾಗದಿದ್ದರೆ ಕೇಂದ್ರ ಸರ್ಕಾರನೀಡುವ 80 ರೂಗಳನ್ನೂ ಉಪಯೋಗಿಸುವಂತಿಲ್ಲ. ರಾಜ್ಯ ಸರ್ಕಾರಗಳು ಈ ಮೊಬಲಗನ್ನು ಭರಿಸಲು ಸಾಧ್ಯವಾಗದೇ ಹೆಚ್ಚಾಗಿ ಈ ಯೋಜನೆಯಡಿಯ ಹಣ ಖರ್ಚಾಗದೇ ಉಳಿದು ಹೋಗುತ್ತವೆ. ಯೋಜನಾ ಆಯೋಗದ ಮಾಜಿ ಸದಸ್ಯರೊಬ್ಬರ ಪ್ರಕಾರ ಈ ಯೋಜನೆಯಡಿ ಶೇ. 10 ರಷ್ಟು ಮಾತ್ರ ನಿಜವಾಗಿ ಸಮುಪಯೋಗವಾಗುವುದು. ಅಂದರೆ ಈ ಯೋಜನೆಯ ಪಾಲನ್ನು ಹೆಚ್ಚಿಸಿದರೆ ಏನಿಗೆ ಲಾಭ?

ಹೀಗೊಂದು ಗ್ರಾಮ ನೆಲಸಮ ಕಾಂಡ

ದೇಶದ ಉಪ್ಪಗಲಗಳಲ್ಲಿ ಮೂರುಸಾವಿರಕ್ಕೂ ಹೆಚ್ಚು ಮುಗ್ಧ ಜನರ ಪ್ರಾಣಕ್ಕೆ ಎರವಾದ ಅಯೋಧ್ಯಾ ಕಾಂಡ, ಎರಡು ಪ್ರತ್ಯೇಕ ದಿನಗಳಂದು ಸುಮಾರು 400 ಜನರನ್ನು ಬಲಿತೆಗೆದುಕೊಂಡ ಮುಂಬಯಿ-ಕಲ್ಕತ್ತ ಬಾಂಬ್ ಕಾಂಡ ಒಂದು ಬಗೆಯಲ್ಲಿ ಇಡೀ ದೇಶದ ಹೃದಯವನ್ನು ಝಲ್ಲೆನಿಸುವಂತೆ ಮಾಡುತ್ತಿದೆ. ಹೀಗಿರುವಾಗ ದೇಶವನ್ನೇ ಅಲ್ಲೋಲ್ಲಕಲ್ಲೋಲಗೊಳಿಸುವ ಘನಘೋರ ಘಟನೆಯೊಂದು ನಡೆದಿದೆ ಇದು ದೇಶದ ಆಳುವ ಪಕ್ಷದವರ ಸೌಕರ್ಯಕ್ಕಾಗಿ! ಹೌದು ಆಳುವ ಪಕ್ಷದ ಮಹತ್ವದ ಸಭೆಯೊಂದು ಇಷ್ಟರಲ್ಲೆ ನಡೆಯಲಿದೆ. ನಡೆಯಲಿ, ಅದರಲ್ಲೇನಿದೆ? ಎಂದು ಕೇಳುವ ಈ ಪ್ರಶ್ನೆಯಲ್ಲಿ ಯಾವ ತಪ್ಪು ಇಲ್ಲ. ಆದರೆ ತಪ್ಪಿರುವುದು ಸಭೆ ನಡೆಸುವ ಪ್ರಕ್ರಿಯೆಯಲ್ಲಿ.

ಅಖಿಲ ಭಾರತ ಕಾಂಗ್ರೆಸ್(ಐ) ಸಮಿತಿ (ಎ.ಐ.ಸಿ.ಸಿ) ವಿಶೇಷ ಅಧಿವೇಶನ ಹರಿಯಾಣ ಸೂರಜ್‌ಕುಂಡದಲ್ಲಿ ನಡೆಯಲಿದೆ. ಪಕ್ಷದೊಳಗಿನ ಆಂತರಿಕ ಭಿನ್ನಾಭಿಪ್ರಾಯಗಳ ಹಿನ್ನೆಲೆಯಲ್ಲಿ ಈ ಸಭೆಗೆ ತುಂಬಾ ಮಹತ್ವವಿದೆ. ಆದರೆ ಈ ಸಭೆ ನಡೆಯುವ ಮುನ್ನವೇ ಸಂಬಂಧಿಸಿದ ವಿದ್ಯಮಾನವೊಂದು ದೇಶದ ಗಮನವನ್ನೇ ಸೆಳೆದಿದೆ.

ಸೂರಜ್‌ಕುಂಡಕ್ಕೆಹೋಗುವ ಮಾರ್ಗದಲ್ಲಿ ಹರ್ಯಾಣ-ದೆಹಲಿ ಗಡಿಯಲ್ಲಿರುವ ಮಾಧಿಪುರ ಎಂಬ ಗ್ರಾಮದಲ್ಲಿ ಬಡಜನರ ಸಾವಿರಾರು ಮನೆಗಳನ್ನು ನಾಶಮಾಡಲಾಗಿದೆ. ಎ.ಐ.ಸಿಸಿ (ಐ) ನಾಯಕರ ಪ್ರಯಾಣವನ್ನು ಸುಗಮಗೊಳಿಸಲಿಕ್ಕಾಗಿ ದಾರಿ ಮಾಡಿಕೊಡುವುದೇ ಈ ಕ್ರಮದ ಉದ್ದೇಶ.

ಹರಿಯಾಣ ಸರಕಾರದ ಒಂದು ಇಲಾಖೆ ಬುಲ್ಡೋಜರ್‌ಗಳನ್ನು ಬಳಸಿ ಗ್ರಾಮಕ್ಕೆ ಗ್ರಾಮವನ್ನೇ ನೆಲಸಮಗೊಳಿಸಿತು. ಈ ಕಾರ್ಯಾಚರಣೆಯಲ್ಲಿ ಮೂರು ಮಂದಿ ಮಕ್ಕಳು ಮೃತಪಟ್ಟಿದ್ದು ಸಾವಿರಾರು ಜನರು ನಿರಾಶ್ರಿತರಾಗಿದ್ದಾರೆ.

ಆಳುವ ಪಕ್ಷದವರ ಅನುಕೂಲಕ್ಕಾಗಿ ಮಾಡಲಾದ ಈ 'ಪಾಪಕೃತ್ಯ' ಸಂಸತ್ತಿನ ಒಳಗೂ ಹೊರಗೂ ಅಲ್ಲೋಲಕಲ್ಲೋಲವನ್ನೇ ಎಬ್ಬಿಸಿದೆ.

ಬಹುತೇಕ ಎಲ್ಲಾ ರಾಜಕೀಯ ಪಕ್ಷಗಳು ಈ ಕೃತ್ಯವನ್ನು ಖಂಡಿಸಿ ಈ ಸಂತ್ರಸ್ಥ ಜನರಿಗೆ ಪುನರ್‌ವಸತಿ ಕಲ್ಪಿಸಬೇಕೆಂದು ಒತ್ತಾಯಿಸಿವೆ. ಈ ಬೇಡಿಕೆ ಮುಂದಿಟ್ಟು ಸಮಾಜವಾದಿ ಜನತಾಪಕ್ಷದ ನಾಯಕ ಯಶವಂತಸಿನ್ಹಾ ಮಾಧಿಪುರ ಗ್ರಾಮದಲ್ಲಿ ಸತ್ಯಾಗ್ರಹ ನಡೆಸಿದರು.

ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ವಿಷಯ ಪ್ರಸ್ತಾಪ ಬಂದಾಗ ಸಿಪಿಐ(ಎಂ) ಸದಸ್ಯರು ಮಾತನಾಡಿ ಹರಿಯಾಣ ಸರಕಾರದ ಕುಕೃತ್ಯವನ್ನು ಖಂಡಿಸಿದರು.

ಕೇಂದ್ರ ಕಾಂಗ್ರೆಸ್ (ಐ) ಸರಕಾರ ವಿನಾಶಕಾರಿ ಆರ್ಥಿಕ ನೀತಿಗಳು ಮತ್ತು ಬಿಜೆಪಿ-ಸಂಘಪರಿವಾರದ ಅಪಾಯಕಾರಿ ಆಟಗಳ ವಿರುದ್ಧ ಒರಿಸ್ಸಾದ ವಿದ್ಯಾರ್ಥಿ ಯುವಜನರು ಸಿಡಿದೆದ್ದಿದ್ದಾರೆ. ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ. ಅವರಿಗೆ ನೇತೃತ್ವ ನೀಡಿವೆ.

ಮೇಲೆ ತಿಳಿಸಿದ ಎರಡು ಉದ್ದೇಶಗಳಿಗಾಗಿ ಹಾಗೂ ಒರಿಸ್ಸಾದಂಥ ಬಡರಾಜ್ಯಗಳ ಅಭಿವೃದ್ಧಿಗಾಗಿ ತುರ್ತು ಯೋಜನೆಗಳನ್ನು ರೂಪಿಸಬೇಕೆಂದು ಒತ್ತಾಯಿಸಿ ಈ ಎರಡು ಸಂಘಟನೆಗಳು 13 ದಿನಗಳ ಕಾಲ ಸಾಮೂಹಿಕ ಜನಜಾಗೃತಿ ಆಂದೋಳನವನ್ನು ಹಮ್ಮಿಕೊಂಡಿದ್ದವು. 500 ಕಿ.ಮೀ. ಸೈಕಲ್ ಜಾಥಾ ಈ ಆಂದೋಳನದ ಮುಖ್ಯ ಭಾಗವಾಗಿತ್ತು. ಪಶ್ಚಿಮಬಂಗಾಳ-ಒರಿಸ್ಸಾ ಗಡಿಯಲ್ಲಿರುವ ಲಕ್ಷ್ಮಣನಾಥದಲ್ಲಿ ಮಾರ್ಚ್ ಒಂದರಂದು ಕಾರ್ಯಕ್ರಮ ಉದ್ಘಾಟನೆಗೊಂಡಿತು. ಡಿ.ವೈ.ಎಫ್.ಐ ಉಡ್ನಾಪುರ ಜಿಲ್ಲಾ ಸಮಿತಿ ಕಾರ್ಯದರ್ಶಿ ಸೂರ್ಯಚಕ್ರವರ್ತಿ ಎಸ್.ಎಫ್.ಐ. ಕೇಂದ್ರಸಮಿತಿ ಸದಸ್ಯ ಮೇಘನಾದ ಭುಯಾಸ್, ಡಿ.ವೈ.ಎಫ್.ಐ. ಒರಿಸ್ಸಾ ರಾಜ್ಯಾಧ್ಯಕ್ಷ ಸುಭಾಷ್‌ಸಿಂಗ್, ಕಾರ್ಯದರ್ಶಿ ಶಿಶಿರ್ ಹೂಮ್, ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಸುರೇಶ್ ಪಾಣಿಗ್ರಾಹಿ ಮತ್ತಿತರರು ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ಐ.ಎನ್.ಎಸ್‌ಗೆ ದೊರೆತಿರುವ ಮಾಹಿತಿ ಪ್ರಕಾರ ಮಾರ್ಚ್. 10 ರವರೆಗೆ ಜಾಥಾ ಸುಮಾರು ಕಿ.ಮೀ ದೂರವನ್ನು ಕ್ರಮಿಸಿದೆ.

ಎಸ್.ಎಫ್.ಐ.-ಡಿ.ವೈ.ಎಫ್.ಐ. ಗಳ ಈ ಪ್ರಥಮ ಪ್ರಯತ್ನವನ್ನು ರಾಜ್ಯದ ಜನರು ತುಂಬು ಹೃದಯದಿಂದ ಶ್ಲಾಘಿಸಿದ್ದಾರೆ. ಹಾದಿಯುದ್ಧಕ್ಕೂ ಅಲ್ಲಲ್ಲಿ ಸ್ವಾಗತ ಸಮಾರಂಭಗಳನ್ನು ಏರ್ಪಡಿಸಿ ಯುವಚೇತನಗಳಲ್ಲಿ ನವಸ್ಫೂರ್ತಿ ತುಂಬಿದ್ದಾರೆ.

ರೈಲು ತಡೆ

ಸರಕಾರದ ಜನವಿರೋಧಿ ನೀತಿ ಈ ಸಾಲಿನ ರೈಲ್ವೆ ಬಜೆಟ್ ಸಾಕಾರ ರೂಪ ತಳೆದಿರುವುದು ನಮಗೆಲ್ಲ ತಿಳಿದ ವಿಚಾರವೇ. 500 ಕಿ.ಮೀ ಉದ್ದ ಸೈಕಲ್ ಯಾತ್ರೆಯನ್ನು ವ್ಯವಸ್ಥೆಗೊಳಿಸುವ ಮುನ್ನವೇ ಫೆಬ್ರವರಿ 25-26 ರಂದು ಎಸ್.ಎಫ್.ಐ.-ಡಿ.ವೈ.ಎಫ್.ಐ.ಒರಿಸ್ಸಾದ ಪ್ರಮುಖ ರೈಲ್ವೆ ನಿಲ್ದಾಣಗಳಲ್ಲಿ ಹಳಿಗಳ ಮೇಲೆ ಧರಣಿ ಸತ್ಯಾಗ್ರಹ ಹಾಗೂ ರೈಲು ತಡೆ ಚಳವಳಿ ನಡೆಸಿದರು.

ಪ್ರತಿಭಟನಾ ಚಳುವಳಿಯಿಂದಾಗಿ ಜತೀಶ್ವರ, ಬಲಸೋರ್, ಭದ್ರತ್, ಜೈಪ್ರರರೋಡ್,ಕಟಕ್, ಪುರಿ, ನರ್ಲಾರೋಡ್ ಮತ್ತು ದೆಹ್ರಾಂಪುರ ರೈಲ್ವೆ ನಿಲ್ದಾಣಗಳಲ್ಲಿ ರೈಲು ಸೇವೆಗಳು ಅಸ್ತವ್ಯಸ್ಥ ಗೊಂಡವು ರೂರ್ಕೆಲಾದಲ್ಲಿ ಸ್ಟೀಪನ್ ಸೂಪರಿಡೆಂಟ್ ಕಛೇರಿ ಎದುರು ವಿದ್ಯಾರ್ಥಿ-ಯುವಜನರು ಮತಪ್ರದರ್ಶನ ನಡೆಸಿದರು.

"ಜನಜಾಗೃತಿ"

ಕೇಂದ್ರ ಸರಕಾರದ ಆರ್ಥಿಕ ನೀತಿಗಳು ಮತ್ತು ಕೋಮುವಾದಿ ಶಕ್ತಿಗಳ ಆಕ್ರಮಣದ ವಿರುದ್ಧ ರಾಜ್ಯದಲ್ಲಿ ಸ್ವತಂತ್ರವಾಗಿ ಜನಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಸಿಪಿಐ(ಎಂ)ನ ಮಾಜಿ ಸಂಸತ್ ಸದಸ್ಯೆ (ಕಾನ್ಪುರ ಲೋಕಸಭಾ ಕ್ಷೇತ್ರ) ಸುಭಾಷಿಣಿ ಅಲಿ ಈ ಸಭೆಗಳಲ್ಲಿ ಪ್ರಧಾನ ಭಾಷಣ ಮಾಡಿದರು.

ಆಗ್ರಾದಲ್ಲಿರುವ ಕೇಂದ್ರ ಶಸ್ತ್ರಾಸ್ತ್ರ ಡಿಪ್ಪೋ (ಸಿ.ಜ.ಡಿ) ಎದುರು 4000ಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದ ಸಭೆ ನಡೆಯಿತು. ಅಖಿಲ ಭಾರತ ರಕ್ಷಣಾ ಕಾರ್ಮಿಕರ ಒಕ್ಕೂಟ ಇದನ್ನು ವ್ಯವಸ್ಥೆಗೊಳಿಸಿತ್ತು. ಕಾರ್ಮಿಕರ ಸಮಿತಿ 10 ಸ್ಥಾನಗಳ ಪೈಕಿ ಎಂಟರಲ್ಲಿ ತಾನು ಜಯಗೊಳಿಸಿರುವುದು ಹಿನ್ನೆಲೆಯಲ್ಲಿ ವಿಜಯೋತ್ಸವ ಆಚರಣೆಗಾಗಿ ಅದು ಈ ಬೃಹತ್ ಸಭೆಯನ್ನು ಹಮ್ಮಿಕೊಂಡಿತ್ತು.

ಸಭೆ ನಡೆಸಲು ಡಿಪ್ಪೋ ಕಮಾಂಡೆಂಟ್ ಅನುಮತಿ ನಿರಾಕರಿಸಿದ್ದರು. ಆದರೆ ಸಭೆ ನಡೆಯುವ ಹೊರತು ತಾನು ಫ್ಯಾಕ್ಟರಿ ಬರುವುದಿಲ್ಲ ಎಂದು ಸಿ.ಜ.ಡಿ ಕಾರ್ಮಿಕರು ಸ್ಪಷ್ಟ ನುಡಿಗಳಲ್ಲಿ ಹೇಳಿದ್ದರಿಂದ ಕೊನೆಯಲ್ಲಿ ಅನುಮತಿಯನ್ನು ನೀಡಲಾಯಿತು. ಕಾರ್ಮಿಕರು ಮಾತ್ರವಲ್ಲದೆ ಅನೇಕ ಮಂದಿ ಸೈನಿಕರು ಹಾಗೂ ರಸ್ತೆಗಳಲ್ಲಿ ಹಾದು ಹೋಗುವ ಇತರ ಜನರು ನಿಂತು ಸುಭಾಷಿಣಿ ಭಾಷಣವನ್ನು ಆಲಿಸಿದರು.

ರಕ್ಷಣಾ ಕೈಗಾರಿಕೆ ಮೇಲೆ ಪರಿಣಾಮ

ಸುಭಾಷಿಣಿ ಹೊಸ ಆರ್ಥಿಕ ನೀತಿಗಳ ಮೇಲೆ ಉಗ್ರ ಪ್ರಹಾರ ಮಾಡಿದರು. ಖಾಸಗೀಕರಣದಿಂದ ರಕ್ಷಣಾ ಕೈಗಾರಿಕೆಗಳಿಗೆ ತುಂಬಾ ತೊಂದರೆಯಾಗುತ್ತದೆ ಎಂದು ಹೇಳಿದರು. ದೇಶವನ್ನು ವಿದೇಶಿ ಶಕ್ತಿಗಳಿಗೆ ಮಾರಾಟ ಮಾಡಲಾಗಿದ್ದರೂ ವಿಷಮಯ ಕೋಮು ಪ್ರಚಾರದ ಪರಿಣಾಮವಾಗಿ ಜನರು ತಮ್ಮ ತಮ್ಮಲ್ಲೇ ಕಚ್ಚಾಡುತ್ತಿದ್ದಾರೆ ಎಂದು ಅವರು ವಿಷಾದ ವ್ಯಕ್ತಪಡಿಸಿದರು.

ಹಿಮಾಲಯದ ಗಢವಾಲ್ ತಪ್ಪಲಿನಲ್ಲಿರುವ ಡೆಹ್ರಾಡೂನಿನಲ್ಲಿ ಪಕ್ಷದ ಸ್ಥಳೀಯ ಘಟಕ ಮಾರ್ಚ್11 ರಂದು ಏರ್ಪಡಿಸಿದ್ದ ಸಾರ್ವಜನಿಕ ಸಭೆಯಲ್ಲಿ ಸುಮಾರು 2000 ಜನ ಪಾಲ್ಗೊಂಡಿದ್ದರು. ಅವರಲ್ಲಿ 300 ಮಹಿಳೆಯರೂ ಇದ್ದರು.

ಸಿಪಿಐ(ಎಂ) ಏರ್ಪಡಿಸಿದ್ದಾದರೂ ಸಭೆಯಲ್ಲಿ ಸಮಾಜವಾದಿ ಜನತಾಪಕ್ಷ ಮತ್ತು ಸಮಾಜವಾದಿ ಪಕ್ಷದ ಸ್ಥಳೀಯ ನಾಯಕರು ಆಗಮಿಸಿ ಶುಭಕೋರಿ ಮಾತನಾಡಿದರು. ಅದೇ ದಿನ ಸಂಜೆ 7 ಕ್ಕೆ ಡೆಹ್ರಾಡೂನ್ ಶಸ್ತ್ರಾಸ್ತ್ರ ಫ್ಯಾಕ್ಟರಿ ಬಳಿ ನಡೆದ 'ಗೇಟ್ ಮೀಟಿಂಗನ್ನು ಉದ್ದೇಶಿಸಿ ಸುಭಾಷಿಣಿ ಮಾತನಾಡಿದರು. ಕೆಲಸದ ಅವಧಿ ಮುಗಿದಿದ್ದರೂ ಸಭೆಯಲ್ಲಿ ಭಾಗವಹಿಸಿದರು.

ಮಾರ್ಚ್ 12 ರಂದು ಹೃಷಿಕೇಶದಲ್ಲಿನ ಐ.ಡಿ.ಪಿ.ಎಲ್. ಗೇಟ್ ಮೀಟಿಂಗಿನಲ್ಲಿ ಸುಭಾಷಿಣಿ ಪಾಲ್ಗೊಂಡರು. ಜನರ ಕೈಗೆಟುಕುವ ಬೆಲೆಗಳಲ್ಲಿ ದೊರಕುವ ಜೀವರಕ್ಷಕ ಔಷದಗಳನ್ನು ತಯಾರಿಸುವ ಸರಕಾರ ಹೊಸ ಔಷಧಿ ನೀತಿ ಹಾಗೂ ಐ.ಎಂ.ಎಫ್. ನಿರ್ದೇಶಿತ ನೀತಿಗಳ ಪರಿಣಾಮವಾಗಿ ಅದು ಸರಕಾರೀ ರಂಗದ ಉದ್ಯಮಗಳ ವಿರುದ್ಧ ತಳೆಯುತ್ತಿರುವ ನೀತಿಗಳಿಂದಾಗಿ ಐ.ಡಿ.ಪಿ.ಎಲ್. ಮೇಲೆ ಕೂಡ ಕೆಟ್ಟ ಪರಿಣಾಮ ಬೀರುವ ಸಂಭವವಿದೆ. ಹೃಷಿಕೇಶದಲ್ಲಿ ಇತರ ಒಂದೆರೆಡು ಸಣ್ಣ ಸಭೆಗಳಲ್ಲಿ ಕೂಡಾ ಸುಭಾಷಿಣಿ ಮಾತನಾಡಿದರು.

ಒಂದೇ ಜಿಲ್ಲೆಯಲ್ಲಿ ಎರಡು ಲಕ್ಷ ಸಹಿ ಸಂಗ್ರಹ

ರಾಷ್ಟ್ರೀಯ ಏಕತಾ ಅಭಿಯಾನ ಕರೆ ನೀಡಿರುವ ಮೇರೆಗೆ ರಾಷ್ಟ್ರದ ಏಕತೆಯನ್ನು ರಕ್ಷಿಸುವ ಪ್ರತಿಜ್ಞೆಗೆ ಕಾನ್ಪುರ ಜಿಲ್ಲೆಯಲ್ಲಿ ಮಾರ್ಚ್ 30 ರೊಳಗೆ ಎರಡು ಲಕ್ಷ ಜನರ ಸಹಿಯನ್ನು ಸಂಗ್ರಹಿಸಲು ಸಿಪಿಐ(ಎಂ) ಜಿಲ್ಲಾ ಸಮಿತಿ ನಿರ್ಧರಿಸಿದೆ. ಅದು ಈಗಾಗಲೇ 40 ಸಾವಿರ ಸಹಿಗಳನ್ನು ಸಂಗ್ರಹಿಸಿದೆಯೆಂದು ಐ.ಎನ್.ಎಸ್. ಮಾರ್ಚ್ 12 ರ ತನ್ನ ವರದಿಯಲ್ಲಿ ತಿಳಿಸಿದೆ.

ಸಹಿ ಸಂಗ್ರಹ ಚಳುವಳಿಯ ಮೊದಲ ಸುತ್ತಿನಲ್ಲಿ ಕಾನ್ಪುರ ನಗರದ ಮುಖ್ಯ ಕವಲು ದಾರಿಗಳಲ್ಲಿ ಮತ್ತು ಎಲ್ಲಾ ಫ್ಯಾಕ್ಟರಿಗೇಟ್‌ಗಳಲ್ಲಿ ಬೂತ್‌ಗಳನ್ನು ಸ್ಥಾಪಿಸಲಾಗಿತ್ತು.

ತ್ರಿಪುರಾದಲ್ಲಿ ಮುಕ್ತ ಚುನಾವಣೆ ಆಗ್ರಹಿಸಿ ಮನವಿ

ನೃಪೇನ್ ಚಕ್ರವರ್ತಿ ದಶರಥದೇವ, ಮಾಣಿಕ್ ಸರ್ಕಾರ್ ಮತ್ತು ಅಘೋರ್ ದೇವವರ್ಮಾ ಅವರನ್ನೊಳಗೊಂಡ ಸಿಪಿಎಂ ನಿಯೋಗವೊಂದು ಮಾಚ್. 12 ರಂದು ತ್ರಿಪುರಾ ರಾಜ್ಯಪಾಲ ರಘುನಾಥ ರೆಡ್ಡಿ ಅವರನ್ನು ಭೇಟಿ ಮಾಡಿ ಒಂದು ಮನವಿಯನ್ನು ಅರ್ಪಿಸಿತು.

ಪ್ರಜಾಪ್ರಭುತ್ವದ ಮರುಸ್ಥಾಪನೆ, ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗೆ ವಾತಾವರಣ ಸೃಷ್ಟಿಸುವುದು, ಜನಾಂಗೀಯ ಸೌಹಾರ್ದದಲ್ಲಿ ಸುಧಾರಣೆಗೆ ಒತ್ತಾಯ ಇವುಗಳು ಮನವಿಯಲ್ಲಿ ಅಡಕುತಿದ್ದ ಅಂಶಗಳು.

ರಾಜ್ಯದ ಕೆಲವು ಭಾಗಗಳಲ್ಲಿ, ಅದರಲ್ಲೂ ಮುಖ್ಯವಾಗಿ ಬುಡಕಟ್ಟು ಪ್ರದೇಶಗಳಲ್ಲಿ ಉಂಟಾಗಿರುವ ಬಹುತೇಕ ಬರಗಾಲದಂಥ ಪರಿಸ್ಥಿತಿಯನ್ನು ಎದುರಿಸಲು ಅಗತ್ಯ ತುರ್ತು ಕ್ರಮಗಳನ್ನು ಕೈಗೊಳ್ಳಬೇಕೆಂದೂ ಮನವಿಯಲ್ಲಿ ಒತ್ತಾಯ ಪಡಿಸಲಾಗಿದೆ.

ಬಲತ್ಕಾರದಿಂದ ವಶಪಡಿಸಿಕೊಳ್ಳಲಾಗಿರುವ ಹಾಗೂ ಲೂಟಿಗೈಯಲಾಗಿರುವ ಪ್ರಜಾಸತ್ತಾತ್ಮಕ ಸಾಮೂಹಿಕ ಸಂಘಟನೆಗಳ ಹಾಗೂ ಎಡಪಕ್ಷಗಳ ಕಛೇರಿಗಳನ್ನು ಅವುಗಳಿಗೆ ಮರಳಿಸಲು ತಕ್ಷಣ ಕ್ರಮಗಳನ್ನು ಕೈಗೊಳ್ಳುವಂತೆ ನಿಯೋಗ ರಾಜ್ಯಪಾಲರನ್ನು ಆಗ್ರಹಿಸಿತು.

ಸೇನೆ ನಿಯೋಜನೆಗೆ ವಿರೋಧ

ವಿಧಾನಸಭೆಯ ಮುಂದೂಡಲಾಗಿರುವ ಚುನಾವಣೆ ನಡೆಯುವ ಯಾವುದೇ ಹಂತದಲ್ಲಿ ಸೇನೆಯನ್ನು ನಿಯೋಜಿಸದಂತೆ ನಿಯೋಗ ಮನವಿ ಮಾಡಿತು.

ಬುಡಕಟ್ಟು ಝುಮಿಯಾಗಳು [illegible] ಕೃಷಿ ಕಾರ್ಮಿಕರು ಮೊದಲಾದ ದುರ್ಬಲ ವಿಭಾಗಗಳ ಆರ್ಥಿಕ ಪರಿಸ್ಥಿತಿ ಹದಗೆಡುತ್ತಿರುವ ಬಗ್ಗೆ ನಿಯೋಗ ಕಳವಳ ವ್ಯಕ್ತಪಡಿಸಿತು. ಈ ಜನರಿಗೆ ಎರಡು ಪಟ್ಟು ಪಡಿತರ ಸಾಮಗ್ರಿಗಳನ್ನು ಉಚಿತವಾಗಿ ನೀಡಬೇಕು, ಉದ್ಯೋಗ ಒದಗಿಸಲು ಉದ್ಯೋಗಾವಕಾಶಗಳನ್ನು ಹೆಚ್ಚಿಸಬೇಕು ಎಂದು ನಾಯಕರು ಸಲಹೆ ಮಾಡಿದರು.

ಚುನಾವಣೆ ಮುಂದೂಡಲು ಆಕ್ಷೇಪ

ಚುನಾವಣೆಗಳನ್ನು ಮತ್ತೆ ಮುಂದೂಡಿ ಮೇ ತಿಂಗಳ ಮೊದಲ ಭಾಗದಲ್ಲಿ ನಡೆಸಲಾಗುವುದೆಂಬ ವರದಿಗಳನ್ನು ಪ್ರಸ್ತಾಪಿಸಿದ ನಿಯೋಗ ಈ ಅಭಿಪ್ರಾಯಕ್ಕೆ ತೀವ್ರವಾದ ಆಕ್ಷೇಪ ವ್ಯಕ್ತಪಡಿಸಿತು.

ತಮ್ಮ ಸಲಹೆಗಾರರು ಆಗಮಿಸಿದ ತಕ್ಷಣ ಎಲ್ಲಾ ಬೇಡಿಕೆಗಳನ್ನು ಪರೀಶೀಲಿಸುವುದಾಗಿ ರಾಜ್ಯಪಾಲರು ನಿಯೋಗಕ್ಕೆ ಆಶ್ವಾಸನೆ ನೀಡಿದರು. ಚಳವಳಿ ನಿರತ ಪೋಲೀಸರನ್ನು 311 ನೇ ವಿಧಿಯನ್ವಯ ವಜಾ ಮಾಡಿರುವುದನ್ನು ಗಮನಕ್ಕೆ ತಂದಾಗ, ಈ ಪ್ರಕರಣವನ್ನು ಪರಿಶೀಲನಾ ಸಮಿತಿಯೊಂದು ಸಹಾನುಭೂತಿಯಿಂದ ಪರಿಗಣಿಸಲಿದೆ ಎಂದು ಭರವಸೆ ನೀಡಿದರು.



ನಕಲಿ ಕಾಂಗ್ರೆಸ್ಸಿಗರಿಂದ ದೇಶ ವಿನಾಶದ ಅಂಚಿಗೆ

ಬ್ರಿಟೀಷರು ನಮಗೆ ಸ್ವಾತಂತ್ರ ನೀಡಲು ಒಪ್ಪಿದಾಗ, ಅವರು ಮುಂದಿಟ್ಟ ಪ್ರಶ್ನೆ ಮತ್ತೊಂದು , "ಅದು ಭಾರತ ಪಾಕಿಸ್ತಾನದ ವಿಭಜನೆ". ನಮ್ಮ ನಾಯಕ ಮುಖಂಡರು ರಾಜಕೀಯ ದಾಹಕ್ಕಾಗಿ ಮಹಾತ್ಮಗಾಂಧಿ, ಅಬ್ದುಲ್ ಕಲಂ ಆಜಾದ್‌ರಂತಹ ಮುಖಂಡರ ಮಾತನ್ನು ತಿರಸ್ಕರಿಸಿ ವಿಭಜನೆಗೆ ಒಪ್ಪಿ ಎರಡು ರಾಷ್ಟ್ರಗಳು ಪ್ರತ್ಯೇಕ ಸ್ವಾತಂತ್ರ ಪಡೆದಿದ್ದೇ ಹಿಂದೂ ಮತ್ತು ಮುಸ್ಲಿಮ್ ಕೋಮುವಾದ ಬೆಳೆಯಲಿಕ್ಕೆ ಮೂಲ- ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ಸಂಘಟನೆಗಳು ಕೋಲಾರ ತಾಲೂಕಿನಾದ್ಯಂತ ಕೈಗೊಂಡ ಒಂದು ವಾರದ ಕೋಮು ಸೌಹಾರ್ದ ಪ್ರಚಾರಾಂದೋಲನ ಸದ್ಭಾವನಾ ಜಾಥಾವನ್ನು ಸ್ವಾತಂತ್ರ್ಯ ಹೋರಾಟಗಾರರ ಸಂಘದ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀಯುತ ಬಸವರಾಜ್‌ರವರು ಉದ್ಘಾಟಿಸಿ ಮಾತನಾಡಿದರು. ಅವರು ಮುಂದುವರಿದು ಯಾವ ಆಶೋತ್ತರ ಇಟ್ಟುಕೊಂಡು ಸ್ವಾತಂತ್ರ್ಯಗಳಿಸಿದೆವೋ ಅವು ಈಡೇರಿಲ್ಲಾ. ಇಂದು ನಕಲಿ ಕಾಂಗ್ರೆಸ್ಸಿಗರು ಸ್ವಾರ್ಥಪರರಾಗಿ ದೇಶವನ್ನು ವಿನಾಶದ ಅಂಚಿಗೆ ದೂಕುತ್ತಿದ್ದಾರೆ.



ಕೋಮುವಾದ ಬೆಳೆದಿದ್ದೇ ಆದರೆ ದೇಶವಿನಾಶ ಖಂಡಿತ. ಭಾರತ ಜಾತ್ಯಾತೀತ ಪ್ರಜಾಪ್ರಭುತ್ವ ದೇಶ, ಈ ನಿಲುವೇ ದೇಶದ ಅಡಿಪಾಯ. ಕೋಮುಸೌಹಾರ್ದತೆಗಾಗಿ ಈ ಎಸ್.ಎಫ್.ಐ., ಡಿ.ವೈ.ಎಫ್.ಐ., ಸಂಘಟನೆಗಳ ನಾಯಕತ್ವದಲ್ಲಿ ಹಮ್ಮಿಕೊಂಡಿರುವ ಈ ರೀತಿಯಲ್ಲಿ ಜಾಥಾಗಳು ನಿರಂತರ ನೆಡೆಯುಬೇಕಿದೆ ಎಂದರು.

ಈ ಕಾರ್ಯಕ್ರಮದಲ್ಲಿ ಡಿ.ವೈ.ಎಫ್.ಐ. ರಾಜ್ಯಕಾರ್ಯದರ್ಶಿ ಎಸ್.ವೈ. ಗುರುಶಾಂತ್ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ದೇಶದ ಐಕ್ಯತೆ ಸಮಗ್ರತೆ, ಕೋಮು ಸೌಹಾರ್ದತೆಗಾಗಿ ಎಸ್.ಎಫ್.ಐ, ಡಿ.ವೈ.ಎಫ್.ಐ., ಸಂಘಟನೆಗಳು ಹಲವು ದಶಕಗಳಿಂದಲೂ ಶ್ರಮಿಸುತ್ತಾ ಈ ನಿಟ್ಟಿನಲ್ಲಿ ನೂರಾರು ಕಾರ್ಯಕರ್ತರನ್ನು ಈ ಕೆಚ್ಚೆದೆಯ ಹೋರಾಟದಲ್ಲಿ ಕಳೆದುಕೊಂಡಿವೆ. ಈ ಸಂಘಟನೆಗಳು ಈ ಹೋರಾಟವನ್ನು ಇನ್ನೂ ದೊಡ್ಡ ಮಟ್ಟದಲ್ಲಿ ಮುಂದುವರಿಸುತ್ತವೆ ಎಂದರು.

ಜಾಥಾ ಉದ್ದೇಶ, ಮತ್ತು ಧ್ಯೇಯವನ್ನು ಎಸ್.ಎಫ್.ಐ. ಕೋಲಾರ ಜಿಲ್ಲಾ ಅಧ್ಯಕ್ಷರಾದ ಎಂ.ವಿ. ನಾರಾಯಣಸ್ವಾಮಿ ತಿಳಿಸಿದರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಹೊಳಲಿ ಪ್ರಕಾಶ್ ಮಾಜಿ ಮಂಡಲ ಪ್ರಧಾನರು, ಜನತಾದಳದ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳು ಇವರು ವಹಿಸಿದ್ದರು.

ಸುಮಾರು 30 ಹಳ್ಳಿ ಮಂಡಲ ಕೇಂದ್ರಗಳಲ್ಲಿ ಕೋಮು ಸೌಹಾರ್ದತಾ ಜಾಥಾ ಸಂಚರಿಸಿತು. ಕೋಮುವಾದದ ಬಿಸಿ ಹಳ್ಳಿಗಾಡಿಗೆ ದೊಡ್ಡ ರೀತಿಯಲ್ಲಿ ತಟ್ಟದಿದ್ದರೂ, ಕೋಮುವಾದಿಗಳ ಅಬ್ಬರ ಸುಳ್ಳು ಪ್ರಚಾರಗಳಿಗೆ ಕಿವಿಗೊಟ್ಟಿದ್ದಾರೆ ಎಂಬುದೂ ಈ ಜಾಥಾದಲ್ಲಿ ತಿಳಿದುಬಂದಿತು.

ನಾಟಕ ಹಾಡು, ಭಾಷಣಗಳ ಮುಖಾಂತರ ಕಾರ್ಯಕ್ರಮವನ್ನು ನೀಡಲಾಯಿತು.

ಉತ್ತಮವಾದ ಹಾಡುಗಳು ಜನರ ತಮ್ಮ ಕಷ್ಟಗಳ ಬಗ್ಗೆ ಚಿಂತಿಸುವಂತೆ ಮಾಡಿತು ಜನ ಸಾಮಾನ್ಯರನ್ನು ತಟ್ಟಿತು.

"ಅಧಿಕಾರದ ದಾಹಕ್ಕಾಗಿ ಹಿಂದೂ ಮುಸ್ಲಿಮ್‌ರ ದಹನ ನಾಟಕ" ಇಂದು

ಆ "ಸ್ವಾತಂತ್ರ್ಯ ಪ್ರೇಮಿ" ಯೆಲ್ಟ್‌ಸಿನ್‌ನ ಸರ್ವಾಧಿಕಾರಿರೂಪ

ಲೋಕ ಸಂಚಾರ

ಶರತ್‌ಚಂದ್ರ

ಎಲ್ಲಾ ಕಡೆಯಿಂದ ವಿರೋಧ, ಸವಾಲು ಎದುರಿಸುತ್ತಿರುವ ರಶ್ಯನ್ ಅಧ್ಯಕ್ಷ ಯೆಲ್ಟ್‌ಸಿನ್ ನಿರೀಕ್ಷಿತವಾದದನ್ನು ಮಾಡಿದ್ದಾರೆ. ರಶ್ಯದಲ್ಲಿ ತುರ್ತು ಪರಿಸ್ಥಿತಿ ಘೋಷಿಸಿ, ಸುಗ್ರೀವಾಜ್ಞೆಗಳ ಮೂಲಕ ಆಳುವುದಾಗಿ ಘೋಷಿಸಿದ್ದಾರೆ. ಇದು ಪೂರ್ಣ ಸರ್ವಾಧಿಕಾರ ಕ್ರಮವಲ್ಲದೆ ಬೇರೆನಲ್ಲ. ಎಲ್ಲಾ ಪ್ರಸಾರ ಮಾಧ್ಯಮಗಳನ್ನು ರೇಡಿಯೋ, ಟಿ.ವಿ. ಪತ್ರಿಕೆಗಳನ್ನು ತಮ್ಮ ನೇರ ಹತೋಟಿಗೆ ತೆಗೆದುಕೊಂಡಿದ್ದಾರೆ. ಪಾರ್ಲಿಮೆಂಟು ತಿರಸ್ಕರಿಸಿದ್ದರೂ ಎಪ್ರಿಲ್ 25 ರಂದು ಜನಮತ ಸಂಗ್ರಹ ನಡೆಸಲು ಅಧ್ಯಕ್ಷರು ಸುಗ್ರೀವಾಜ್ಞೆ ಹೊರಡಿಸಿದ್ದಾರೆ.

ರಶ್ಯಾದ ಸುಪ್ರೀಂ ಸೋವಿಯೆಟ್ ತುರ್ತು ಸಭೆ ಸೇರಿ 125-16 ಮತಗಳಿಂದ ಯೆಲ್ಟ್‌ಸಿನ್‌ರ ತುರ್ತುಪರಿಸ್ಥಿತಿ ಘೋಷಣೆ ಸಂವಿಧಾನಕ್ಕೆ ವಿರುದ್ಧವಾದುದು ಎಂಬ ಬಗ್ಗೆ ಸಂವೈಧಾನಿಕ ಕೋರ್ಟಿನ ಅಭಿಪ್ರಾಯ ಹೇಳಿದೆ. ಸುಪ್ರೀಂ ಸೋವಿಯೆಟ್‌ನ ಕೇಳಿಕೆ ಮೇಲೆ ಈ ವಿಷಯದ ಬಗ್ಗೆ ಪರಿಶೀಲಿಸಿದ ಸಂವೈಧಾನಿಕ ಕೋರ್ಟ್, ಹಲವಾರು ಅಂಶಗಳಲ್ಲಿ ಅಧ್ಯಕ್ಷರ ತುರ್ತುಪರಿಸ್ಥಿತಿ ಘೋಷಣೆ ಸಂವಿಧಾನದ ಹಲವು ಕಲಮುಗಳನ್ನು ಉಲ್ಲಂಘಿಸಿದೆ ಎಂದು ತೀರ್ಪಿತ್ತಿದೆ. ಈ ತೀರ್ಪು 10-3 ಬಹುಮತದಿಂದ ನೀಡಲಾಗಿದೆ. ಇದು ಅಧ್ಯಕ್ಷರ ಮೇಲೆ ಸಂವಿಧಾನ ಉಲ್ಲಂಘಿಸಿದ ಗಂಭೀರ ದೋಷಾರೋಪಣೆ ಕ್ರಮ ಕೈಗೊಳ್ಳಲು ಮೊದಲ ಹೆಜ್ಜೆ.

ರಶ್ಯನ್ ಸಂವಿಧಾನದ ಪ್ರಕಾರ ಅಧ್ಯಕ್ಷರ ವಿರುದ್ಧ ಜನತಾ ಪ್ರತಿನಿಧಿ ಕಾಂಗ್ರೆಸ್ (ಪಾರ್ಲಿಮೆಂಟು) ದೋಷಾರೋಪಣೆ ನಿರ್ಣಯವನ್ನು ಮೂರನೇ ಎರಡು ಭಾಗ ಬಹುಮತದಿಂದ ಪಾಸು ಮಾಡಿದರೆ, ಅಧ್ಯಕ್ಷರನ್ನು ತೆಗೆದು ಹಾಕಲಾಗುವುದು. ಆಗ ಉಪಾಧ್ಯಕ್ಷರು ಅಧ್ಯಕ್ಷರ ಅಧಿಕಾರವನ್ನುವಹಿಸಿಕೊಳ್ಳುವರು.

ಮುಂದಿನ ಹೆಜ್ಜೆಯಾಗಿ, ಜನತಾಪ್ರತಿನಿಧಿ ಕಾಂಗ್ರೆಸ್(ಪಾರ್ಲಿಮೆಂಟು) ಸಭೆಯನ್ನು ದೋಷಾರೋಪಣೆ ನಿರ್ಣಯದ ಬಗ್ಗೆ ಚರ್ಚಿಸಲು ಕರೆಯಲಾಗಿದೆ. ಯೆಲ್ಟ್‌ಸಿನ್‌ನ್ನರ ಸರ್ವಾಧಿಕಾರಿ ಪ್ರವೃತ್ತಿ ಹಾಗೂ ಕುಸಿಯುತ್ತಿರುವ ಬೆಂಬಲದ ಹಿನ್ನೆಲೆಯಲ್ಲಿ ಅಧ್ಯಕ್ಷ ಯೆಲ್ಟ್‌ಸಿನ್ನರ ಅಧಿಕಾರದ ನೆಲೆ ಕುಗ್ಗುತ್ತಿದೆ. ಈಗ ನಡೆಯುತ್ತಿರುವ ಅಧಿಕಾರಕ್ಕಾಗಿ ಹೋರಾಟದಲ್ಲಿ ಸೈನ್ಯ ತಟಸ್ಥವಾಗಿರಬೇಕೆಂದು ಯೆಲ್ಟ್‌ಸಿನ್ ಮನವಿ ಮಾಡಿದ್ದಾರೆ. ಆದರೆ ಪಾರ್ಲಿಮೆಂಟು, ಕೋರ್ಟ್‌ಗಳ ನಿರ್ಣಯವನ್ನು ಉಲ್ಲಂಘಿಸಿ ಯೆಲ್ಟ್‌ಸಿನ್ ತನ್ನ ಸರ್ವಾಧಿಕಾರ ಮುಂದುವರಿಸಿದ್ದೇ ಆದರೆ, ಅವರು ಸೈನ್ಯದ ಬಳಕೆ ಮಾಡುವುದು ಅನಿವಾರ್ಯವಾದುದು. ಹಾಗಾದಲ್ಲಿ ಸೈನ್ಯದ ದೊಡ್ಡ ಬಾಗ ಯೆಲ್ಟ್‌ಸಿನ್ನರ ವಿರುದ್ಧವೇ ತಿರುಗಿಬೀಳುವ ಸಂಭವ ಜಾಸ್ತಿ. ಸೈನ್ಯದಲ್ಲಿ ಅಪಾರವಾದ ಅತೃಪ್ತಿ, ಕೋಪ ಹೊಗೆಯಾಡುತ್ತಿದೆ.

ಯೆಲ್ಟ್‌ಸಿನ್ನರು ಚುನಾಯಿತ ಪಾರ್ಲಿಮೆಂಟು, ಪ್ರಸಕ್ತ ಸಂವಿಧಾನವನ್ನು ಉಲ್ಲಂಘಿಸಿ ತಮ್ಮ ಸರ್ವಾಧಿಕಾರ ಸ್ಥಾಪಿಸಹೊರಟಿದ್ದಾರೆ. ಇದು ಸ್ಪಷ್ಟ. ಆದರೆ ಅವರ ಪಾಶ್ಚಿಮಾತ್ಯ ಮಿತ್ರರು ಇದು 'ಪ್ರಜಾಪ್ರಭುತ್ವ' 'ಮುಕ್ತ ಮಾರುಕಟ್ಟೆ' ಸ್ಥಾಪಿಸುವ ದೃಷ್ಟಿಯಿಂದ ಅಗತ್ಯ. ಪ್ರಸಾರ ಮಾಧ್ಯಮಗಳ ಮೇಲೆ ಹತೋಟಿ ಹೇರಿರುವ ಕ್ರಮ ಸಹ 'ವಾಕ್ ಸ್ವಾತಂತ್ರ್ಯ' 'ಅಭಿಪ್ರಾಯ ಸ್ವಾತಂತ್ರ್ಯ' ಕಾಪಾಡುವುದಂತೆ ಇದಕ್ಕಿಂತ ದೊಡ್ಡ ಜೋರಿಕೆ ಬೇಕಿಲ್ಲ. ಅಮೇರಿಕದ ನಾಯಕತ್ವದಲ್ಲಿ ವಿಕಸಿತ ದೇಶಗಳ ಗುಂಪು 7 ಯೆಲ್ಟ್‌ಸಿನ್ ಅಧಿಕಾರ ಉಳಿಸಿಕೊಳ್ಳಲು ತುರ್ತು ಸಭೆ ಕರೆದಿದೆ. ಯೆಲ್ಟ್‌ಸಿನ್ ಅಧಿಕಾರ ಯಾರ ಹಿತಾಸಕ್ತಿ ಕಾಪಾಡಲು ಎಂದು ತಿಳಿಯಲು ಇದಕ್ಕಿಂತ ಹೆಚ್ಚಿನ ಪುರಾವೆ ಬೇಕೆ?

ಚೀನಾ ಬೆಳವಣಿಗೆ ದರದ ಗುರಿ ಶೇ. 6 ರಿಂದ ಶೇ. 9ಕ್ಕೆ ಏರಿಕೆ

ಇಡೀ ವಿಶ್ವದಲ್ಲೇ ಆರ್ಥಿಕ ಹಿಂಜರಿತ ಕಂಡುಬರುತ್ತಿದೆ. ವಿಕಸಿತ ದೇಶಗಳಲ್ಲೂ ಇದು ಗಮನಾರ್ಹವಾಗಿ ಕಂಡು ಬಂದಿದೆ. ಆದರೆ ಚೀನಾ ತನ್ನ ಎಂಟನೆ ಯೋಜನೆ 1991-95ಯ ಆರ್ಥಿಕ ಬೆಳವಣಿಗೆಯ ದರದ ಗುರಿಯನ್ನು ಶೇ. ಕಡಾ 6 ರಿಂದ ಶೇ.9 ಕ್ಕೇರಿಸಿದೆ. ಇದು ಈಗಿನ ಪರಿಸ್ಥಿತಿಯಲ್ಲಿ ಆರ್ಥಿಕ ಯಕ್ಷಣೆಯಿಲ್ಲದೆ ಬೇರಲ್ಲ. ಚೀನಾದ ಯೋಜಿತ ಬೆಳವಣಿಗೆಯ ಪ್ರಾಬಲ್ಯದ ಕುರುಹು ಇದು. ಅಲ್ಲದೆ ಈ ಗುರಿ ನಿಜಸ್ಥಿತಿಯ ಹಿನ್ನೆಲೆಯಲ್ಲಿ ಅಸಂಬಂಧವಾದದ್ದು ಏನಲ್ಲ. ಚೀನಾ ಕಳೆದ ಐದು ವರ್ಷಗಳಲ್ಲಿ ಶೇಕಡಾ 8 ಸರಾಸರಿ ಆರ್ಥಿಕ ಬೆಳವಣಿಗೆ ಸಾಧಿಸಿದೆ. ಕಳೆದ ವರ್ಷ ಶೇಕಡಾ 12.8 ಗುರಿಸಾಧಿಸಿದೆ.

ಹಾಂಕ್‌ಕಾಂಗ್ ಅನ್ನೂ 1997 ರಲ್ಲಿ ಚೀನಾಕ್ಕೆ ವರ್ಗಾಯಿಸುವ ಬಗ್ಗೆ ಚೀನಾ-ಬ್ರಿಟನ್ ನಡುವೆ ಆದ ಒಪ್ಪಂದ ಕಲಮುಗಳನ್ನು ಹಾಂಕಾಂಗ್, ಬ್ರಿಟನ್ ಒಂದೊಂದಾಗಿ ಉಲ್ಲಂಘಿಸುವುದರ ವಿರುದ್ಧ ಚೀನಾ ತೀವ್ರವಾಗಿ ಪ್ರತಿಭಟಿಸಿದೆ. ಹಾಂಗ್‌ಕಾಂಗ್‌ನ ಸಂವಿಧಾನದಲ್ಲಿ ಬದಲಾವಣೆ ಇವುಗಳಲ್ಲೊಂದು. ಹಾಂಗ್‌ಕಾಂಗ್‌ನಲ್ಲಿ ಸಂವಿಧಾನಿಕ ಬೆಳವಣಿಗೆಗಳನ್ನು ಒಪ್ಪಿಕೊಂಡರೆ ಮಾತ್ರ ಅಮೇರಿಕ ವ್ಯಾಪಾರ ಒಪ್ಪಂದ ಸಾಧ್ಯ ಎಂಬ ನೀತಿಯನ್ನು ಚೀನಾ ಬಲವಾಗಿ ಟೀಕಿಸಿದೆ. ಹಾಂಗ್‌ಕಾಂಗ್ ಬಗ್ಗೆ ಚೀನಾ-ಬ್ರಿಟನ್ ಒಪ್ಪಂದಲ್ಲಿ ಮೂರನೆಯ ದೇಶ ಮೂಗು ತೂರಿಸುವುದು ಸಹಿಸುವುದಿಲ್ಲ ಎಂದು ಚೀನಾ ಟೀಕಿಸಿದೆ.

ಇನ್ನೊಂದು ಬೆಳವಣಿಗೆಯಲ್ಲಿ GATT ಸೇರಲು ಹೇರಲಾಗುತ್ತಿರುವ ಕೆಲವು ಶರತ್ತುಗಳನ್ನು ಪಾಲಿಸಲು ಸಾಧ್ಯವಿಲ್ಲ ಎಂದು ನಿರಾಕರಿಸಿದೆ.

ಉತ್ತರ ಕೋರಿಯಾದಲ್ಲಿ 15 ಲಕ್ಷ ಸ್ವಯಂಸೇವಕರು ಯುದ್ಧಕ್ಕೆ ಸಿದ್ಧ

ಕೊರಿಯಾ ಉಪಖಂಡದಲ್ಲಿ ಯುದ್ಧದಂತಹ ಸನ್ನಿವೇಶ ಉಂಟಾಗಿದೆ. ದಕ್ಷಿಣ ಕೊರಿಯಾ ಮತ್ತು ಅಮೇರಿಕಗಳ ಜಂಟಿ ಸೇನಾ ಕವಾಯಿತನಲ್ಲಿ 1 ಲಕ್ಷ 20 ಸಾವಿರ ಸೈನಿಕರು ಭಾಗವಹಿಸುತ್ತಿದ್ದಾರೆ. ಕೊರಿಯಾಗಳ ನಡುವೆ ನಡೆಯುತ್ತಿರುವ ಶಾಂತಿ ಮಾತುಕತೆ ಹಿನ್ನೆಲೆಯಲ್ಲಿ ಈ ಕವಾಯಿತು ರದ್ದುಪಡಿಸಬೇಕೆಂಬ ಉತ್ತರ ಕೋರಿಯಾದ ಮನವಿಯನ್ನು ತಿರಸ್ಕರಿಸಲಾಯಿತು. ಅಲ್ಲದೆ ಉತ್ತರ ಕೊರಿಯಾದ ಸಾರ್ವಭೌಮತೆ ಪ್ರಶ್ನಿಸುವ ಶರತ್ತುಗಳಿಂದ ಅಣ್ವಸ್ತ್ರ-ಪ್ರಸಾರ ನಿಷೇಧ ಒಪ್ಪಂದವಿಂದ ಉತ್ತರ ಕೋರಿಯಾ ಹೊರಬಂದಿದೆ. ಇದರಿಂದಾಗಿ ಪರಿಸ್ಥಿತಿ ಇನ್ನೂ ಬಿಗಡಾಯಿಸಿದೆ. ಜಂಟಿ ಸೇನಾ ಕವಾಯಿತು ಹೆಸರಿನಲ್ಲಿ ಉತ್ತರ ಕೊರಿಯಾದ ಸಾರ್ವಭೌಮತೆ ಮೇಲೆ ಧಾಳಿ ಮಾಡುವ ಸಾಧ್ಯತೆ ಇರುವುದರಿಂದ ಉತ್ತರ ಕೋರಿಯಾ ಸಹ ಯುದ್ಧ ತಯಾರಿಗೆ ಕರೆ ನೀಡಿದೆ. ಅಧ್ಯಕ್ಷ ಕಿಮ್ ಇಲ್ ಸುಂಗ್‌ರ ಕರೆಗೆ ಓಗೊಟ್ಟ 15 ಲಕ್ಷ ಸ್ವಯಂಸೇವಕರು ಮುಂದೆ ಬಂದಿದ್ದಾರೆ. ಹಲವಾರು ಇಂತಹ ಸ್ವಯಂಸೇವಕರು ಮಾತೃಭೂಮಿಗಾಗಿ ಮಡಿಯುವ ಪ್ರತಿಜ್ಞೆಯನ್ನು ತಮ್ಮ ರಕ್ತದಲ್ಲಿ ಬರೆದು ಅಧ್ಯಕ್ಷರಿಗೆ ಕಳಿಸಿದ್ದಾರೆ.

ಫ್ರಾನ್ಸ್‌ನಲ್ಲಿ ಸೋಶಲಿಸ್ಟ್‌ರಿಗೆ ಪರಾಭವ

ಫ್ರೆಂಚ್ ಪಾರ್ಲಿಮೆಂಟಿಗೆ ನಡೆದ ಸಾರ್ವತ್ರಿಕ ಚುನಾವಣೆಯ್ಲಲ್ಲಿ ಫ್ರೆಂಚ್ ಸೋಶಲಿಸ್ಟ್ ಪಕ್ಷಕ್ಕೆ ಭಾರಿ ಪರಾಭವ ಆಗಿದೆ. ಫ್ರಾನ್ಸ್‌ನ ಬಲಪಂಥೀಯ ರಂಗ ಮೂರನೇ ಎರಡು ಭಾಗ ಸೀಟುಗಳಿಸಿ ಅಧಿಕಾರ ಹಿಡಿಯುವುದು ಖಚಿತವಾಗಿದೆ. ಕಳೆದ ವರ್ಷಗಳಿಂದ ಆಳುವ ಪಕ್ಷವಾಗಿದ್ದ ಫ್ರೆಂಚ್ ಸೋಶಲಿಸ್ಟ್ ಪಕ್ಷ ಅಧಿಕಾರ ಕಳೆದುಕೊಂಡಿದೆ. ಸೋಶಲಿಸ್ಟ್‌ರ ಮತ ಸಂಖ್ಯೆ ಶೇಕಡಾ 35 ರಿಂದ ಶೇಕಡಾ 19ಕ್ಕೆ ಕುಸಿದಿದೆ.

ಕ್ರಾಂತಿಯ ಸತ್ವ ತೋರಿದ ಕ್ಯೂಬಾ ಚುನಾವಣೆ

"ಪ್ರಜಾಪ್ರಭುತ್ವದ ಶಕ್ತಿ ಅಳೆಯುವುದು ಪಕ್ಷಗಳ ಸಂಖ್ಯೆಗಳಿಂದಲ್ಲ, ಅದರಲ್ಲಿ ಜನ ಎಷ್ಟು ಭಾಗವಹಿಸುತ್ತಾರೆ ಎಂಬುದರಿಂದ, ಈ ವಿಷಯದಲ್ಲಿ ಕ್ಯೂಬಾ ಯಾವುದೇ ಪ್ರಜಾಪ್ರಭುತ್ವ ವ್ಯವಸ್ಥೆ ಜತೆ ಪೈಪೋಟಿಗೆ ನಿಲ್ಲಬಲ್ಲದು......" ಇದು ಭಾರತದಲ್ಲಿ ಕ್ಯೂಬಾದ ರಾಯಭಾರಿಯವರ ಟಿಪ್ಪಣಿ. ಹಲವು ಪಕ್ಷಗಳು ಇಲ್ಲದಿದ್ದರೆ ಪ್ರಜಾಪ್ರಭುತ್ವ, ಚುನಾವಣೆಗಳಿಗೆ ಅರ್ಥವಿಲ್ಲ ಎಂಬ ಸಾಮ್ರಾಜ್ಯಶಾಹಿ ಟೀಕೆಗೆ ಅವರ ಉತ್ತರ. ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ಎಂದು ಬೀಗುವ ಅಮೆರಿಕಾದಲ್ಲಿ ಅರ್ಧಕ್ಕಿಂತಲೂ ಹೆಚ್ಚು ಮತದಾರರು ಮತದಾನದಲ್ಲಿ ಭಾಗವಹಿಸುವುದೇ ಇಲ್ಲ ಎಂಬುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು.

ಕ್ಯೂಬಾದ ಪಾರ್ಲಿಮೆಂಟು ಜನತಾ ಅಧಿಕಾರದ ರಾಷ್ಟ್ರೀಯ ಅಸೆಂಬ್ಲಿ (National Assembly of people's power-NAPP) ಮೊದಲ ಬಾರಿಗೆ ನೇರವಾಗಿ ಚುನಾಯಿತವಾಗಿದೆ. ಆದರೆ ಇದು ಮೊದಲ ಚುನಾವಣೆಯಲ್ಲ. 1976 ರಿಂದಲೂ ಎನ್.ಎ.ಪಿ.ಪಿ. ಚುನಾಯಿತವಾಗುತ್ತಿತ್ತು. ಆದರೆ ಪರೋಕ್ಷ ಚುನಾವಣೆಗಳಿಂದ. ಜನತೆ ಮುನಿಸಿಪಾಲಿಟಿ ಮತ್ತಿತರ ಸ್ಥಳೀಯ ಸಂಸ್ಥೆಗಳ ಸದಸ್ಯರನ್ನು ಚುನಾಯಿತವಾಗುತ್ತಿತ್ತು. ಅವರು ಎನ್.ಎ.ಪಿ.ಪಿ.ಗೆ ಸದಸ್ಯರನ್ನು ಚುನಾಯಿಸುತ್ತಿದ್ದರು. ಫೆಬ್ರವರಿ 24 ರಂದು ನಡೆದ ಮೊದಲ ನೇರ ಚುನಾವಣೆಯಲ್ಲಿ ಕ್ಯೂಬಾದ ಜನತೆ ಅತ್ಯುತ್ಸಾಹದಿಂದ ಭಾಗವಹಿಸಿದರು. ಶೇಕಡಾ 99.6 ಮತದಾನ ನಡೆಯಿತು.

ಕ್ಯೂಬಾದಲ್ಲಿ ಇಲ್ಲದ ವಿರೋಧಿರಂಗವನು ಸಂಘಟಿಸಲು ಕ್ಯೂಬನ್ ಚುನಾವಣೆ ಬುಡಮೇಲು ಮಾಡಲು ಅಮೆರಿಕ ತನ್ನ ಶಕ್ತಿ ಮೀರಿ ಪ್ರಯತ್ನಿಸಿತು. ಕ್ಯೂಬನ್ ಚುನಾವಣಾ ಆಯೋಗ ಸೂಚಿಸಿದ ಅಭ್ಯರ್ಥಿ ವಿರುದ್ಧ ಮತ ನೀಡುವಂತೆ ಇಲ್ಲವೆ ಚುನಾವಣೆ ಬಹಿಷ್ಕರಿಸುವಂತೆ ಭಾರಿ ಪ್ರಯತ್ನ ನಡೆಸಿತು. ಕ್ಯೂಬಾದತ್ತಾ ಪ್ರಸಾರ ಮಾಡುವ 15 ರೇಡಿಯೋ ಸ್ಟೇಷನ್‌ಗಳು 11 ಸಾವಿರಕ್ಕೂ ಹೆಚ್ಚು ಗಂಟೆಗಳ ಪ್ರಸಾರ ಇದಕ್ಕಾಗಿ ಉಪಯೋಗಿಸಲಾಯಿತು. ಕ್ಯೂಬಾದ ಜನತೆ ಇವೆಲ್ಲವನ್ನು ತಿರಸ್ಕರಿಸಿ ಭಾರಿ ಉತ್ಸಾಹದಿಂದ ಕ್ಯೂಬಾದ ಕ್ರಾಂತಿಯ ಸತ್ವ ಪ್ರದರ್ಶಿಸಿದರು.

ಚುನಾವಣಾ ಆಯೋಗ ಸೂಚಿಸಿದ ಶೇಕಡಾ 88 ಅಭ್ಯರ್ಥಿಗಳು ಭಾರಿ ಬಹುಮತದಿಂದ ಚುನಾಯಿತರಾದರು. 589 ಅಭ್ಯರ್ಥಿಗಳಲ್ಲಿ 585 ಅಭ್ಯರ್ಥಿಗಳ ಶೇಕಡಾ 50 ಕ್ಕಿಂತಲೂ ಹೆಚ್ಚು ಬಹುಮತದಿಂದ ಚುನಾಯಿತರಾದರೂ ಫಿಡೆಲ್ ಕ್ಯಾಸ್ಟ್ರೋ ಶೇಕಡಾ 55 ಮತಗಳಿಸಿ ಚುನಾಯಿತರಾದರು.

ಶೇಕಡಾ 84 ರಷ್ಟು ಅಭ್ಯರ್ಥಿಗಳು ಮೊದಲ ಬಾರಿಗೆ ಪಾರ್ಲಿಮೆಂಟಿಗೆ ಚುನಾಯಿತರಾಗುತ್ತಿದ್ದಾರೆ. 'ಅದೇ ಹಳೆ ತಲೆಗಳು ವರ್ಷಗಟ್ಟಲೆ ಅಧಿಕಾರ ನಡೆಸುತ್ತಾರೆ' ಎಂಬ ಟೀಕೆಗೆ ಇದು ಸರಿಯಾದ ಉತ್ತರ. ಶೇಕಡಾ 23 ಮಹಿಳೆಯರು ಚುನಾಯಿತರಾಗಿದ್ದಾರೆ. 589 ಸದಸ್ಯರಲ್ಲಿ 542 ಕಮ್ಯುನಿಸ್ಟ್ ಪಕ್ಷದ ಸದಸ್ಯರು, 26 ಕಮ್ಯುನಿಸ್ಟ್ ಯೂತ್ ಲೀಗ್ ಸದಸ್ಯರು.

"ಇದು ಇರುಳಲ್ಲೋ ಅಣ್ಣಾ................"

ವಿಜ್ಞಾನ ಲೋಕದ ಅಪೂರ್ವ ಸಾಧನೆ

ವಿಶ್ವ

ಫೆಬ್ರವರಿ ನಾಲ್ಕು 1993, ಯುರೋಪಿನ ಏಳು ದೇಶಗಳಲ್ಲಿ ಬೇರೆ ಹಲವು ದೇಶಗಳಂತೆ ಅಂದು ಕೂಡ ರಾತ್ರಿ ಆದರೆ ಅದೊಂದು ಮಾಮೂಲಿನ ರಾತ್ರಿಯಲ್ಲ ಬದಲಾಗಿ ಅದ್ಭುತ ಇರುಳು!

.... ಆ ಏಳು ದೇಶಗಳ ಹಲವು ಪ್ರದೇಶಗಳಲ್ಲಿನ ಜನರು ಕ್ಷಣಕಾಲ ಇದ್ದಕ್ಕಿದ್ದಂತೆ ಹಗಲಿನ ವಾತಾವರಣವನ್ನು ಅನುಭವಿಸಿದರು. ಖಗ್ರಾಸ ಸೂರ್ಯಗ್ರಹಣವಾದಾಗ ನಡು ಹಗಲಿನಲ್ಲಿ ಮಬ್ಬುಗತ್ತಲೆ ಕವಿಯುವ ರೀತಿಯಲ್ಲಿ. ಇದು ಪ್ರಕೃತಿಯ ಒಂದು ವ್ಯಾಪಾರವಾಗಿದೆ. ಆದರೆ ಕಾರಿರುಳಿನಲ್ಲಿ ಭೂಮಂಡಲದ ಈ ಭಾಗ ಬೆಳಗಿದ್ದು ಹೇಗೇ? ನಭೋ ಮಂಡಲದಲ್ಲಿ ಭಾಸ್ಕರನು ಹಾದಿ ತಪ್ಪಿ ಬಂದನೆ? ಅಲ್ಲ, ಆದರೆ ಅವನ ಕಿರಣಗಳೇ ಈ ನಿಶಾ ಬೆಳಗಿಗೆ ಕಾರಣವಾದವು.

ಹೌದು, ಮಾನವನ ಅದ್ಭುತ ಕಲ್ಪನಾಶಕ್ತಿ ಸಾಕಾರ ರೂಪ ಪಡೆದು ಕಲ್ಪನೆ ವಾಸ್ತವವಾಗಿ ಪರಿಣಮಿಸಿದ ಮಹಾನ್ ಇರುಳು ಅದು. ಮಾನವ ಇತಿಹಾಸದ ದೀರ್ಘ ನಡಿಗೆಯಲ್ಲಿ ಇನ್ನೊಂದು ಮಹತ್ವದ ಹೆಜ್ಜೆ ಗುರುತು ಮೂಡಿದ ದಿನವದು. ಮಾನವನ ಕಲ್ಪನೆ ಹಾಗೂ ಇಚ್ಛಾಶಕ್ತಿಯ ಮುಂದೆ ಸಾಧಿಸಲು ಆಗದಿರುವುದು ಏನೂ ಇಲ್ಲ ಎಂಬುದನ್ನು ಸುವರ್ಣಾಕ್ಷರದಿಂದ ಬರೆದ ಒಂದು ಕೌತುಕಮಯ ರಾತ್ರಿಯದು.

ಇರುಳಿನಲ್ಲೂ ಬೆಳಗಿನ ಉಷೆಯನ್ನು ಮೂಡಿಸಿದವರು ಮಾನವ ಬದುಕಿನಲ್ಲಿ ಸಮಾನತೆಯ ಹೊಂಗಿರಣವನ್ನು ಮೂಡಿಸುವ ಅಪೂರ್ವ ರಾಜಕೀಯ ಪ್ರಯೋಗ ಮಾಡಿದ ಹಿಂದಿನ ಸೋವಿಯತ್ ಒಕ್ಕೂಟದಲ್ಲಿನ ರಷ್ಯಾದ ವಿಜ್ಞಾನಿಗಳು.

ಅಂತರಿಕ್ಷದಲ್ಲಿ ಒಂದು ದೊಡ್ಡ 'ಸೌರ ಕನ್ನಡಿ'ಯನ್ನು ಇರಿಸಿ ರಾತ್ರಿಯನ್ನು ಹಗಲು ಮಾಡುವ ಮಹಾ ಸಾಹಸಕ್ಕೆ ರಷ್ಯಾದ ವಿಜ್ಞಾನಿಗಳು ಫೆಬ್ರವರಿ ನಾಲ್ಕರಂದು ಕೈ ಹಾಕಿದರು. ಅದರಲ್ಲಿ ಸಫಲರಾದರು ಕೂಡ. ಆ ಸೌರಕನ್ನಡಿಯಿಂದ ಪ್ರತಿಫಲನಗೊಂಡ ಸೂರ್ಯನ ಬೆಳಕು ಭುವಿಯ ನಿಶೆ ತುಂಬಿದ ಭಾಗದ ಮೇಲೆ ಬಿದ್ದು ಆ ಪ್ರದೇಶದ ಜನರು ಕತ್ತಲಲ್ಲೂ ಬೆಳಕನ್ನು ಕಂಡು ಪುಳಕಿತರಾದರು. ಈ ಘಟನೆಯಿಂದಾಗಿ ನಿನ್ನೆ ಮೊನ್ನೆಯವರೆಗೂ ಕೇವಲ ಕಲ್ಪಿಸಿಕೊಳ್ಳಲು ಮಾತ್ರ ಸಾಧ್ಯವಿದ್ದ ವೈಜ್ಞಾನಿಕ ಅದ್ಭುತ ವಾಸ್ತವವಾಗಿ ಪರಿಣಮಿಸಿತು. ಇಳೆಯ ಮೇಲೆ ರಾತ್ರಿ ವೇಳೆ ಬೆಳಕು ಹರಿಸಲು ಸಾಧ್ಯ ಎಂಬುದನ್ನು ಈ ಪ್ರಯೋಗ ತೋರಿಸಿಕೊಟ್ಟಿವೆ.

ನಿರಂತರವಾಗಿ ಕೆಲಸ ನಡದು ಪೂರ್ಣಗೊಳ್ಳಬೇಕಾದ ಯೋಜನೆ (ಉದಾಹರಣೆಗೆ ಅಣೆಕಟ್ಟುಗಳು, ವಿದ್ಯುತ್ ಸ್ಥಾವರಗಳು ಅಣುಸ್ಥಾವರಗಳು ಮೊದಲಾದವು) ಗಳಿಗೆ ಈ ಪ್ರಯೋಗದ ಯಶಸ್ಸಿನಿಂದ ಪ್ರಯೋಜನ ಸಿಗಲಿದೆ ಎಂದು ರಷ್ಯಾ ವಿಜ್ಞಾನಿಗಳು ಆಶಯ ವ್ಯಕ್ತಪಡಿಸಿದ್ದಾರೆ. ಮಾನವರಹಿತ ಬಾಹ್ಯಾಕಾಶ ನೌಕೆ 'ಪ್ರೋಗ್ರೆಸ್' ಬೃಹತ್ ಕನ್ನಡಿಯನ್ನು ಆಗಸದಲ್ಲಿ ಇರಿಸಿತ್ತು. ವಿಜ್ಞಾನಿಗಳ ಹತ್ತಾರು ವರ್ಷಗಳ ಶ್ರಮ ಫಲಕೊಟ್ಟವು.

ಪ್ರಯೋಗ ಹಂತದಲ್ಲಿ ಸಫಲತೆ ಕಂಡಿರುವ 'ನಿಶಾ ಬೆಳಗು' ಮನುಕುಲದ ಸೃಜನಶೀಲತೆಯ ಕಿರೀಟದಲ್ಲಿ ಮಿರಮಿರನೆ ಮಿಂಚುವ ಇನ್ನೊಂದು ಅಪೂರ್ವ ಗರಿಯಾಗಿದೆ.

ಹಕ್ಕಿಯಂತೆ ಬಾನಾಡಿಯಾಗುವ, ಮೀನಿನಂತೆ ಚಲಚರ ಆಗುವ, ಬೆಳದಿಂಗಳ ಮುದ ನೀಡುವ ತಿಂಗಳಿನ ಮೇಲೆ ಒಡಾಡುವ........ ಹೀಗೆ ಪ್ರಕೃತಿಯನ್ನು ಸೂಕ್ಷ್ಮವಾಗಿ ಕಂಡು ಅದನ್ನು ಅನುಕರಿಸುವ ಹಾಗೂ ಮಹತ್ತರವಾದುದನ್ನು ಸಾಧಿಸುವ ಕನಸುಗಳ ಕಂಡ ಮಾನವ ಕುಲ ತನ್ನ ಛಲ ಹಾಗೂ ಬುದ್ಧಿಬಲದಿಂದ ಅವುಗಳನ್ನು ಸಾಧಿಸಿದೆ.

ಈ ರೀತಿಯಲ್ಲಿ ಮಾನವ ಜೀವೀ ಅದ್ಭುತವಾದುದನ್ನು ಸಾಧಿಸುವ ಛಲ ತೋರುತ್ತಿರುವಾಗ, 'ಓಂ ಅಸತೋಮಾ ಸದ್ಗಮಯ, ತಮಸೋಮಾ ಜ್ಯೋತಿರ್‌ಗಮಯಾ, ಮೃತ್ಯೋರ್ಮಾ ಅಮೃತಂಗಮಯಾ' ಎಂಬ ಅಮೂಲ್ಯ ಸಂದೇಶ ಸಾರಿದ ವಿಶಾಲ ಭಾರತದಲ್ಲಿ ದೇವರು ಧರ್ಮದ ಹೆಸರಿನಲ್ಲಿ ಮನುಷ್ಯ ಮನುಷ್ಯರ ನಡುವೆ, ವಿವೇಕದ ಬೆಳಕಿನ ಮೇಲೆ ಕತ್ತಲೆಯನ್ನು ಹರಡುವ ಯತ್ನ ನಡೆದಿರುವುದು ವಿಪರ್ಯಾಸ ಅಲ್ಲವೇ?

ಪುಟ 6 ರಿಂದ [illegible]

ಕೋಮುವಾದಿಗಳು ದೆಹಲಿಯ ಗದ್ದುಗೆಗೇರಲು ಜಾತಿ ಮತ ಧರ್ಮಗಳ ಮಧ್ಯ ಗಲಭೆ ಉಂಟುಮಾಡುತ್ತಿರುವುದನ್ನು ನೇರ ಮಾಡಿದ ಹಾಗೆ ಇತ್ತು.

ಜನತೆಯ ನೈಜ ಸಮಸ್ಯೆಗಳಿಗೆ ಕಾರಣ ತಿಳಿಸಿ ಆರ್ಥಿಕ ನೀತಿಯ ಪರಿಣಾಮ ನಮಗೆದುರಾಗಿರುವ ಸಮಸ್ಯೆಗಳು, ಅದಕ್ಕೆ ವಿರೋಧ ಪಕ್ಷವಾಗಿ ಬಿ.ಜೆ.ಪಿ. ನಿರ್ವಹಿಸಿದ ರೀತಿ ತಿಳಿಸಿದಾಗ ಮಾತ್ರ ಜನ ನಮ್ಮ ಕಾರ್ಯಕ್ರಮಕ್ಕೆ ಸ್ಪಂಧಿಸಿದರು. ಒಂದೆರೆಡು ಕಡೆ ಆರ್.ಎಸ್.ಎಸ್.ನವರು ನಮ್ಮ ಮೇಲೆ ದಾಂಧಲೆ ಮಾಡಿದರು. ಜಾಥಾ ನಡೆದ ಕಡೆಗಳಲ್ಲಿ ಮುಸ್ಲಿಮ್ ಬಾಂಧವರಿಂದ ಕಾರ್ಯಕ್ರಮಕ್ಕೆ ಒಳ್ಳೆಯ ಪ್ರತಿಕ್ರಿಯೆ ಬಂತು.

ಕೆ. ಸೂಗೂರಿನಲ್ಲಿ ಡಿ.ವೈ.ಎಫ್.ಐ. ಘಟಕ ಸ್ಥಾಪನೆ

ಇತ್ತೀಚೆಗೆ ಸಿರಗುಪ್ಪ ತಾಲೂಕಿನ ಕೆ. ಸೂಗೂರಿನಲಲಿ ಡಿ.ವೈ.ಎಫ್.ಐ. ಜಿಲ್ಲಾ ಸಮಿತಿ ಸದಸ್ಯರಾದ ಪಿ. ಸಿದ್ದಪ್ಪನವರ ನೇತೃತ್ವದಲ್ಲಿ ಯುವಜನರ ಸಭೆ ನಡೆದು ಡಿ. ವೈ.ಎಫ್.ಐ. ಘಟಕವನ್ನು ಸ್ಥಾಪಿಸಲಾಯಿತು.

ಈ ಘಟಕದ ಪದಾಧಿಕಾರಿಗಳಾಗಿ [illegible] ನವರು ಆಯ್ಕೆಯಾಗಿದ್ದಾರೆ.

ಅಧ್ಯಕ್ಷರು ಕೆ. ನಾಗಲಿಂಗಪ್ಪ, ಉಪಾಧ್ಯಕ್ಷರು ವಿ. ಶ್ರೀನಿವಾಸ, ಕೆ. ಕೊಟ್ರೇಶಪ್ಪ, ಪ್ರ. ಕಾರ್ಯದರ್ಶಿ ಬಿ. ಯಲ್ಲಪ್ಪ, ಸಹಕಾರ್ಯದರ್ಶಿ ಕೆ. ಮೂಕಪ್ಪ, ಖಜಾಂಚಿ ವಿ. ಮಲ್ಲಯ್ಯ, ಸದಸ್ಯರಾಗಿ [illegible] ಕಾಂಗಿಲು ಹೇಮಣ್ಣ, ವೆಂಕಟೇಶ, ಕೃಷ್ಣ [illegible] ಮಲ್ಲಪ್ಪ, ಪಿ. ಸಿದ್ದಪ್ಪ.

KRNM/BGS-405 MAG(2) PRB DECR 319-78/79

ರಕ್ಷಕರೇ ಭಕ್ಷಕರಾದರೇ?

ಪುಟ 1ರಿಂದ

ಜನತಾದಳ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘ ಇತ್ಯಾದಿ ಸಂಘಟನೆಗಳು ಈ ಹೋರಾಟವನ್ನು ಬೆಂಬಲಿಸಿವರು.

ಈ ಹಿನ್ನೆಲೆಯಲ್ಲಿ ಹಿಂದಿನ ಮುಖ್ಯಮಂತ್ರಿಗಳು ನವಂಬರ್ 1992 ರಲ್ಲಿ ಒಂದು ಸರ್ಕಾರಿ ಆದೇಶ ಹೊರಡಿಸಿ ಈ ಬಗ್ಗೆ ವಿಭಾಗಾಧಿಕಾರಿಗಳಿಂದ ಅಧ್ಯಕ್ಷತೆಯ ಮೇಲೆ ತನಿಖೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಹೇಳಿದರು. ಆದರೆ ಆ ಸರಕಾರ ಬಿದ್ದು ಹೋಯಿತು. 'ಕರ್ನಾಟಕದ ಆಡಳಿತಕ್ಕೆ ಶಸ್ತ್ರಚಿಕಿತ್ಸೆ ನಡೆಸುವ ಅಗತ್ಯವಿದೆ' ಎಂದ ಮೊಯಿಲಿ ಈ ತನಿಖೆಯ ಆಜ್ಞೆಯನ್ನು ಹಿಂತೆಗೆದುಕೊಂಡರು. ಈ ಅವ್ಯವಹಾರವೂ ಸೇರಿದಂತೆ ಹಲವಾರು ಆರೋಪಗಳನ್ನು ಹೊತ್ತ, ಬೆಂಗಳೂರು ನಗರದ ವ್ಯಾಪ್ತಿಯಲ್ಲಿರುವ ಜಮೀನು ಭಾರೀ ಬೆಲೆಬಾಳುವ ಆಸ್ತಿಯಾಗಿರುವ ಈ ಕ್ಷೇತ್ರದಲ್ಲಿ ಹಲವಾರು ಸರ್ಕಾರಿ ಗೋಮಾಳ, ಕೆರೆ, ಕುಂಟೆ, ಕಡೆಗೆ ಸ್ಮಶಾನದ ಜಮೀನುಗಳನ್ನು ಬಿಡದೆ ಹರಾಜುಮಾಡಿ ಕೋಟಿಗಟ್ಟಲೆ ಹಣಗಳಿಸಿದರೆಂಬ ಆಪಾದನೆ ಹೊತ್ತ ಈ ಕ್ಷೇತ್ರದ ಶಾಸಕರನ್ನು ಮಂತ್ರಿಯಾಗಿ ತಮ್ಮ ಕ್ಯಾಬಿನೆಟ್‌ಗೆ ಸೇರಿಸಿಕೊಂಡು ಪುರಸ್ಕರಿಸಿದರು ಎಂದು ಹೋರಾಟ ಸಮಿತಿ ಹೇಳಿಕೆಯೊಂದು ತಿಳಿಸಿದೆ. ಇಂತಹುದೇ ಆರೋಪ ಹೊತ್ತ ಕಾಗೋಡು ತಿಮ್ಮಪ್ಪನವರ ಮೇಲೆ ಸಿ.ಓ.ಡಿ. ತನಿಖೆ ಆಜ್ಞೆ ನೀಡಿದ "ಸ್ವಚ್ಛ" ಮುಖ್ಯಮಂತ್ರಿಗಳ ಗೋಸುಂಬೆತನ ಕಾಂಗ್ರೆಸ್ (ಐ)ನ ನಿಷ್ಠಾವಂತರು ಹಾಗೂ ಭಿನ್ನಮತೀಯರ ನಡುವಿನ ದೊಂಬಾರಟದ ಸೂಚಕವಷ್ಟೆ.

ಇರಲಿ, ಮೊಯಿಲಿ ತಮ್ಮ ಅಧಿಕಾರದ ಕಾರಣಗಳಿಗಾಗಿ ತನಿಖೆ ನಡೆಸದಿದ್ದರೂ ಹೋರಾಟ ಸಮಿತಿ ಹೂಡಿ ಗ್ರಾಮದ "ಆಶ್ರಯ" ಯೋಜನೆಯಲ್ಲಿ ನಿವೇಶನ ಪಡೆದ ಫಲಾನುಭವಿಗಳ ಬಗ್ಗೆ ತನ್ನದೇ ತನಿಖೆ ನಡೆಸಿತು. ಸ್ಥಳೀಯ ಭೂಮಾಲಿಕರು, ಕಾರು ಬಂಗಲೆಯುಳ್ಳವರು, ಸರ್ಕಾರಿ ಸ್ವಾಮ್ಯದ ಉದ್ದಿಮೆಗಳಲ್ಲಿರುವ ನೌಕರರು ತಮ್ಮ ಮತ್ತು ತಮ್ಮ ಹೆಂಡತಿಯ ಹೆಸರಲ್ಲಿ ನಿವೇಶನಗಳನ್ನು ಗಿಟ್ಟಿಸಿಕೊಂಡದ್ದು ಕಂಡುಬಂತು. ಒಟ್ಟು 1383 ಫಲಾನುಭವಿಗಳ ಪೈಕಿ ಮಹಿಳೆಯರ ಸಂಖ್ಯೆ ಹೆಚ್ಚು ಏಕೆಂದರೆ ಕುಟುಂಬ ಮುಖ್ಯಸ್ಥರ ವರಮಾನವನ್ನು ಘೋಷಿಸದೆ ಅರ್ಹತೆಯನ್ನು ಸೃಷ್ಟಿಸಿ ಇಂತಹವರಿಗೆ ನಿವೇಶನಕ್ಕೆ ಇಷ್ಟೊಂದು ಹಣ ನಿಗದಿಪಡಿಸಿ ಮಾರಾಟಮಾಡಿರುವುದು ಸ್ಪಷ್ಟವಾಗಿದೆ ಎಂದು ಹೋರಾಟ ಸಮಿತಿ ತಿಳಿಸಿದೆ. ಕೆಲವು ಉದಾಹರಣೆ ನೋಡಿ.

- ಫಲಾನುಭವಿಗಳ ಪಟ್ಟಿಯ ಕ್ರಮಸಂಖ್ಯೆ 1216 ರಲ್ಲಿ ಎಸ್. ಜೆ. ರೆಡ್ಡಿಯವರ ಪತ್ನಿ ಜೆ. ಶೋಭಾರವರಿಗೆ ನಿವೇಶನ ನೀಡಲಾಗಿದೆ. ಇವರು ಹರಿಜನ- ಗಿರಿಜನ ಪಂಗಡಕ್ಕೆ ಸೇರುವುದಿಲ್ಲ ಎಂಬುದು ಸ್ವಯಂವೇದ್ಯ. ಎಸ್.ಜೆ. ರೆಡ್ಡಿಯವರು ಹೂಡಿ ಗ್ರಾಮದ ಮಾಜಿ ಚೇರ್‌ಮ್ಯಾನ್. ಇವರಿಗೆ ಸ್ವಂತ ಮನೆಯಿದೆ ತಿಂಗಳಿಗೆ 4000 ರೂ ಬಾಡಿಗೆ ಪಡೆಯುತ್ತಾರೆ ಹೂಡಿ ಗ್ರಾಮದಲ್ಲಿ ಸುಮಾರು 22 ಎಕ್ರೆ ಜಮೀನಿದೆ ಎಂದು ಹೋರಾಟ ಸಮಿತಿ ಪ್ರಕಟಿಸಿರುವ ಪಟ್ಟಿ ತಿಳಿಸುತ್ತದೆ.
- ಕ್ರಮಸಂಖ್ಯೆ 1182 ಹೆಸರು- ವೇಣುಗೋಪಾಲರಾಜು, ಜಾತಿ- ಕ್ಷತ್ರಿಯ ಈತನಿಗೆ ಸ್ವಂತ ಮನೆ 10 ಎಕ್ರೆ ಜಮೀನಿದೆ.
- ಕ್ರಮಸಂಖ್ಯೆ 1239 ಶ್ರೀನಿವಾಸ ರೆಡ್ಡಿ- ಶೀಮೆಎಣ್ಣೆ ಏಜೆಂಟ್ 3 ಮೆಟಡೋರ್ ವಾಹನಗಳಿವೆ.

ಹೋರಾಟ ಸಮಿತಿ ಇಂತಹ 38 ಮಂದಿ 'ಅರ್ಹ'ರ ಒಂದು ಪಟ್ಟಿಯನ್ನು ಪತ್ರಿಕೆಗಳಿಗೆ ಬಿಡುಗಡೆಮಾಡಿದೆ ಇದರಿಂದ ಈ ವ್ಯವಹಾರದಲ್ಲಿ ಭ್ರಷ್ಟಚಾರ, ಅಕ್ರಮ ನಡೆದಿರುವುದು ಸ್ಪಷ್ಟ.

ಆದ್ದರಿಂದ ಈ ಹಂಚಿಕೆ ಕೂಡಲೇ ರದ್ದಾಗಬೇಕು, ಅಕ್ರಮಗಳ ಬಗ್ಗೆ ಸಿ.ಓ.ಡಿ ತನಿಖೆ ಆಗಬೇಕು, ಭೂಮಿ ಕಳಕೊಂಡವರಿಗೆ ಪರ್ಯಾಯ ವ್ಯವಸ್ಥೆ ಮತ್ತು ಸ್ಥಳೀಯ ನಿರ್ವಸಿತರಿಗೆ ನಿವೇಶನ, ಸಮಗ್ರ ತನಿಖೆಯಾಗುವವರೆಗೆ ನೈತಿಕ ಹೊಣೆ ಸ್ವೀಕರಿಸಿ ತೋಟಗಾರಿಕೆ ಮಂತ್ರಿ ಕೃಷ್ಣಪ್ಪ ಮಂತ್ರಿಮಂಡಲದಿಂದ ಹೊರಗುಳಿಯಬೇಕು ಅಥವಾ ಮುಖ್ಯಮಂತ್ರಿಯವರು ಅವರನ್ನು ಕೈಬಿಡಬೇಕು. ಹಾಗೂ ಜನ-ವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವ ಜಿಲ್ಲಾಧಿಕಾರಿ ಹಾಲಪ್ಪನವರನ್ನು ಕೂಡಲೇ ಅಮಾನತ್ತುಗೊಳಿಸಿ ವಿಚಾರಣೆ ನಡೆಸಬೇಕು ಎಂಬ ಐದು ಒತ್ತಾಯಗಳನ್ನಿಟ್ಟು ಹೋರಾಟ ಸಮಿತಿ ಮಾರ್ಚ್ 18 ರಿಂದ ಧರಣಿ ಹೋರಾಟ ಆರಂಭಿಸಿತು.

ಮಾರ್ಚ್ 29ರಂದು ಪೋಲಿಸ್ ದೌರ್ಜನ್ಯದ ವಿರುದ್ಧ ಪ್ರತಿಭಟಿಸಿ ಪೋಲಿಸ್ ಠಾಣೆಯ ಪಿಕೆಟಿಂಗ್ ನಡೆಸಲು ಹೋರಾಟ ಸಮಿತಿ ನಿರ್ಧರಿಸಿದೆ.

ಭಗತ್ ಸಿಂಗ್ ಹುತಾತ್ಮ ದಿನಾಚರಣೆ ಅಂಗವಾಗಿ "ಮೈತ್ರಿ ಜ್ಯೋತಿ"

ಮಾರ್ಚ್ 23ರ ಸಂಜೆ ಸೂರ್ಯ ಅಸ್ತಮಯವಾಗುತ್ತಿದಂತೆ ನೂರಾರು ಯುವಜನರು ಕ್ರಾಂತಿಕಾರಿ ಭಗತ್‌ಸಿಂಗ್ ರವರ ಹುತಾತ್ಮ ದಿನದಂದು ಬೆಂಗಳೂರಿನಲ್ಲಿ ಮೈಸೂರು ಬ್ಯಾಂಕ್ ವೃತ್ತದಿಂದ ರಸ್ತೆ ಮಧ್ಯದಲ್ಲಿ ಸಾಲಾಗಿ ನಿಂತು ಕೋಮು ಸೌಹಾರ್ದತೆಗಾಗಿ "ಮೈತ್ರಿ ಜ್ಯೋತಿ" ಬೆಳಗಿಸಿದರು ಈ ಕಾರ್ಯಕ್ರಮವನ್ನು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಮಾಜಿ ಮಹಾಪೌರರಾದ ಶ್ರೀ. ಜಿ. ಲಿಂಗಯ್ಯ ಉದ್ಘಾಟಿಸಿದರು.

ಡಿ.ವೈ.ಎಫ್.ಐ. ರಾಜ್ಯ ಕಾರ್ಯದರ್ಶಿ ಎಸ್.ವೈ.ಗುರುಶಾಂತ್ ರವರು ಮಾತನಾಡಿ ಭಗತ್‌ಸಿಂಗ್‌ರವರಿಗೆ ನಿಖರವಾದ ಕ್ರಾಂತಿಕಾರಿ ಆಲೋಚನೆ, ವೈಚಾರಿಕ ಪ್ರಜ್ಞೆ ಇತ್ತು. ಭಗತ್‌ಸಿಂಗ್‌ರವರನ್ನು ಬ್ರಿಟಿಷರು ನೇಣುಗಂಬಕ್ಕೇರಿಸುವ ಸಂದರ್ಭದಲ್ಲಿ ಭಗತ್‌ಸಿಂಗ್ ತಂದೆ ಮಗನ ಬಿಡುಗಡೆಗಾಗಿ ಯೋಚಿಸಿ ಬ್ರಿಟಿಷರಿಗೆ ಪತ್ರಬರೆದಾಗ ಅವರನ್ನು ಖಂಡಿಸಿ ನೀನು ನನ್ನ ರಾಷ್ಟ್ರ ಪ್ರೇಮ ಅರಿಯದೆ ಈ ಜೀವ ಭಿಕ್ಷೆ ಬೇಡುವುದನ್ನು ನಾನು ಖಂಡಿಸುತ್ತೇನೆಂದು ಪತ್ರ ಬರೆದ ಮಹಾನ್ ದೇಶ ಪ್ರೇಮಿ ಭಗತ್‌ಸಿಂಗ್ ಎಂದರು.

ನೇಣುಗಂಬಕ್ಕೇರುವ ಕೆಲ ಸಮಯದ ಹಿಂದೆಯೂ "ಲೆನಿನ್" ರವರ ಜೀವನ ಚರಿತ್ರೆಯನ್ನು ಓದುತ್ತಿದ್ದು ನೇಣುಗಂಬಕ್ಕೇರುವಾಗ ಅವರು ಕೊನೆಯದಾಗಿ ಇನ್‌ಕ್ವಿಲಾಬ್ ಜಿಂದಾಬಾದ್ ಎಂದು ಕೂಗಿ ಈ ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣ ತ್ಯಾಗ ಮಾಡಿದ್ದರು.

ಇಂತಹ ದೇಶ ಪ್ರೇಮವನ್ನು ಯುವಕರು ಬೆಳಸಿಕೊಂಡು, ಡಿ.ವೈ.ಎಫ್.ಐ. ಎಸ್.ಎಫ್.ಐ. ಜೆ.ಎಂ.ಎಸ್. ನಂತಹ ಪ್ರಗತಿಪರ ಸಂಘಟನೆ ಸೇರಿ ಕೋಮುವಾದಿಗಳಿಂದ ಭಯೋತ್ಪಾದಕತೆಯಿಂದ ಬಂದಿರುವ ಅಪಾಯದ ವಿರುದ್ಧ ನಾವು ಸತತ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಮಹಾತ್ಮಗಾಂಧಿಯವರು 'ಕ್ವಿಟ್ ಇಂಡಿಯಾ ಚಳುವಳಿ'ಗೆ ಕರೆ ನೀಡಿದಾಗ ಹಲವಾರು ಕಡೆ ಅನೇಕ ಸ್ವಾತಂತ್ರ್ಯ ವೀರರು ಬ್ರಿಟಿಷರ ಗುಂಡಿಗೆ ಬಲಿಯಾದರು. ಆ ಸಂದರ್ಭದಲ್ಲಿ ಬೆಂಗಳೂರಿನ ಮೈಸೂರು ಬ್ಯಾಂಕ್ ಚೌಕದಲ್ಲೂ ಬ್ರಿಟಿಷರ ಗುಂಡಿಗೆ ಶಂಕರ್ ಮತ್ತಿತರರು ಬಲಿಯಾದರು. ಇವರ ಸ್ಮಾರಕಾರ್ಥವಾಗಿ ಮೈಸೂರು ಬ್ಯಾಂಕ್ ಚೌಕದಲ್ಲಿ "ಹುತಾತ್ಮ ಸ್ತಂಭ" ಇದೆ.

ಇಂತಹ ಪವಿತ್ರ ಚೌಕಕ್ಕೆ "ಹುತಾತ್ಮ ಚೌಕ" ಎಂದು ಹೆಸರಿಡಬೇಕೆಂದು ಡಿ.ವೈ.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಗೋಪಾಲ ಕೃಷ್ಣ ಒತ್ತಾಯಿಸಿದರು.

ಈ ಕಾರ್ಯಕ್ರಮವು ಡಿ.ವೈ.ಎಫ್.ಐ. ಶ್ರೀ ರಾಮಪುರ ಸಂಗಾತಿಗಳಿಂದ ಕ್ರಾಂತಿಗೀತೆಗಳನ್ನು ಹಾಡುವುದರೊಂದಿಗೆ ಪ್ರಾರಂಭವಾಯಿತು. ಕೆ.ಎಸ್.ವಿಮಲ ಜನವಾದಿ ಮಹಿಳಾ ಸಮಿತಿ ಸ್ವಾಗತಿಸಿದರು. ಗೋಪಾಲಕೃಷ್ಣ (ಡಿ.ವೈ.ಎಫ್.ಐ. ಜಿಲ್ಲಾ ಕಾರ್ಯದರ್ಶಿ) ಪ್ರಸ್ತಾವನೆ ಮಾಡಿದರು. ರಾಮಕೃಷ್ಣ ವಂದಿಸಿದರು.

ತುಮಕೂರಿನಲ್ಲಿ ಯಶಸ್ವಿ ಮೈತ್ರಿಜ್ಯೋತಿ ಕಾರ್ಯಕ್ರಮ

ಡಿ.ವೈ.ಎಫ್.ಐ, ಎಸ್.ಎಫ್.ಐ. ನ ತುಮಕೂರು ಜಿಲ್ಲಾ ಸಮಿತಿಗಳು ಜಂಟಿಯಾಗಿ ನಡೆಸಿದ ಕಾರ್ಯಕ್ರಮವನ್ನು ಹಿರಿಯರಾದ ಶ್ರೀ ಚನ್ನಪ್ಪನವರು ಮೈತ್ರಿ ಜ್ಯೋತಿ ಬೆಳಗಿಸುವ ಮೂಲಕ ಉಧ್ಘಾಟಿಸಿದರು. ಅನಂತರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸುಮಾರು 100 ಕ್ಕೂ ಹೆಚ್ಚು ವಿದ್ಯಾರ್ಥಿ ಯುವಜನರು ಹಾಗೂ ಸಾರ್ವಜನಿಕರು ಒಬ್ಬರಿಂದೊಬ್ಬರು ಜ್ಯೋತಿಯನ್ನು ಹತ್ತಿಸಿ ಮೈತ್ರಿ ಭಾವ ಬಿತ್ತಿಸುವ ಕಾರ್ಯಕ್ರಮವನ್ನು ಯಸಸ್ವಿಗೊಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಡಿ.ವೈ.ಎಫ್.ಐ ಜಿಲ್ಲಾ ಉಪಾಧ್ಯಕ್ಷರಾದ ಕಾಂ. ಸುಬ್ರಮಣ್ಯಂ ಮಾತನಾಡಿದರು.

ಕಾಂ. ಸೈಯದ್ ಮುಜೀಬ್. ಎಸ್.ಎಫ್.ಐ. ಜಿಲ್ಲಾ ಕಾರ್ಯದರ್ಶಿಗಳು ಮಾತನಾಡುತ್ತಾ ಭಗತ್‌ಸಿಂಗ್‌ರ ಚಿಂತನೆಗೆ ಪ್ರಸ್ತುತಯ ಕುರಿತು ತಿಳಿಸಿ ಕೋಮುವಾದಿ ಶಕ್ತಿಗಳು ಭಯದ ವಾತವರಣವನ್ನು, ಪರಸ್ಪರ ಅಪನಂಬಿಕೆಯನ್ನು ಉಂಟುಮಾಡುತ್ತಿರುವ ಈ ಸಂದರ್ಭದಲ್ಲಿ ಜನರಲ್ಲಿ ಮೈತ್ರಿ, ಸೊಹೋದರರ ಭಾವನೆಯನ್ನು ಮೂಡಿಸುವ ಅವಶ್ಯಕತೆ ಇದೆ ಎಂದರು.

ಡಿ.ವೈ.ಎಫ್.ಐ. ಸಹಕಾರ್ಯದರ್ಶಿ ಕಾಂ. ಕೆ. ಬಿ. ಸ್ವಾಮಿ ಸ್ವಾಗತಿಸಿದರು. ಕೊನೆಯಲ್ಲಿ ಎಸ್.ಎಫ್.ಐ. ಜಿಲ್ಲಾ ಅಧ್ಯಕ್ಷರಾದ ಕೆ.ಎಸ್.ಉಮೇಶ್ ವಂದಿಸಿದರು.

ತುರುವೆಕೆರೆ

ಸ್ವತಂತ್ರ ಹೋರಾಟಕ್ಕ ಚಾಲನೆ ನೀಡಿದ ಸಂಗಾತಿ ಭಗತ್‌ಸಿಂಗ್ ಸಮಾಜವಾದಿ ವ್ಯವಸ್ಥೆಯ ಕನಸು ಕಂಡಿದ್ದರು. ಧರ್ಮನಿರಪೇಕ್ಷ ಸಮಾಜದ ಕಲ್ಪನೆ ಹೊಂದಿದ್ದರು. ಆದರೆ ಅಂತಹ ವ್ಯಕ್ತಿ ಹುಟ್ಟಿದ ರಾಷ್ಟ್ರದಲ್ಲಿ ಕೋಮುವಾದ ಹೆಚ್ಚುತ್ತಿದೆ. ಇದು ತುಂಬಾ ವಿಷಾದನೀಯ ಎಂದು ಎಸ್.ಎಫ್.ಐ. ರಾಜ್ಯ ಸಮಿತಿ ಸದಸ್ಯ ಇ. ಬಸವರಾಜು ಅಭಿಪ್ರಾಯಪಟ್ಟರು. ಭಗತ್‌ಸಿಂಗ್ ಆಶಯಗಳನ್ನು ಹೊತ್ತು ಸಾಗುತ್ತಿರುವ ನಾವು ಎತ್ತ ಸಾಗುತ್ತಿದ್ದೇವೆ, ನಮ್ಮ ದಿಕ್ಕು ಯಾವುದಿರಬೇಕೆಂದು ಗುರ್ತಿಸಿಕೊಳ್ಳಲು ಈ ಸಂದರ್ಭ ಸಹಾಯವಾಗಲಿದೆ ಎಂದು ಅವರು ತಿಳಿಸಿದರು. ಅವರು ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ. ಸಂಘಟನೆಗಳು ಭಗತ್‌ಸಿಂಗ್ ಹುತಾತ್ಮದಿನವನ್ನು ಆಚರಿಸಲು ಜಂಟಿಯಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತಾನಾಡುತ್ತಿದ್ದರು.

ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷರಾದ ಶ್ರೀ ಶಿವರಾಮಯ್ಯನವರು ಮತ್ತೊಬ್ಬ ಅತಿಥಿಯಾಗಿ ಮಾತನಾಡಿದರು.

ಎಸ್.ಎಫ್.ಐ. ತಾಲ್ಲೂಕು ಅಧ್ಯಕ್ಷ ಶಿವರಾಮಯ್ಯ ಹಾಗೂ ಪ್ರಥಮ ದರ್ಜೆ ಕಾಲೇಜಿನ ಸಾಂಸ್ಕೃತಿಕ ಸಂಘದ ಸಹಕಾರ್ಯದರ್ಶಿ ರಮೇಶ್ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕರಾದ ಭೈರಪ್ಪಾಜಿ ಮಾತನಾಡಿ ಭಗತ್‌ಸಿಂಗ್ ಸ್ವಾತಂತ್ರವಿಲ್ಲದಿದ್ದ ರಾಷ್ಟ್ರದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದರು ಆದರೆ ನಾವು ಸ್ವತಂತ್ರ ಭಾರತದಲ್ಲಿ ನಡೆಯುತ್ತಿರುಪ ಅನ್ಯಾಯಗಳ ವಿರುದ್ಧ ಹೋರಾಡಲು ಹಿಂಜರಿಯುತ್ತೇವೆ. ಇದು ತೊಲಗಬೇಕೆಂದರು.

ಸತೀಶ್ ಸಂಗಡಿಗರು ಕ್ರಾಂತಿ ಗೀತೆ ಹಾಡಿದರು. ತಾಲ್ಲೂಕು ಎಸ್.ಎಫ್.ಐ. ಉಪಾಧ್ಯಕ್ಷ ಕು. ಪ್ರೇಮಲತ ಸ್ವಾಗತಿಸಿ ಸಹಕಾರ್ಯದರ್ಶಿ ಕು. ಮೇರಿ ತೆರಿಸ ವಂದಿಸಿದರು.

ಮೇಲಿನ ಕಾರ್ಯಕ್ರಮವದ ನಂತರ ಹುತಾತ್ಮ ಜ್ಯೋತಿಯನ್ನು ಶಿವರಾಮಯ್ಯ ಹತ್ತಿಸಿದರು. ನಂತರ ಬಸ್‌ಸ್ಟಾಂಡ್ ಬಳಿಯ ವೃತ್ತದ ತನಕ ಸಾಗಿದ ಮೆರವಣಿಗೆ ವೃತ್ತಕಾರವಾಗಿ ನಿಂತು ಒಬ್ಬರಿಂದ ಮತ್ತೊಬ್ಬರಿಗೆ ದೀಪಗಳನ್ನು ಹಚ್ಚುವ ಮೂಲಕ ಮೈತ್ರಿ ಜ್ಯೋತಿ ಬೆಳಗಿಸಿದರು. ಅನೇಕ ಸಾರ್ವಜನಿಕರೂ ಈ ಸಂದರ್ಭದಲ್ಲಿ ಭಾಗವಹಿಸಿದ್ದರು.

ಅಸಂಘಟಿತ ಕಾರ್ಮಿಕರ ರಾಜ್ಯವ್ಯಾಪಿ ಮುಷ್ಕರ

ದಿನಾಂಕ 15-3-1993 ರಂದು ಬೆಳಿಗ್ಗೆ 8-30 ಕ್ಕೆ ಸಪ್ತಗಿರಿ ಡಿಸ್ಟಿಲರೀಸ್ ಕಾರ್ಖಾನೆಯ ಬಳಿ ಸಪ್ತಗಿರಿ, ಸಿಟಿ ಡ್ರಿಂಕ್ಸ್, ಸಿಸ್ಟಮ್ಸ್, ಜೈಹಿಂದ್ ಮಾರ್ಬಲ್ಸ್, ಕಿರಣ್ ಇಂಡಸ್ಟ್ರೀಸ್, ಫುಡ್ ಟೆಕ್, ದೇವಿಕಿರಣ್, ಇ.ಎಂ.ಎಲ್. ಹಾಗೂ ಇನ್ನಿತರ ಕಾರ್ಖಾನೆಗಳ ಕಾರ್ಮಿಕರು ಸೇರಿ ಕುಂಬಳಗೋಡು ಕೈಗಾರಿಕಾ ಪ್ರದೇಶದ ಎರಡನೇ ಹಂತದಲ್ಲಿರುವ ಮುಷ್ಕರದಲ್ಲಿ ಭಾಗವಹಿಸದ ಕಾರ್ಖಾನೆಗಳ (ಜಗದಾಳೆ ಗ್ರೂಪ್ಸ್ ಕಂಪನಿಗಳು- ಅಮೃತ್ ಡಿಸ್ಟಲ್ಲರೀಸ್, ಅಸೋಸಿಯೇಟೆಟ್ ಡ್ರಗ್ ಕಂಪನಿ, ಮತ್ತು ಜಗದಾಳೆ ಫುಡ್ಸ್) ಮುಂದೆ ಮತ ಪ್ರದರ್ಶನ ನಡೆಸಿ, ಆ ಕಾರ್ಖಾನೆಗಳ ಕಾರ್ಮಿಕರಿಗೆ ತಿಳುವಳಿಕೆಯನ್ನು ಕೊಟ್ಟು, ಮುಷ್ಕರದಲ್ಲಿ ಪಾಲ್ಗೊಳ್ಳುವಂತೆ ಮಾಡಿದರು. ನಂತರ ಕುಂಬಳಗೋಡು ಕೈಗಾರಿಕಾ ಪ್ರದೇಶದ ಒಂದನೇ ಹಂತದಲ್ಲಿಯ ಕಾರ್ಮಿಕರನ್ನೊಳಗೊಂಡು ಕಾರ್ಮಿಕರು "ಗುತ್ತಿಗೆ ಪದ್ಧತಿ ರದ್ದಾಗಲಿ," "ಅಸಂಘಟಿತ ಕಾರ್ಮಿಕರೇ ಒಂದಾಗಿ ಹೋರಾಟಕ್ಕೆ ಮುಂದಾಗಿ", "1250 ರೂ. ಕನಿಷ್ಠ ಕೂಲಿ ಜಾರಿಯಾಗಲೇ ಬೇಕು" "ಅಸಂಘಟಿತ ಕಾರ್ಮಿಕರ ರಾಜ್ಯವ್ಯಾಪಿ ಮುಷ್ಕರ ಯಶಸ್ವಿಯಾಗಲಿ" ಕೇಂದ್ರ ಸರ್ಕಾರದ ಹೊಸ ಆರ್ಥಿಕ, ಕೈಗಾರಿಕಾ ಮತ್ತು ಕಾರ್ಮಿಕ ವಿರೋಧಿ ನೀತಿಗಳನ್ನು ಧಿಕ್ಕರಿಸಿ ಎಂಬ ಘೋಷಣೆಗಳನ್ನು ಕೂಗುತ್ತಾ ಬಂದ ರ್‍ಯಾಲಿಯನ್ನು ಕುಂಬಳಗೋಡಿನ ಕಾರ್ಮಿಕ ಸಂಘಗಳ ಕಛೇರಿಯ ಬಳಿ ಬಹಿರಂಗ ಸಭೆಯನ್ನಾಗಿ ಪರಿವರ್ತಿಸಲಾಯಿತು. ಇದರಲ್ಲಿ ಸುಮಾರು 1,000 ಜನ ಕಾರ್ಮಿಕರೂ ಸೇರಿದಂತೆ ಬಹಳಷ್ಟು ಸಾರ್ವಜನಿಕರೂ ಪಾಲ್ಗೊಂಡಿದ್ದರು. ಸಭೆಯ ಅಧ್ಯಕ್ಷತೆಯನ್ನು ಕುಂಬಳಗೋಡು ಕಾರ್ಮಿಕ ಸಂಘಗಳ ಅಧ್ಯಕ್ಷರಾದ ಕಾಂ. ಎಂ. ರಾಜಣ್ಣನವರು ವಹಿಸಿದ್ದರು. ಈ ಸಭೆಗೆ ಕಾಂ. ಹರೀಶ್ ರವರು ಸ್ವಾಗತ ಬಯಸಿದರು.

ನಂತರ ಸಭೆಯನ್ನುದ್ದೇಶಿಸಿ ಮಾತನಾಡಿದ ಕಾಂ. ಎಸ್.ವರಲಕ್ಷ್ಮಿಯವರು ಗುತ್ತಿಗೆ ಪದ್ಧತಿಯ ಬಗ್ಗೆ ವಿವರಿಸುತ್ತಾ ಗುತ್ತಿಗೆ ಕೆಲಸಗಾರರಿಗೆ ಕೆಲಸ ಭದ್ರತೆ ಇಲ್ಲ. ಅಗತ್ಯ ಸೇವಾ ಸೌಲಭ್ಯಗಳಿಲ್ಲ. ಖಾಯಂ ಕೆಲಸಗಾರರು ಮಾಡುವ ಕೆಲಸವನ್ನು ಮಾಡಿದರೂ ಸಹ ಅವರಿಗೆ ಸಿಕ್ಕುವುದು ಬರೀ 10 ರಿಂದು 15 ರೂಗಳಷ್ಟೆ ಆದರೆ ಇವರನ್ನು ಒದಗಿಸಿ ಕೊಡುವ ಗುತ್ತಿಗೆದಾರನಿಗೆ ಏನೂ ಶ್ರಮವಿಲ್ಲದೆ ಪ್ರತಿ ಕಾರ್ಮಿಕನಿಗೆ ಕನಿಷ್ಠ 10 ರೂ ಗಳಾದರೂ ಕಮಿಶನ್ ಸಿಕ್ಕುತ್ತದೆ. ಬೆಲೆ ಏರುತ್ತಿರುವ ಇಂದಿನ ದಿನಗಳಲ್ಲಿ ಕಾರ್ಮಿಕರಿಗೆ ಸಿಗುವ ಈ ವೇತನ ಏತಕ್ಕೂ ಸಾಲದಾಗಿ ಜೀವನ ನಡೆಸುವುದು ಕಷ್ಟವಾಗಿದೆ. ಆದ್ದರಿಂದ ಗುತ್ತಿಗೆ ಪದ್ಧತಿ ತೊಲಗಿಸಲು ಒಂದು ಪ್ರಬಲ ಹೋರಾಟ ರೂಪಿಸಲು ಎಲ್ಲಾ ಕಾರ್ಮಿಕರು ಜತೆಗೂಡಬೇಕೆಂದು ಕರೆಯಿತ್ತರು.

ನಂತರ ಮಾತನಾಡಿದ ಕಾಂ. ಎಸ್. ಆರ್.ಕೆ. ಪ್ರಸಾದ್‌ರವರು ಅಸಂಘಟಿತ ಮತ್ತು ಸಂಘಟಿತ ಕಾರ್ಮಿಕರ ನಡುವಿಗೂ ವ್ಯತ್ಯಾಸಗಳನ್ನು ವಿವರಿಸುತ್ತಾ, ಈ ದೇಶದಲ್ಲಿ ಬಹಳ ಕಡಿಮೆ ಕಾರ್ಮಿಕರು ಸಂಘಟಿತರಾಗಿದ್ದಾರೆ. ಸರ್ಕಾರ ತಾನೇ ನಿಗದಿಪಡಿಸಿದ ಕನಿಷ್ಠಕೂಲಿಯನ್ನು ಜಾರಿಗೊಳ್ಳುವಂತೆ ಮಾಡಲು ಹಿಂದೆ ಮುಂದೆ ನೋಡುತ್ತಿದೆ. ಇದರಿಂದಾಗಿ ಮಾಲಿಕರು ಕಾರ್ಮಿಕರನ್ನು ಶೋಷಿಸಲು ದಾರಿ ಮಾಡಿ ಕೊಟ್ಟಾಂತಾಗಿದೆ ಎಂದರು.

ಕೇಂದ್ರಸರ್ಕಾರದ ಆರ್ಥಿಕ ನೀತಿಗಳ ದುಷ್ಪರಿಣಾಮಗಳ ಬಗ್ಗೆ ಕಾರ್ಮಿಕರನ್ನು ವಂಚಿಸಿ ಮಾಲೀಕರುಗಳಿಗೆ ಲಾಭ ಮಾಡಿಕೊಡುವ ಐ.ಎಂ.ಎಫ್. ವಿಶ್ವಬ್ಯಾಂಕ್‌ಗಳ ಒತ್ತಡಕ್ಕೆ ಮಣಿದ ನೀತಿಯ ಬಗ್ಗೆ ವಿವರಿಸಿದರು.

ಅಸಂಘಟಿತ ಕಾರ್ಮಿಕರ ಹಾಗೂ ಗುತ್ತಿಗೆ ಕಾರ್ಮಿಕರ ಮುಷ್ಕರವನ್ನು ಕುಂಬಳಗೋಡು ಕೈಗಾರಿಕಾ ಪ್ರದೇಶದಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗುವಂತೆ ಸಹಕರಿಸಿದ ಎಲ್ಲರಿಗೂ ಕಾಂ. ಎಲ್. ವೆಂಕಟೇಶ್‌ರವರು ವಂದನೆಗಳನ್ನರ್ಪಿಸಿದ ನಂತರ ಸಭೆ ಮುಕ್ತಾಯಗೊಂಡಿತು.

ಬೆಳೆಯುತ್ತಿರುವ....

ಪುಟ 1ರಿಂದ

ರದ ರಾಜ್ಯಗಳ ನಾಯಕರು ಎತ್ತುತ್ತಿದ್ದಾರೆ ಮತ್ತು ಅರ್ಜುನ್‌ಸಿಂಗ್‌ರವರ ಸುತ್ತಾ ನೆರೆಯುತ್ತಿದ್ದಾರೆ.

ಈ ಕ್ರಿಯೆ ಸಾಗಿರುವಂತೆಯೇ ಕಾಂಗ್ರೆಸ್‌ನಲ್ಲಿ ಮನುಷ್ಯ ರಕ್ತದ ರುಚಿಕಂಡ ಹುಲಿ ಮತ್ತೆ ಮನುಷ್ಯರ ರಕ್ತವನ್ನೇ ಬಯಸುವಂತೆ ಅಧಿಕಾರದ ರುಚಿಕಂಡ ಅಧಿಕಾರಕ್ಕಾಗಿಯೇ ಅದರಲ್ಲಿರುವ, ಅದಕ್ಕಾಗಿ ಮಾತ್ರ ಬಹಿರಂಗ ಗುಂಪು ಕಚ್ಚಾಟ ನಡೆಸುವ ಸಂದರ್ಭ ಸಾಧಕ ಕಾಂಗ್ರೆಸ್ಸಿಗರು ಸರ್ವಾಧಿಕಾರಿ ಕೇಂದ್ರದ ಸುತ್ತ ನೆರೆದಿದ್ದಾರೆ. ಅದರಲ್ಲಿಯೂ ಕಾಂಗ್ರೆಸ್ ಅಧಿಕಾರದಲ್ಲಿರುವ ದಕ್ಷಿಣ ಭಾರತದ ರಾಜ್ಯಗಳಲ್ಲಿ ಕಾಂಗ್ರೆಸ್ ಒಗ್ಗಟ್ಟಾಗಿರಬೇಕು. ದೇಶದ ಬಿಕ್ಕಟ್ಟಿಗೆ ಪ್ರತಿಕ್ರಿಯಿಸದ ಒಗ್ಗಟ್ಟು ಯಾಕಾಗಿ ಎಂಬ ಪ್ರಶ್ನೆ ಇವರಿಗೆ ಏಳುತ್ತಿಲ್ಲ ಬದಲಾಗಿ ಅದೇ ಬಹಳ ಮುಖ್ಯ ಎಂದು ಇವರು ಹೊರಟಿದ್ದಾರೆ. ಕಾಂಗ್ರೆ ಬಿಕ್ಕಟ್ಟನ್ನು ಒಗ್ಗಟ್ಟು ಅದರ ವಿರುದ್ಧ ಭಿನ್ನಮತದ ಪ್ರಶ್ನೆಯಾಗಿ ಪರಿವರ್ತಿಸಲು ಶ್ರಮಿಸುತ್ತಿದ್ದಾರೆ.

ಈಗ ಸೂಚನೆಗಳು ಕಾಣುತ್ತಿರುವಂತೆ ಕಾಂಗ್ರೆಪಕ್ಷ ಮತ್ತೆ ತನ್ನ ನೆಚ್ಚಿನ ನಾಯಕನ ಸಮರ್ಥ ನಾಯಕತ್ವವನ್ನು ಹಾಡಿ ಹೊಗಳುವ ನಿರ್ಣಯಗಳನ್ನು ಅಂಗೀಕರಿಸಿ ಭಿನ್ನಮತೀಯರನ್ನು ಮೂಲೆಗುಂಪಾಗಿಸುವ ಪ್ರಯತ್ನ ನಡೆಸಿದರೂ ಈ ಸಂಘರ್ಷ ಮತ್ತಷ್ಟು ತೀವ್ರವಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

ಆದರೆ ಈ ಎಲ್ಲಾ ಚರ್ಚೆಯ ನಡುವೆ ಕಾಂಗ್ರೆನ ಆರ್ಥಿಕ ನೀತಿಗಳು ಅದು ಜನರಿಗೆ ಉಂಟುಮಾಡುತ್ತಿರುವ ಸಂಕಟಗಳು ಚರ್ಚೆಗೆ ಬಂದಿಲ್ಲ ಎಂಬುದೂ ಗಮನಿಸಬೇಕಾದ ಸಂಗತಿ. ಕಾಂಗ್ರೆಸ್ ನೆಹರೂರವರ ನಾಯಕತ್ವದಲ್ಲಿ ತುಳಿದ ಸ್ವಾವಲಂಬನೆ, ಜಾತ್ಯಾತೀತತೆಯ ಹಾದಿಯನ್ನು ಪ್ರಶ್ನೆಯನ್ನು ಒಟ್ಟಾಗಿ ಎತ್ತಿಕೊಳ್ಳದೆ ತನ್ನ ಬಿಕ್ಕಟನ್ನು ಪರಿಹರಿಸಿಕೊಳ್ಳಲಾಗುವುದಿಲ್ಲ ಎಂಬುದನ್ನು ಭಿನ್ನಮತೀಯರೆನ್ನಿಸಿಕೊಂಡವರೂ ಅರಿತುಕೊಳ್ಳಬೇಕಾಗಿದೆ.

ಭಾರತ ಕಮ್ಯುನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ ಪರವಾಗಿ ಮುದ್ರಣ ಮತ್ತು ಪ್ರಕಾಶನ ವಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: 12, 18ನೇ ಅಡ್ಡರಸ್ತೆ, ತಾನಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು - 560 027, ಫೋನ್: 236462 ಸಂಪಾದಕರು: ವಿ.ರಾಮಚಂದ್ರರಾವ್